
ಜನವರಿ 2019

₹ 15/-

# ಯುಗರಶ್ಮಿ

ತ್ರೈಮಾಸಿಕ




- ಜಾಗತಿಕ ಶಾಂತಿಸ್ಥಾಪನೆಯ ಮಾರ್ಗಗಳು
- ಯಥಾರ್ಥ ಅಹ್ಮದಿಯರ ಗುಣಲಕ್ಷಣಗಳು
- ಇಸ್ಲಾಮಿನ ಸಂದೇಶ
- ಮಹಿಳೆಯರೊಂದಿಗೆ ವರ್ತನೆ – ಇಸ್ಲಾಮ್ ಉಪದೇಶಗಳು
- ದೇವನು 21ನೇ ಶತಮಾನದಲ್ಲಿ
- ಹಝ್ರತ್ ಈಸಾ ಮಸೀಹ್[ಅ] ಮೃತ್ಯುರಾದ ಬಗ್ಗೆ ಚರ್ಚೆ

"ಊರುಗಳನ್ನು, ಅಲ್ಲಿ ನೆಲೆಸಿರುವವರು ಸಜ್ಜನರಾಗಿದ್ದರೆ, ನಿನ್ನ ಪ್ರಭು ಅನ್ಯಾಯವಾಗಿ ನಾಶಪಡಿಸಲಾರ."
– (ಪವಿತ್ರ ಖುರ್‌ಆನ್ 11 : 118)

# ಯುಗರಶ್ಮಿ

ವಿಷಯ ಸೂಚಿಕೆ


| ವಿಷಯ | ಪುಟ |
| --- | --- |
| ☆ ನಿರರ್ಥಕ ನಿರೀಕ್ಷೆ | 1 |
| ☆ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು | 2 |
| ☆ ಜಾಗತಿಕ ಶಾಂತಿಸ್ಥಾಪನೆಯ ಮಾರ್ಗಗಳು | 3 |
| ☆ ಯಥಾರ್ಥ ಅಹ್ಮದಿಯರ ಗುಣಲಕ್ಷಣಗಳು | 9 |
| ☆ ಮಕ್ಕದವರ ವಿರೋಧ ಮುಂದುವರಿಕೆ | 12 |
| ☆ ಮಹಿಳೆಯರೊಂದಿಗೆ ವರ್ತಿಸುವ ಬಗ್ಗೆ ಇಸ್ಲಾಮ್ ನೀಡುವ ಉಪದೇಶಗಳು– 2 | 16 |
| ☆ ದೇವನು 21ನೇ ಶತಮಾನದಲ್ಲಿ | 19 |
| ☆ ಹಝ್ರತ್ ಈಸಾ ಮಸೀಹ್(ಅ) ಮೃತರಾದ ಬಗ್ಗೆ ಚರ್ಚೆ | 23 |
| ☆ ಅಹ್ಮದಿಯರಿಗೆ ಸಂದೇಶ | 27 |
| ☆ ವಾರ್ತೆಗಳು | 28 |
| ☆ ನಿಧನ ವಾರ್ತೆಗಳು | 31 |
| ☆ ಸವಿ ನೆನಪು | 34 |
| ☆ ಓದಿದ್ದು | 35 |
| ☆ ಆರೋಗ್ಯ | 36 |
| ☆ ಸಂಪಾದಕರಿಗೆ ಪತ್ರ | 37 |

Jalsa Gah

ಖಾದಿಯಾನ್‌ನಲ್ಲಿ 124ನೇ ಜಲ್ಸಾ ಸಾಲಾನ (ವಾರ್ಷಿಕ ಸಮ್ಮೇಳನದ ದೃಶ್ಯ)

ಮುಖಪುಟ ಚಿತ್ರ : ಅಹ್ಮದಿಯಾ ಮುಸ್ಲಿಂ ಜಮಾಅತ್ ಮಸ್ಜಿದ್, ತಮಾಲೆ, ಘಾನ
ಇದರಲ್ಲಿ 3000 ಮಂದಿಗೆ ನಮಾಝ್ ಮಾಡಲು ಸ್ಥಳಾವಕಾಶವಿದೆ


ಬಿಡಿ ಪ್ರತಿ : ರೂ. 15/- ವಾರ್ಷಿಕ ಚಂದಾ : ರೂ. 60/- ಅಂಚೆ ಮೂಲಕ : ರೂ. 70/-

ವಿಳಾಸ : 10–23–1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು – 575 001.

بسم الله الرحمن الرحيم
نحمده ونصلي على رسوله الكريم

# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

ಜನವರಿ 2019

| ಆರಂಭ : 1975 | ಸಂಪುಟ : 35 | ಸುಲ್ಹ್ : 1398 ಹಿಜರೀ ಶಮ್ಸೀ | ಸಂಚಿಕೆ : 2 |
|---|---|---|---|

## ನಿರರ್ಥಕ ನಿರೀಕ್ಷೆ

"ವಾಗ್ದತ್ತ ಮಸೀಹರ ಆಕಾಶದಿಂದ ಇಳಿಯುವಿಕೆ ಬರೇ ಒಂದು ವ್ಯಾಮೋಹ ಮಾತ್ರವಾಗಿದೆ. ಆಕಾಶದಿಂದ ಯಾರೂ ಇಳಿದು ಬರಲಾರರೆಂದು ಚೆನ್ನಾಗಿ ತಿಳಿದುಕೊಳ್ಳಿರಿ..... ಇಂದಿನಿಂದ ಮೂರು ಶತಮಾನಗಳು ಪೂರ್ಣವಾಗುವುದಕ್ಕೆ ಮುಂಚೆ ಈಸಾರನ್ನು ಕಾಯುತ್ತಿರುವವರು ಮುಸ್ಲಿಮರಾಗಲಿ, ಕ್ರೈಸ್ತರಾಗಲಿ, ಎಲ್ಲರೂ ಅವರ ಬರುವಿಕೆಯ ಕುರಿತು ನಿರಾಶೆಪಟ್ಟು ತೀರಾ ಹತಾಶರಾಗಿ ಈ ವಿಶ್ವಾಸವನ್ನು ಪರಿತ್ಯಜಿಸುವರು." (ತದ್‌ಕಿರತು ಶಹಾದತೈನ್)

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**
**ಅಹ್ಮದಿಯಾ ಜಮಾಅತಿನ ಸ್ಥಾಪಕರು.**

★★★★★

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

- ಕರ್ಮಗಳು ಸಂಕಲ್ಪ ಪ್ರಕಾರವಾಗಿರುತ್ತದೆ. ಪ್ರತಿಯೊಬ್ಬನು ಅವನ ಸಂಕಲ್ಪ ಪ್ರಕಾರ ಪ್ರತಿಫಲ ಪಡೆಯುತ್ತಾನೆ. (ಬುಖಾರಿ)
- ಆಲಿಸಿರಿ, ಅತ್ಯಂತ ದೊಡ್ಡ ಅಪರಾಧ ಅಲ್ಲಾಹನಿಗೆ ಸಹಭಾಗಿತ್ವ ಕಲ್ಪಿಸುವುದು. ಎರಡನೇ ದೊಡ್ಡ ಅಪರಾಧ ತಂದೆ ತಾಯಂದಿರಿಗೆ ಅವಿಧೇಯತೆ ತೋರಿಸುವುದು ಮತ್ತು ಅವರಿಗೆ ಸೇವೆಸಲ್ಲಿಸುವ ಬಗ್ಗೆ ನಿರ್ಲಕ್ಷ್ಯತೆ..... ಅದರ ನಂತರ ದೊಡ್ಡ ಅಪರಾಧ ಸುಳ್ಳು ಹೇಳುವುದು. (ಬುಖಾರಿ)
- ನಿಮ್ಮ ಮಕ್ಕಳನ್ನು ಗೌರವಿಸಿರಿ. ಅವರಿಗೆ ಉತ್ತಮ ಶಿಕ್ಷಣ ನೀಡಿರಿ. (ಇಬ್ನುಮಾಜಃ)
- ಯಾವ ಮಹಿಳೆ ತನ್ನ ಪತಿಯ ಹಕ್ಕನ್ನು ಸಲ್ಲಿಸುವುದಿಲ್ಲವೋ, ಆಕೆ ಅಲ್ಲಾಹನ ಹಕ್ಕನ್ನು ಸಲ್ಲಿಸುವುದಿಲ್ಲ. (ಇಬ್ನುಮಾಜಃ)
- ಯಾವ ಪದಾರ್ಥವನ್ನು ಹೆಚ್ಚು ಸೇವಿಸಿದರೆ ಅಮಲಾಗುತ್ತದೋ, ಅದನ್ನು ಸ್ವಲವೇ ಸೇವಿಸುವುದು ಕೂಡ ನಿಷಿದ್ಧ. (ಅಬೂದಾವೂದ್)
- ಯಾರು ಮೋಸ ವಂಚನೆ ಮಾಡುತ್ತಾನೋ ಅವನು ನನ್ನ ಪೈಕಿಯವನಲ್ಲ. (ಮುಸ್ಲಿಂ)
- ಪಾಪದಿಂದ ಪಶ್ಚಾತ್ತಾಪಪಟ್ಟು ಮರಳುವವನು ಪಾಪ ಮಾಡದವನಂತಾಗುವನು. (ಇಬ್ನು ಮಾಜಃ)
- ಸತ್ಯ ವಿಶ್ವಾಸಿ ಒಂದು ಹುತ್ತದಿಂದ ಎರಡು ಸಲ ಕಚ್ಚಲ್ಪಡಲಾರನು. (ಬುಖಾರಿ)
- ಅಲ್ಲಾಹನ ತಕ್ಕಡಿಯಲ್ಲಿ ಉತ್ತಮ ಸ್ವಭಾವಕ್ಕಿಂತ ಹೆಚ್ಚು ತೂಗುವ ಬೇರೇನೂ ಇಲ್ಲ. (ಅಬೂದಾವೂದ್)
- ವಿದ್ಯಾರ್ಜನೆ ಪ್ರತಿಯೊಬ್ಬ ಮುಸ್ಲಿಂ ಪುರುಷ ಮತ್ತು ಸ್ತ್ರೀಗೆ ಕಡ್ಡಾಯವಾಗಿದೆ. (ಇಬ್ನು ಮಾಜಃ)


## ಯುಗರಶ್ಮಿಗೆ ಚಂದಾದಾರರಾಗಿರಿ

ವಾರ್ಷಿಕ ಚಂದಾ : ರೂ. 60/–

ಅಂಚೆ ಮೂಲಕ : ರೂ. 70/–

ಸಂಪರ್ಕಿಸಿರಿ : 99 00 410 789

# ಜಾಗತಿಕ ಶಾಂತಿಸ್ಥಾಪನೆಯ ಮಾರ್ಗಗಳು



**ಕೆನಡದ ಕ್ಯಾಲ್‌ಗರಿ ನಗರದಲ್ಲಿ ಜರಗಿದ ಪೀಸ್ ಸಿಂಪೋಸಿಯಂನಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋಚ್ಚ ನೇತಾರ, ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಮಾಡಿದ ಪ್ರಮುಖ ಭಾಷಣ**

*2016 ನವೆಂಬರ್ ದಿನಾಂಕ 11ರಂದು ಕೆನಡದ ಅಹ್ಮದಿಯಾ ಮುಸ್ಲಿಮ್ ಜಮಾಅತ್ ವತಿಯಿಂದ ಕ್ಯಾಲಗರಿ ನಗರದಲ್ಲಿ ಜರಗಿಸಲಾದ ಪೀಸ್ ಸಿಂಪೋಸಿಯಂನಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋಚ್ಚ ನೇತಾರ, ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಮಾಡಿದ ಮಹತ್ವಪೂರ್ಣ ಭಾಷಣ. ಅತಿಥಿಗಳಾಗಿ ಅಗಮಿಸಿದ 650 ಗಣ್ಯರು ಸಹಿತ 800 ಮಂದಿ ಈ ಸಿಂಪೋಸಿಯಂನಲ್ಲಿ ಭಾಗವಹಿಸಿದರು. ಕೆನಡದ ಮಾಜಿ ಪ್ರಧಾನಮಂತ್ರಿ ರೈಟ್ ಆನರೇಬಲ್ ಸ್ಟೀಫನ್ ಹಾರ್ಪರ್, ಕ್ಯಾಲ್‌ಗರಿ ನಗರದ ಮೇಯರ್ ನಹೀದ್ ನೆನ್‌ಶೀ, ಹ್ಯೂಮನ್ ಸರ್ವಿಸಸ್ ರಾಜ್ಯ ಸಚಿವರಾದ ಇರ್ಫಾನ್ ಸಾಬಿರ್, ಫೆಡರಲ್ ಪಾರ್ಲಿಮೆಂಟ್ ಸದಸ್ಯರಾದ ದರ್ಶನ್ ಕಾಂಗ್ ಈ ಸಿಂಪೋಸಿಯಂನಲ್ಲಿ ಭಾಗವಹಿಸಿದರು. ಫರ್ಸ್ಟ್ ನೇಶನ್ಸ್ ಸಮಾಜದ ಸೀನಿಯರ್ ಪ್ರತಿನಿಧಿಗಳು, ವಿದ್ಯಾಭ್ಯಾಸ ತಜ್ಞರು ಮತ್ತು ಮಾಧ್ಯಮದವರು ಸಹ ಭಾಗವಹಿಸಿದ್ದರು.*

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್ – ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ (ಪ್ರಾರಂಭಿಸುತ್ತೇನೆ).

ಎಲ್ಲ ಗಣ್ಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವಬರಕಾತುಹೂ – ಅಲ್ಲಾಹನ ಶಾಂತಿ ಮತ್ತು ಅನುಗ್ರಹಗಳು ನಿಮ್ಮ ಮೇಲೆ ಇರಲಿ.

ನೀವೆಲ್ಲರೂ ಈ ಸಮಾರಂಭದಲ್ಲಿ ಭಾಗವಹಿಸುತ್ತಿರುವುದಕ್ಕೋಸ್ಕರ ನಾನು ನಿಮಗೆಲ್ಲರಿಗೂ ಕೃತಜ್ಞತೆಗಳನ್ನು ಮೊತ್ತಮೊದಲು ಅರ್ಪಿಸುತ್ತೇನೆ. ಇಲ್ಲಿನ ಅಹ್ಮದಿಯಾ ಜಮಾಅತಿನವರು, ಜಗತ್ತಿನಲ್ಲಿ ಶಾಂತಿ ಸ್ಥಾಪಿಸುವ ಮಾರ್ಗಗಳ ಬಗ್ಗೆ ಮಾತನಾಡಲು ನನ್ನೊಂದಿಗೆ ಅಪೇಕ್ಷಿಸಿದ್ದಾರೆ. ಜಗತ್ತಿನಲ್ಲಿ ಶಾಂತಿ ಮತ್ತು ಸೌಹಾರ್ದತೆ ಸ್ಥಾಪಿಸುವ ಆವಶ್ಯಕತೆ ಇದೆ ಎಂದು ನಿಶ್ಚಯವಾಗಿಯೂ ಪ್ರತಿಯೊಬ್ಬನು ಆಶಿಸುತ್ತಿರುವನಾದರೂ ಅದನ್ನು ಸ್ಥಾಪಿಸಲು ಆವಶ್ಯಕವಾದ ಹೆಜ್ಜೆಗಳನ್ನು ಹಾಕಲು ಯಾರೂ ಇಷ್ಟಪಡುವುದಿಲ್ಲ. ಶಾಂತಿ ಸ್ಥಾಪನೆಗೋಸ್ಕರ ಪರಿಶ್ರಮಿಸುವ ಬಗ್ಗೆ ಮಾತನಾಡುವುದು ಸುಲಭವಾಗಿದೆ. ಆದರೆ ವಾಸ್ತವಿಕ ಸ್ಥಿತಿ ಏನೆಂದರೆ ಅದರ ಬಗ್ಗೆ ಮಾಡಿದ ಪ್ರಯತ್ನಗಳು ಎಲ್ಲಿಯೂ ಸಾಕಷ್ಟಿಲ್ಲ.

ವಿಷಾದಕರವಾದುದೇನೆಂದರೆ, ಜಗತ್ತಿನ ಅನೇಕ ಪ್ರದೇಶಗಳಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಮಾಡುವ ಪ್ರಯತ್ನಗಳು ಅನ್ಯರ ಮೇಲೆ ಮೇಧಾವಿತ್ವವನ್ನೂ ಪ್ರಭುತ್ವವನ್ನೂ ಗಳಿಸಲು ಆದ್ಯತೆ ನೀಡಿ ಅಧಿಕಾರ ಮೋಹವನ್ನು ಈಡೇರಿಸಿಕೊಳ್ಳುವ ನಿಟ್ಟಿನಲ್ಲಿವೆ. ನನ್ನ ಮಾತುಗಳನ್ನು ಆಲಿಸಿ ನಿಮ್ಮವರಲ್ಲಿ ಕೆಲವರು ಹೀಗೆ ಪ್ರಶ್ನಿಸಬಹುದು: ಮುಸ್ಲಿಮ್ ದೇಶಗಳ ಮತ್ತು ಇಸ್ಲಾಮೀ ನಾಮಧಾರಿ ಗುಂಪುಗಳ ಸುತ್ತಲೂ ಪ್ರಮುಖವಾಗಿ ಇಂದಿನ ಕಾಲದ ಲೋಕದ ಅಸ್ತವ್ಯಸ್ತತೆ ತಿರುಗುತ್ತಿರುವುದರಿಂದ ಒಬ್ಬ ಮುಸ್ಲಿಮ್ ನೇತಾರ ಜಗತ್ತಿನಲ್ಲಿ ಶಾಂತಿ ಸ್ಥಾಪನೆ ಬಗ್ಗೆ ಏನು ಹೇಳಲು ಸಾಧ್ಯ? ನಿಶ್ಚಯವಾಗಿಯೂ ನ್ಯಾಯವಾಗಿಯೂ ಸಮತೋಲನ ದೃಷ್ಟಿಯಿಂದಲೂ ಹೇಳುವುದಾದರೆ ಇಂದಿನ ಕಾಲದ ಸಂಘರ್ಷಗಳು ಮತ್ತು ಯುದ್ಧಗಳು ಖಂಡಿತವಾಗಿ ಕೆಲವು ಮುಸ್ಲಿಮ್ ದೇಶಗಳಲ್ಲಿ ಕೇಂದ್ರೀಕರಿಸಿವೆ.

ಕೆಲವು ತಥಾಕಥಿತ ಇಸ್ಲಾಮೀ ಗುಂಪುಗಳ ದುಷ್ಟ ವರ್ತನೆಗಳು ನಿಸ್ಸಂಶಯವಾಗಿಯೂ ಮುಸ್ಲಿಮೇತರ ಲೋಕದಲ್ಲಿ ಭಯವನ್ನು ಹಬ್ಬಿಸಿವೆ. ಪಶ್ಚಿಮದ ದೇಶಗಳಲ್ಲಿ ಇಸ್ಲಾಮಿನ ಬಗ್ಗೆ ಭಯ ವರ್ಧಿಸುತ್ತಾ ಇದೆ. ಅದು ತಮ್ಮ ನಾಗರಿಕತೆಗೆ ಮತ್ತು ಜೀವಿತ ರೀತಿಗೆ ಬೆದರಿಕೆ ಒಡ್ಡುತ್ತಿದೆ ಎಂದು ಅವರು ಭಾವಿಸುತ್ತಿದ್ದಾರೆ. ಆದುದರಿಂದ ಲೋಕದಲ್ಲಿ ಶಾಂತಿ ಸ್ಥಾಪಿಸುವ ಬಗ್ಗೆ ಒಬ್ಬ ಮುಸ್ಲಿಮ್ ನಾಯಕ ಭಾಷಣ ಮಾಡುತ್ತಿರುವುದು ವಿಚಿತ್ರ ವಿರೋಧಾಭಾಸ ಎಂದು ನಿಮ್ಮಲ್ಲಿ ಕೆಲವರು ಭಾವಿಸುತ್ತಿರಬಹುದು. ಯಾವುದಾದರೂ ತೀರ್ಮಾನ ಕೈಗೊಳ್ಳುವ ಮೊದಲು ಜನರು



Yuga - January 2019 (2).pmd 3 2/19/2019, 11:34 AM

ಇಸ್ಲಾಮಿನ ನೈಜ ತತ್ವಗಳನ್ನು ಅರಿತುಕೊಳ್ಳುವುದು ಆವಶ್ಯಕವಾಗಿದೆ. ಉಗ್ರವಾದಿಗಳ ಮತ್ತು ಭಯೋತ್ಪಾದಕರ ಕೃತ್ಯಗಳು ಇಸ್ಲಾಮ್ ಧರ್ಮ ತತ್ವಗಳಿಗನುಸಾರವಾಗಿವೆ ಎಂದು ಯಾರೂ ನಿರ್ಧರಿಸಬಾರದು.

ನಾನು ಅರಿತಿರುವ ಮತ್ತು ಅನುಸರಿಸುತ್ತಿರುವ ಇಸ್ಲಾಮ್ ಎಲ್ಲ ಮುಸ್ಲಿಮರು ಅತ್ಯಂತ ಪವಿತ್ರವೆಂದು ಗಣಿಸುವ ಪವಿತ್ರ ಖುರ್‌ಆನಿನ ತತ್ವಗಳ ಮೇಲೆ ಮತ್ತು ಇಸ್ಲಾಮಿನ ಪವಿತ್ರ ಪ್ರವಾದಿ ಮುಹಮ್ಮದ್[ಸ] ಅವರ ಜೀವಿತ ಮಾದರಿ ಮತ್ತು ಉಪದೇಶಗಳ ಅಸ್ತಿಭಾರದ ಮೇಲೆ ಸ್ಥಾಪಿತವಾಗಿದೆ.

ಆದುದರಿಂದ ಸೀಮಿತ ಸಮಯದೊಳಗೆ ನಾನು ನಿಮ್ಮ ಮುಂದೆ ನೈಜ ಇಸ್ಲಾಮಿನ ತತ್ವಗಳನ್ನು ವಿವರಿಸುವೆನು. ನೀವು ಅವುಗಳನ್ನು ತಿಳಿದುಕೊಂಡ ನಂತರ ಇಸ್ಲಾಮ್ ಹಿಂಸೆಯನ್ನೂ ಒಡಕನ್ನೂ ಪ್ರೋತ್ಸಾಹಿಸುತ್ತಿದೆಯೋ ಅಥವಾ ಅದು ಸಮಾಜದಲ್ಲಿ ಸಹಿಷ್ಣುತೆಯನ್ನೂ ಪರಸ್ಪರ ಗೌರವಿಸುವಿಕೆಯನ್ನೂ ಪ್ರತಿಪಾದಿಸುವ ಧರ್ಮವೋ ಎಂದು ತೀರ್ಮಾನಿಸಬಹುದು. ಶಾಂತಿಯನ್ನು ಸ್ಥಾಪಿಸಲು ಪವಿತ್ರ ಖುರ್‌ಆನ್ ಅಧ್ಯಾಯ 16 ವಚನ 91ರಲ್ಲಿ ಪ್ರಸ್ತಾಪಿಸಿದ ಸುವರ್ಣ ತತ್ವವನ್ನು ನಾನು ಮೊತ್ತಮೊದಲು ನಿಮ್ಮ ಮುಂದೆ ಇರಿಸುವೆನು. ಪವಿತ್ರ ಖುರ್‌ಆನಲ್ಲಿ ಅಲ್ಲಾಹನು ಹೀಗೆ ಹೇಳುತ್ತಾನೆ:

"ನ್ಯಾಯ ನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ನಿಕಟ ಬಂಧುಗಳಿಗೆ ಎಂಬಂತೆ (ಪರರಿಗೂ) ಸಹಾಯ ಮಾಡಲಿಕ್ಕೂ ಅಲ್ಲಾಹನು ಆಜ್ಞಾಪಿಸುತ್ತಾನೆ." (16:91).

ಪವಿತ್ರ ಖುರ್‌ಆನ್ ಮುಸ್ಲಿಮರೊಂದಿಗೆ ನ್ಯಾಯನಿಷ್ಠೆಗೆ ಬದ್ಧರಾಗಲಿಕ್ಕೂ ಔದಾರ್ಯ ತೋರಿಸಲಿಕ್ಕೂ ಹೇಳುತ್ತದೆಯಲ್ಲದೆ ಅನ್ಯರೊಂದಿಗೆ ಅದಕ್ಕಿಂತಲೂ ಬಹಳ ಉನ್ನತ ಮಟ್ಟದಲ್ಲಿ ವರ್ತಿಸಲು ಉಪದೇಶಿಸುತ್ತದೆ. ನಿಕಟ ಬಂಧುಗಳೊಂದಿಗೆ ಎಂಬಂತೆ ಅನ್ಯರೊಂದಿಗೆ ವರ್ತಿಸಬೇಕೆಂದು ಅಲ್ಲಾಹನು ಹೇಳಿ ಸತ್ಯವಿಶ್ವಾಸಿಗಳು ಅನ್ಯರೊಂದಿಗೆ ಉತ್ತಮವಾಗಿ ವರ್ತಿಸಬೇಕಲ್ಲದೆ ಅವರಿಗೋಸ್ಕರ ಬಹಳ ಉತ್ತಮವಾದುದನ್ನು ಹಾರೈಸಬೇಕೆಂದು ಸಹ ಹೇಳಿದ್ದಾನೆ. ಮುಸ್ಲಿಮರು ಅನ್ಯರನ್ನು ಸಹ ತಮ್ಮ ನಿಕಟ ಬಂಧುಗಳೆಂಬಂತೆ ಗಣಿಸಬೇಕೆಂದು ಇಸ್ಲಾಮ್ ಹೇಳುತ್ತದೆ. ತಾಯಿ ತನ್ನ ಮಗುವನ್ನು ನಿಸ್ವಾರ್ಥತೆಯಿಂದ ಪ್ರೀತಿಸುವ ಹಾಗೆ ಮುಸ್ಲಿಮರು ಯಾವುದೇ ಲಾಭಗಳಿಸುವ ಆಶೆ ಹೊಂದದೆ ಅನ್ಯರನ್ನೂ ಪ್ರೀತಿಸಬೇಕೆಂದು ಮುಸ್ಲಿಮರಿಗೆ ಕಡ್ಡಾಯಪಡಿಸಲಾಗಿದೆ. ಮುಸ್ಲಿಮರು ಮುಸ್ಲಿಮರೊಂದಿಗೆ ಮಾತ್ರ ಈ ರೀತಿ ವರ್ತಿಸಬೇಕೆಂದು ಪವಿತ್ರ ಖುರ್‌ಆನ್ ಹೇಳುವುದಿಲ್ಲ, ಅನ್ಯರನ್ನೂ ಪ್ರೀತಿಸಬೇಕೆಂದು ಇಸ್ಲಾಮ್ ಹೇಳುತ್ತದೆ. ಪರರಿಗೆ ಸಹಾಯ ಮಾಡಬೇಕೆಂದೂ ಹೇಳಲಾಗಿದೆ. ಇದರಲ್ಲಿ ಮುಸ್ಲಿಮರೂ ಮುಸ್ಲಿಮೇತರರೂ ಸಮಾನವಾಗಿ ಸೇರಿದ್ದಾರೆ.

ಹೀಗಿದ್ದರೂ ಕೆಲವು ಮುಸ್ಲಿಮ್ ದೇಶಗಳ ಇಂದಿನ ಕಾಲದ ಸ್ಥಿತಿಯನ್ನು ನೋಡುವಾಗ ಇಸ್ಲಾಮ್ ಧರ್ಮ ತತ್ವಗಳನ್ನು ಅಲ್ಲಿನವರು ಸಂಪೂರ್ಣವಾಗಿ ನಿರ್ಲಕ್ಷಿಸುತ್ತಿರುವುದಾಗಿ ಕಾಣಿಸುತ್ತದೆ. ಅನೇಕ ಮುಸ್ಲಿಮ್ ದೇಶಗಳು ತಮ್ಮ ದೇಶದ ನಾಗರಿಕರ ಹಕ್ಕುಗಳನ್ನು ಈಡೇರಿಸುವುದಿಲ್ಲ. ಅಲ್ಲಿನ ಜನರು ದೀರ್ಘ ಕಾಲದಿಂದ ಆಶಾಭಂಗಕ್ಕೊಳಗಾಗಿ ಅವರಲ್ಲಿ ಅತೃಪ್ತ ಭಾವನೆ ವರ್ಧಿಸುತ್ತಾ ಇವೆ. ಇದರ ಪರಿಣಾಮವಾಗಿ ವಿದ್ರೋಹಿ ಮತ್ತು ಭಯೋತ್ಪಾದಕ ಗುಂಪುಗಳು ಹುಟ್ಟಿಕೊಂಡಿವೆ. ಎಲ್ಲ ವಿಭಾಗಗಳು ಅತ್ಯಂತ ಕ್ರೂರ ಕೃತ್ಯಗಳನ್ನು ನಡೆಸುತ್ತಿವೆ. ಹಿಂದೆ ಸುಭದ್ರವಾಗಿದ್ದ ಅನೇಕ ದೇಶಗಳು ಇಂದು ವಿಭಜಿಸಲ್ಪಟ್ಟಿವೆ ಮತ್ತು ವಿನಾಶಕಾರಿ ಅಂತರ್‌ಯುದ್ಧಗಳಲ್ಲಿ ಮುಳುಗಿವೆ.

ಈ ಎಲ್ಲ ಸಂಘರ್ಷಗಳಿಗೂ ಯುದ್ಧಗಳಿಗೂ ಮೂಲ ಕಾರಣ ಮುಸ್ಲಿಮರಲ್ಲಿ ಬಹುತೇಕರು ಇಸ್ಲಾಮಿನ ನೈಜ ತತ್ವಗಳನ್ನು ಮರೆತು ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸಿಕೊಡಲು ವಿಫಲರಾದುದಾಗಿದೆ. ನ್ಯಾಯ ಮತ್ತು ಸತ್ಯವನ್ನು ಅವಲಂಬಿಸದೆ ಅವರು ದುರಾಶೆ ಮತ್ತು ಅಧಿಕಾರ ಗಳಿಸುವ ಹಂಬಲದಿಂದ ಮಾತ್ರ ಪ್ರಚೋದಿತರಾಗುತ್ತಾರೆ. ದುರದೃಷ್ಟಕರವಾಗಿ ಇವುಗಳ ಪರಿಣಾಮವಾಗಿ ಜನರಲ್ಲಿ ಅತೃಪ್ತಿ ವ್ಯಾಪಿಸುವಾಗ ಶಾಂತಿಗೆ ಭಂಗವುಂಟಾಗುತ್ತದೆ. ಇಸ್ಲಾಮ್, ಪವಿತ್ರ ಖುರ್‌ಆನ್ ಅಧ್ಯಾಯ 4 ವಚನ 136ರಲ್ಲಿ ನ್ಯಾಯಪಾಲನೆಯು ಯಾವ ಮಟ್ಟದಲ್ಲಿರಬೇಕೆಂದು ಪ್ರತಿಪಾದಿಸುತ್ತದೆ. ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ:

"ಎಲೈ ಸತ್ಯವಿಶ್ವಾಸಿಗಳೇ, ನೀವು ಪರಿಪೂರ್ಣವಾದ ನ್ಯಾಯನಿಷ್ಠೆಯುಳ್ಳವರೂ ಅಲ್ಲಾಹನಿಗೋಸ್ಕರ ಸಾಕ್ಷ್ಯವಹಿಸುವವರೂ ಆಗಿರಿ; ಅದು ನಿಮಗೆ ಅಥವಾ (ನಿಮ್ಮ) ಮಾತಾಪಿತರಿಗೆ ಅಥವಾ ನಿಕಟ ಬಂಧುಗಳಿಗೆ ವಿರುದ್ಧವಾಗಿದ್ದರೂ ಸರಿ. ಅವನು ಧನಿಕನಾಗಿರಲಿ ಯಾ ದರಿದ್ರನಾಗಿರಲಿ, ಅಲ್ಲಾಹನು ನಿಮಗಿಂತ ಹೆಚ್ಚಾಗಿ ಅವರೀರ್ವರ ಒಳಿತನ್ನು ಬಯಸುತ್ತಾನೆ. ಆದುದರಿಂದ ನೀವು ಯಾವುದೇ ನಿಕೃಷ್ಟ ಆಶೆಯನ್ನು ಹೊಂದದೆ ನ್ಯಾಯದಿಂದ ವರ್ತಿಸಿರಿ. ನೀವು (ಸತ್ಯವನ್ನು) ಮರೆಮಾಚಿದರೆ ಅಥವಾ (ಅದನ್ನು ಬಹಿರಂಗಪಡಿಸದೆ) ನುಣುಚಿಕೊಂಡರೆ (ತಿಳಿದುಕೊಳ್ಳಿರಿ) ನಿಮ್ಮ ವರ್ತನೆಯ ಕುರಿತು ಅಲ್ಲಾಹನು ಚೆನ್ನಾಗಿ ತಿಳಿದವನಾಗಿದ್ದಾನೆ." (4:136).

ಪವಿತ್ರ ಖುರ್‌ಆನಿನ ಈ ವಚನ ಸೂಚಿಸುವುದೇನೆಂದರೆ, ಇಸ್ಲಾಮ್ ಧರ್ಮ ತತ್ವಗಳು ಎಂದೂ ಕ್ರೂರವೂ ಅನ್ಯಾಯ ಭರಿತವೂ ಆಗಿರಲಿಲ್ಲವೆಂದೂ ಅವು ಅಪ್ರತಿಮ ಒಳಿತುಗಳಿಂದ ಕೂಡಿದ್ದುವು ಎಂದೂ ಆಗಿದೆ. ಒಬ್ಬನು ತನ್ನ ವಿರುದ್ಧವಾಗಲೀ ತನಗೆ ಪ್ರಿಯರಾದವರ ವಿರುದ್ಧವಾಗಲೀ ಸತ್ಯವನ್ನು ಎತ್ತಿಹಿಡಿಯಲು ಸಾಕ್ಷಿ ಹೇಳಬೇಕೆಂದು ಇಸ್ಲಾಮ್ ಹೇಳುತ್ತದೆ. "ನಾನು ನನ್ನ ವಿರುದ್ಧವೇ ಸಾಕ್ಷಿ ಹೇಳಲು ಸಿದ್ಧನಾಗಿದ್ದೇನೆ" ಎಂದು ಹೇಳುವುದು ಸುಲಭ. ಆದರೆ ಪ್ರಯೋಗಿಕವಾಗಿ ಈ ಮಟ್ಟವನ್ನು ತಲಪುವುದು ಅತ್ಯಂತ ಕಷ್ಟಕರವಾಗಿದೆ. ಹೀಗಿದ್ದರೂ ಇದು ಅಲ್ಲಾಹನು ಮುಸ್ಲಿಮರ ಮುಂದಿರಿಸಿದ ಉದ್ದೇಶಲಕ್ಷ್ಯವೂ ಪಂಥಾಹ್ವಾನವೂ ಆಗಿದೆ. ಅಲ್ಲಾಹನು ಹೇಳುವುದೇನೆಂದರೆ ಎಲ್ಲ ಸ್ವಾರ್ಥಲಾಭೋದ್ದೇಶಗಳನ್ನು ಬದಿಗೆ ಸರಿಸದಿದ್ದರೆ ನ್ಯಾಯಪಾಲನೆ ನಡೆಯಲಾರದು.

ಈ ತತ್ವವನ್ನು ಪಾಲನೆ ಮಾಡಿದರೆ ಮುಸ್ಲಿಮ್ ದೇಶಗಳಲ್ಲಿ ಮಾತ್ರವಲ್ಲ ಪ್ರತಿಯೊಂದು ಗ್ರಾಮದಲ್ಲಿ, ಪ್ರತಿಯೊಂದು ಪಟ್ಟಣದಲ್ಲಿ, ಪ್ರತಿಯೊಂದು ನಗರದಲ್ಲಿ ಮತ್ತು ಲೋಕದ ಪ್ರತಿಯೊಂದು ದೇಶದಲ್ಲಿ ಶಾಂತಿ ಸ್ಥಾಪಿಸಲ್ಪಡುವುದು. ಇಸ್ಲಾಮ್ ಉಗ್ರವಾದವನ್ನು ಪ್ರತಿಪಾದಿಸುತ್ತದೆ ಎಂದು ಸಾಮಾನ್ಯವಾಗಿ ಆರೋಪಿಸಲ್ಪಡುತ್ತಿದೆಯಾದರೂ ಈ ಆಪಾದನೆ ಅಜ್ಞಾನ ಮತ್ತು ಇಸ್ಲಾಮಿನ ನೈಜ ತತ್ವಗಳನ್ನು ಮನವರಿಕೆ ಮಾಡದುದರಿಂದಾಗಿದೆ. ಒಬ್ಬನು ಇಸ್ಲಾಮ್ ಧರ್ಮ ತತ್ವಗಳನ್ನು ನಿಷ್ಪಕ್ಷಪಾತಿಯಾಗಿ ಅಧ್ಯಯನ ಮಾಡುವನಾದರೆ ಇಸ್ಲಾಮ್ ಧರ್ಮ ತತ್ವಗಳು ಎಲ್ಲ ವಿಧಗಳ ಕ್ರೌರ್ಯ, ಅಸೂಯೆ ಮತ್ತು ಕೆಡುಕಿಗೆ ಸಂಪೂರ್ಣವಾಗಿ ವಿರುದ್ಧವಾಗಿದೆ ಎಂದು ತಿಳಿಯುವನು. ಸಮಾಜದ ಎಲ್ಲ



Yuga - January 2019 (2).pmd 4 2/19/2019, 11:34 AM

ಹಂತಗಳಲ್ಲಿ ಶಾಂತಿಗೆ ಇಸ್ಲಾಮ್ ಧರ್ಮ ಅಸ್ತಿಭಾರ ಹಾಕುತ್ತಿದೆ. ದೇಶಗಳ ಪರಸ್ಪರ ಸಂಬಂಧಗಳ ಬಗ್ಗೆ ಸಹ ಅದು ಪ್ರಸ್ತಾಪಿಸಿದೆ. ಪವಿತ್ರ ಖುರ್‌ಆನ್ ಅಧ್ಯಾಯ 49 ವಚನ 10ರಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ:

"ಸತ್ಯವಿಶ್ವಾಸಿಗಳ ಪೈಕಿ ಎರಡು ಗುಂಪುಗಳು ಪರಸ್ಪರ ಹೋರಾಟಕ್ಕಿಳಿದರೆ, ನೀವು ಅವರ ಮಧ್ಯೆ ಸಂಧಾನವೇರ್ಪಡಿಸಿರಿ. ಆ ಬಳಿಕ ಅವರಲ್ಲಿ ಒಂದು ಗುಂಪು ಇನ್ನೊಂದು ಗುಂಪಿನ ಮೇಲೆ ಆಕ್ರಮಣವೆಸಗಿದರೆ, ಅಲ್ಲಾಹನ ಆಜ್ಞೆಯ ಕಡೆಗೆ ಅವರು ಮರಳುವ ತನಕ ಅವರ ವಿರುದ್ಧ ಹೋರಾಡಿರಿ. ಅನಂತರ ಆ ಗುಂಪು ಮರಳಿದರೆ ಅವರ ಮಧ್ಯೆ ನ್ಯಾಯಯುತವಾಗಿ ಸಂಧಾನ ಮಾಡಿಸಿರಿ ಹಾಗೂ ನ್ಯಾಯೋಚಿತವಾಗಿ ವರ್ತಿಸಿರಿ. ನಿಶ್ಚಯವಾಗಿಯೂ ಅಲ್ಲಾಹನು ನ್ಯಾಯವಂತರನ್ನು ಪ್ರೀತಿಸುತ್ತಾನೆ." (49:10).

ಪವಿತ್ರ ಖುರ್‌ಆನಿನ ಈ ವಚನದಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ: ಎರಡು ಪಕ್ಷಗಳು ಅಥವಾ ಎರಡು ದೇಶಗಳು ಸಂಘರ್ಷದ ಅವಸ್ಥೆಯಲ್ಲಿದ್ದರೆ ಅವರ ನೆರೆ ಹೊರೆಯವರು ಮತ್ತು ಸ್ನೇಹ ಸಂಬಂಧ ಹೊಂದಿದ ದೇಶಗಳು ಅವರ ಮಧ್ಯೆ ಸೌಹಾರ್ದ ಸ್ಥಾಪನೆಗೆ ಪ್ರಯತ್ನಿಸಬೇಕು. ಸಂಧಾನ, ಚರ್ಚೆಗಳ ಮೂಲಕ ಶಾಂತಿ ಸ್ಥಾಪನೆಯಾಗುವುದಿಲ್ಲವಾದರೆ, ಅನ್ಯಾಯದಿಂದ ವರ್ತಿಸುವ ದೇಶದ ವಿರುದ್ಧ ಇತರ ದೇಶಗಳು ಒಗ್ಗೂಡಿ ಬಲಪ್ರಯೋಗಿಸಿ ಅದನ್ನು ತಡೆಯಬೇಕು. ನನ್ನ ನಂಬಿಕೆ ಏನೆಂದರೆ ಪವಿತ್ರ ಖುರ್‌ಆನಿನ ಈ ತತ್ವ ಮುಸ್ಲಿಮರಿಗೆ ಮಾತ್ರ ಅನ್ವಯಿಸುವುದಲ್ಲ, ಈ ತತ್ವವನ್ನು ಅನುಸರಿಸಿ ಸಂಯುಕ್ತ ರಾಷ್ಟ್ರ ಸಂಘ ಮತ್ತು ಮಹಾಶಕ್ತಿ ರಾಷ್ಟ್ರಗಳು ವರ್ತಿಸಿದರೆ ಲೋಕದಲ್ಲಿ ಶಾಂತಿಯನ್ನು ಸ್ಥಿರವಾಗಿ ಸ್ಥಾಪಿಸಲು ಸಾಧ್ಯವಾಗುವುದು.

ಆದರೆ ಮುಸ್ಲಿಮ್ ದೇಶಗಳಾಗಲಿ, ಮುಸ್ಲಿಮೇತರ ದೇಶಗಳಾಗಲಿ ಈ ರೀತಿ ಶಾಂತಿ ಸ್ಥಾಪಿಸಲು ಉದ್ಯುಕ್ತವಾಗಿಲ್ಲ. ಉದಾಹರಣೆಗೆ, ಪ್ರಥಮ ಜಾಗತಿಕ ಯುದ್ಧ ನಡೆದ ನಂತರ ಮತ್ತು ದ್ವಿತೀಯ ಜಾಗತಿಕ ಯುದ್ಧದ ನಂತರ ಈ ಮಧ್ಯಸ್ಥಿಕೆಯ ಮತ್ತು ಸಂಘರ್ಷ ನಿವಾರಣೆಯ ತತ್ವವನ್ನು ಅನುಸರಿಸಲಿಲ್ಲ. ಈ ಕಾರಣದಿಂದ ದೇಶಗಳ ಮಧ್ಯೆ ಅಸಮಾಧಾನಗಳು ಕುದಿಯುತ್ತಿವೆ. ಆದುದರಿಂದ ವಿರೋಧ ಬಣಗಳ ಮತ್ತು ಸಖ್ಯಗಳ ರಚನೆಯನ್ನು ತಡೆಗಟ್ಟುವ ಪ್ರಯತ್ನಗಳು ಯಶಸ್ವಿಯಾಗಿಲ್ಲ. ಇದೊಂದು ರಹಸ್ಯವಲ್ಲ. ನಾನು ಹೇಳುವುದು ಹೊಸತೇನೂ ಅಲ್ಲ. ಇತ್ತೀಚೆಗಿನ ವರ್ಷಗಳಲ್ಲಿ ಅನೇಕ ರಾಜಕೀಯ ವಿಮರ್ಶಕರು ಮತ್ತು ಅಂಕಣಗಾರರು ಜಗತ್ತಿನಲ್ಲಿ ಶಾಂತಿ ಸ್ಥಾಪನೆಗಿರುವ ಸಂಸ್ಥೆಗಳು ಮತ್ತು ವಿಶಿಷ್ಟವಾಗಿ ಸಂಯುಕ್ತ ರಾಷ್ಟ್ರ ಸಂಘ ತಮ್ಮ ಉದ್ದೇಶಲಕ್ಷ್ಯಗಳನ್ನು ಈಡೇರಿಸಲು ತಮ್ಮೊಳಗೆ ಅಡಕವಾಗಿರುವ ನ್ಯಾಯರಾಹಿತ್ಯದ ಕಾರಣ ಸೋತು ಹೋಗಿವೆ ಎಂದು ಹೇಳಿದ್ದಾರೆ.

ನ್ಯಾಯಪಾಲಕ ಸಮಾಜವನ್ನು ಸ್ಥಾಪಿಸುವ ಬಗ್ಗೆ ಪವಿತ್ರ ಖುರ್‌ಆನ್ ಅಧ್ಯಾಯ 5 ವಚನ 9ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳಿದ್ದಾನೆ: "ಎಲೈ ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯ ವಹಿಸುವವರಾಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ನಿಸ್ಸಂಶಯವಾಗಿಯೂ ಅಲ್ಲಾಹನು ನೀವು ಮಾಡುವುದನ್ನೆಲ್ಲ ಬಲ್ಲವನಾಗಿದ್ದಾನೆ."

ಪವಿತ್ರ ಖುರ್‌ಆನಿನ ಈ ವಚನ ಹೀಗೆ ಹೇಳುತ್ತದೆ: ಪ್ರತಿಯೊಬ್ಬ ಮುಸ್ಲಿಮನು ತನ್ನ ಕಡು ಶತ್ರುವಿನೊಂದಿಗೆ ಕೂಡ ನ್ಯಾಯಪೂರ್ಣವಾಗಿ ವರ್ತಿಸಲು ಬದ್ಧನಾಗಿದ್ದಾನೆ. ಒಬ್ಬನ ಹಗೆತನ ಅವನ ವಿರುದ್ಧ ಪ್ರತೀಕಾರ ರೂಪದಲ್ಲಿ ವರ್ತಿಸಲು ಪ್ರೇರೇಪಿಸುವಂತಹದು ಆಗಬಾರದು.

ನನ್ನ ಈ ಮಾತುಗಳನ್ನು ಆಲಿಸುವಾಗ ನಿಮ್ಮ ಪೈಕಿ ಕೆಲವರು ಹೀಗೆ ಪ್ರಶ್ನಿಸಬಹುದು: ಇವುಗಳೆಲ್ಲ ವಾಸ್ತವಿಕವಾಗಿ ಇಸ್ಲಾಮ್ ಧರ್ಮದ ಉಪದೇಶಗಳಾಗಿದ್ದರೆ, ಇಸ್ಲಾಮ್ ನಿಜವಾಗಿಯೂ ಶಾಂತಿ ಮತ್ತು ನ್ಯಾಯಪಾಲನೆಯ ಧರ್ಮವಾಗಿದ್ದರೆ, ಯುದ್ಧ ಮತ್ತು ಜಿಹಾದ್‌ಗೆ ಸಂಬಂಧಿಸಿದ ಪರಿಕಲ್ಪನೆ ಮುಸ್ಲಿಮರೊಂದಿಗೆ ಜೊತೆ ಸೇರಿಸಲ್ಪಟ್ಟದ್ದು ಹೇಗೆ? ಈ ಪ್ರಶ್ನೆಗೆ ಉತ್ತರ ನೀಡಲು ನಾನು ಪವಿತ್ರ ಖುರ್‌ಆನನ್ನೇ ಉಲ್ಲೇಖಿಸುವೆನು. ಚರಿತ್ರೆ ಸಾಕ್ಷಿ ಹೇಳುವುದೇನೆಂದರೆ ಹಝ್ರತ್ ಮುಹಮ್ಮದ್ ಪೈಗಂಬರ್(ಸ) ತಾನು ಪ್ರವಾದಿ ಎಂದು ವಾದಿಸಿದ ನಂತರ ಹದಿಮೂರು ವರ್ಷಗಳ ಕಾಲ ನಿಷ್ಕರುಣೆಯ ಕ್ರೌರ್ಯ ಮತ್ತು ತೀವ್ರ ಹಿಂಸಾಚಾರಗಳಿಗೆ ಮಕ್ಕ ನಗರದಲ್ಲಿ ಅವರು ಮತ್ತು ಅವರ ಶಿಷ್ಯರು ಗುರಿಯಾದರು. ಕೊನೆಗೆ ಅವರು ಮದೀನ ನಗರಕ್ಕೆ ವಲಸೆ ಹೋಗಲು ನಿರ್ಬಂಧಿತರಾದರು. ಆದರೆ ಮಕ್ಕದವರು ಮುಸ್ಲಿಮರು ಮದೀನದಲ್ಲಿ ನೆಮ್ಮದಿಯಿಂದ ಜೀವಿಸಲು ಬಿಡಲಿಲ್ಲ. ಮಕ್ಕದ ಮುಸ್ಲಿಮೇತರರು ಮುಸ್ಲಿಮರನ್ನು ಬೆನ್ನಟ್ಟಿ ಅವರ ವಿರುದ್ಧ ಯುದ್ಧ ಮಾಡಿದರು. ಆಗ ಮಾತ್ರ ಅಲ್ಲಾಹನು ಯುದ್ಧ ಮಾಡಲು ಪ್ರಥಮ ಬಾರಿ ಅನುಮತಿ ನೀಡಿದನು. ಪ್ರತಿರೋಧಾತ್ಮಕ ಯುದ್ಧ ಮಾಡಲು ಪವಿತ್ರ ಖುರ್‌ಆನ್ ಅಧ್ಯಾಯ 22 ವಚನ 40ರಲ್ಲಿ ಹೀಗೆ ಅನುಮತಿ ನೀಡಲಾಯಿತು:

"ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಪ್ರತಿಯುದ್ಧ ಮಾಡುವ ಅನುಮತಿ ಇದೆ. ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ. ನಿಶ್ಚಯವಾಗಿಯೂ ಅವರಿಗೆ ಸಹಾಯ ನೀಡಲು ಅಲ್ಲಾಹನಿಗೆ ಸಾಮರ್ಥ್ಯವಿದೆ."

ಈ ವಚನದ ನಂತರ ಮುಂದಿನ ವಚನದಲ್ಲಿ ಸರ್ವಶಕ್ತನಾದ ಅಲ್ಲಾಹನು ಈ ವಿಷಯವನ್ನು ಹೆಚ್ಚು ವಿಶದೀಕರಿಸಿರುವನು. ಪವಿತ್ರ ಖುರ್‌ಆನ್ ಅಧ್ಯಾಯ 22 ವಚನ 41ರಲ್ಲಿ ಹೀಗೆ ಹೇಳಲಾಗಿದೆ:

"ಅಲ್ಲಾಹನೇ ನಮ್ಮ ಪ್ರಭು ಎಂದು ಹೇಳಿದ ಮಾತ್ರಕ್ಕೆ ಅವರನ್ನು ಅನ್ಯಾಯವಾಗಿ ಅವರ ಮನೆಗಳಿಂದ ಹೊರಗೆ ಅಟ್ಟಲಾಯಿತು. ಅಲ್ಲಾಹನು ಜನರಲ್ಲಿ ಕೆಲವರನ್ನು (ಅವರು ಎಸಗಿದ ದೌರ್ಜನ್ಯಗಳನ್ನು) ಬೇರೆ ಕೆಲವರ ಮೂಲಕ ತಡೆಯದಿರುತ್ತಿದ್ದರೆ ಸನ್ಯಾಸಿ ಮಠಗಳೂ ಇಗರ್ಜಿಗಳೂ ಯಹೂದಿ ಮಂದಿರಗಳೂ ಮಸ್‌ಜಿದ್‌ಗಳೂ ನಿರ್ನಾಮವಾಗುತ್ತಿದ್ದುವು. ಅವುಗಳಲ್ಲಿ ಅಲ್ಲಾಹನ ನಾಮ ಹೆಚ್ಚು ಹೆಚ್ಚಾಗಿ ಸ್ಮರಿಸಲ್ಪಡುತ್ತದೆ. ತನಗೆ ನೆರವು ನೀಡುವವರಿಗೆ ಅಲ್ಲಾಹನು ಖಂಡಿತವಾಗಿಯೂ ನೆರವಾಗುತ್ತಾನೆ. ನಿಶ್ಚಯವಾಗಿಯೂ ಅಲ್ಲಾಹನು ಸರ್ವ ಸಮರ್ಥನೂ ಪ್ರತಾಪಶಾಲಿಯೂ ಆಗಿದ್ದಾನೆ."

ಈ ವಚನ ಸ್ಪಷ್ಟವಾಗಿ ಹೇಳುವುದೇನೆಂದರೆ, ಮುಸ್ಲಿಮರಿಗೆ ಪ್ರತಿರೋಧಾತ್ಮಕ ಯುದ್ಧ ಮಾಡಲು ಅನುಮತಿ ದೊರೆತುದರ ಕಾರಣ ಅವರು ಹಿಂಸಾಚಾರಕ್ಕೆ ಈಡಾದುದರಿಂದಲ್ಲ. ಅವರಿಗೆ

ಯುದ್ಧ ಮಾಡಲು ಅನುಮತಿ ದೊರೆತದ್ದು ವಿಶಾಲ ಸಮಾಜವನ್ನು ರಕ್ಷಿಸಲಿಕ್ಕಾಗಿದೆ. ಎಲ್ಲ ಜನರಿಗೆ ಅವರಿಚ್ಛಿಸುವ ಧರ್ಮವನ್ನು ಭಯವಿಲ್ಲದೆ ಅನುಸರಿಸುವ ಸ್ವಾತಂತ್ರ್ಯಕ್ಕೋಸ್ಕರವಾಗಿದೆ. ಪವಿತ್ರ ಖುರ್‌ಆನ್ ಮುಸ್ಲಿಮರಿಗೆ ಯುದ್ಧ ಮಾಡಲು ಅನುಮತಿ ನೀಡಿದುದು ಇಸ್ಲಾಮನ್ನು ರಕ್ಷಿಸಿಸಲಿಕ್ಕೋಸ್ಕರ ಮತ್ತು ಎಲ್ಲ ಮಸ್‌ಜಿದ್‌ಗಳು ಧ್ವಂಸಗೊಳಿಸಲ್ಪಡುವುವು ಎಂಬ ಭಯದಿಂದಲೂ ಅಲ್ಲ. ಎಲ್ಲ ಧರ್ಮಗಳನ್ನು ಮತ್ತು ಎಲ್ಲ ಧರ್ಮಗಳ ಆರಾಧನಾಲಯಗಳನ್ನು ಎಂದರೆ ಇಗರ್ಜಿಗಳನ್ನು, ದೇವಾಲಯಗಳನ್ನು, ಯಹೂದಿ ಮಂದಿರಗಳನ್ನು ಮತ್ತು ಮಸ್‌ಜಿದ್‌ಗಳನ್ನು ಅಥವಾ ಬೇರೆ ಆರಾಧನಾಲಯಗಳನ್ನು ರಕ್ಷಿಸಲಿಕ್ಕಾಗಿತ್ತು.

ಆದಿಕಾಲೀನ ಮುಸ್ಲಿಮರು ತಮ್ಮ ಜೀವಗಳನ್ನು ಅರ್ಪಿಸಿದುದು ಕೇವಲ ತಮ್ಮ ಆತ್ಮ ರಕ್ಷಣೆಗೋಸ್ಕರವಲ್ಲ. ಅದು ಮಾನವರನ್ನು ರಕ್ಷಿಸಲು, ಮನಸ್ಸಾಕ್ಷಿ ಮತ್ತು ವಿಶ್ವಾಸ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯಲಿಕ್ಕಾಗಿತ್ತು. ಲೋಕದ ಶಾಂತಿಯನ್ನು ಕೆಡಿಸಲುದ್ಯುಕ್ತವಾದ ದೌರ್ಜನ್ಯದ ಕೈಯನ್ನು ಹಿಂದೆ ಸರಿಸಲು ಆ ಮುಸ್ಲಿಮರು ತಮ್ಮ ಜೀವವನ್ನು ಅಪಾಯಕ್ಕೆ ಗುರಿಪಡಿಸಿದರು. ಇಸ್ಲಾಮೀ ಚರಿತ್ರೆ ಹೀಗೆ ಸಾಕ್ಷ್ಯ ಹೇಳುತ್ತದೆ: ಅಂತಹ ಪ್ರತಿರೋಧಕ ಯುದ್ಧಗಳು ನಡೆದಾಗ ಇಸ್ಲಾಮ್ ಧರ್ಮದ ಪವಿತ್ರ ಪೈಗಂಬರರು(ಸ) ಮುಸ್ಲಿಮ್ ಸೈನ್ಯ ಯಾವುದೇ ರೀತಿಯ ದೌರ್ಜನ್ಯ ಕೃತ್ಯ ನಡೆಸಬಾರದೆಂದು ಅನೇಕ ಅತ್ಯಂತ ಕಠಿಣ ಶಿಸ್ತಿನ ಆಜ್ಞೆಗಳನ್ನು ನೀಡಿದ್ದರು.

ಚರ್ಚ್‌ಗಳನ್ನು, ಯಹೂದಿ ಆರಾಧನಾಲಯಗಳನ್ನು ಮತ್ತು ಇತರ ಆರಾಧನಾಲಯಗಳನ್ನು ಎಂದೂ ಆಕ್ರಮಿಸಬಾರದೆಂದು ಪವಿತ್ರ ಪೈಗಂಬರರು(ಸ) ಆಜ್ಞಾಪಿಸಿದ್ದರು. ಪುರೋಹಿತರನ್ನೂ ಮತಪಂಡಿತರನ್ನೂ ಧಾರ್ಮಿಕ ನಾಯಕರನ್ನೂ ಮಹಿಳೆಯರನ್ನೂ ಮಕ್ಕಳನ್ನೂ ವೃದ್ಧರನ್ನೂ ಆಕ್ರಮಿಸಬಾರದೆಂದೂ ಬೆಳೆಗಳನ್ನೂ ಮರಗಳನ್ನೂ ನಾಶಮಾಡಬಾರದೆಂದೂ ಪವಿತ್ರ ಪೈಗಂಬರರು(ಸ) ಆಜ್ಞಾಪಿಸಿದ್ದರು. ಇಸ್ಲಾಮಿನ ಪೈಗಂಬರರು(ಸ) ಮತ್ತು ಅನಂತರ ನೇರಮಾರ್ಗದಲ್ಲಿದ್ದ ಅವರ ಪ್ರತಿನಿಧಿಗಳಾದ ಖಲೀಫರು ಮತ್ತು ಅನಂತರ ಇಸ್ಲಾಮ್ ಧರ್ಮದ ನೈಜ ತತ್ವಗಳನ್ನು ಅನುಸರಿಸಿದ ಮುಸ್ಲಿಮ್ ದೊರೆಗಳು ಎಲ್ಲ ಧರ್ಮಗಳ ಆರಾಧನಾಲಯಗಳನ್ನೂ ಪವಿತ್ರ ಸ್ಥಳಗಳನ್ನೂ ಗೌರವಿಸಿ ರಕ್ಷಿಸಿದ್ದರೆಂಬುದು ಚಾರಿತ್ರಿಕ ಸತ್ಯವಾಗಿದೆ.

ಮುಸ್ಲಿಮರೆಲ್ಲರೂ ಇಂತಹ ತತ್ವಗಳಿಗೆ ಕಡ್ಡಾಯವಾಗಿ ಬದ್ಧರಾಗಬೇಕಾಗಿದೆ. ಪವಿತ್ರ ಖುರ್‌ಆನ್ ಅಧ್ಯಾಯ 2 ವಚನ 191ರಲ್ಲಿ ಹೀಗೆ ಹೇಳಲಾಗಿದೆ:

"ನಿಮ್ಮ ವಿರುದ್ಧ ಯುದ್ಧ ಮಾಡುವವರೊಡನೆ ಅಲ್ಲಾಹನ ಮಾರ್ಗದಲ್ಲಿ ನೀವು ಸಹ ಯುದ್ಧ ಮಾಡಿರಿ. ಆದರೆ ಅತಿಕ್ರಮಣ ಮಾಡಬೇಡಿರಿ. ಅತಿಕ್ರಮಣ ಮಾಡುವವರನ್ನು ಅಲ್ಲಾಹನು ಪ್ರೀತಿಸುವುದಿಲ್ಲ."

ಸ್ಪಷ್ಟವೂ ದೃಢವೂ ಆಗಿರುವ ಈ ಆಜ್ಞೆ ಯುದ್ಧ ಮಾಡುವ ಬಗ್ಗೆ ಇರುವ ಶರತ್ತುಗಳನ್ನು ವಿವರಿಸುತ್ತದೆ. ಮುಸ್ಲಿಮರು ಎಂದೂ ಯುದ್ಧವನ್ನು ಆರಂಭಿಸಬಾರದೆಂದೂ ಆಕ್ರಮಣಕಾರಿಗಳಾಗಬಾರದೆಂದೂ ಈ ಆಜ್ಞೆ ಆವಶ್ಯಪಡುತ್ತದೆ. ಆದುದರಿಂದ ಇಸ್ಲಾಮ್ ಆಕ್ರಮಣಕಾರಿ ಜಿಹಾದನ್ನು ಅನುಮತಿಸುತ್ತದೆ ಎಂದು ವಾದಿಸುವವರು ಸಂಪೂರ್ಣವಾಗಿ ತಪ್ಪು ದಾರಿಯಲ್ಲಿದ್ದಾರೆ. ಇದಲ್ಲದೆ ಪವಿತ್ರ ಖುರ್‌ಆನ್ ಅಧ್ಯಾಯ 8 ವಚನ 62ರಲ್ಲಿ ಪವಿತ್ರ ಖುರ್‌ಆನ್ ಶಾಂತಿ ಮತ್ತು ಸೌಹಾರ್ದ ಸ್ಥಾಪಿಸುವ ಸಂದರ್ಭವನ್ನು ಬಿಗಿಯಾಗಿ ಹಿಡಿದುಕೊಳ್ಳಲು ಮುಸ್ಲಿಮರು ಬೇರೆ ಕಾರಣಗಳನ್ನು ನಿರ್ಲಕ್ಷಿಸಿ ಸಿದ್ಧರಾಗಬೇಕೆಂದು ಹೇಳುತ್ತದೆ.

ಸರ್ವಶಕ್ತನಾದ ಅಲ್ಲಾಹನು ಈ ವಚನದಲ್ಲಿ ಹೀಗೆ ಹೇಳಿದ್ದಾನೆ: "ಅವರು ಶಾಂತಿಯೆಡೆಗೆ ವಾಲಿದರೆ ನೀನು ಸಹ ಅದಕ್ಕೆ ಒಪ್ಪು. ಅಲ್ಲಾಹನ ಮೇಲೆ ಭರವಸೆ ಇಡು. ಖಂಡಿತವಾಗಿಯೂ ಅವನು ಎಲ್ಲವನ್ನು ಆಲಿಸುವವನೂ ಎಲ್ಲವನ್ನು ಬಲ್ಲವನೂ ಆಗಿದ್ದಾನೆ."

ಶಾಂತಿಯನ್ನು ಸ್ಥಾಪಿಸಲು ಮುಸ್ಲಿಮರು ತಮಗೆ ಸಾಧ್ಯವಿರುವ ಎಲ್ಲ ಮಾರ್ಗಗಳನ್ನು ಯಾವಾಗಲೂ ಕೈಗೊಳ್ಳಬೇಕೆಂದು ಮೇಲಿನ ವಚನ ಸೂಚಿಸುತ್ತದೆ. ಕದನ ವಿರಾಮಕ್ಕೆ ವಿರೋಧ ಪಕ್ಷ ಅಪೇಕ್ಷಿಸಿದುದು ಸೈನಿಕ ವ್ಯೂಹ ರಚನೆಗೋಸ್ಕರವಾಗಿದ್ದರೂ ಸೈನಿಕರನ್ನು ಒಗ್ಗೂಡಿಸಿ ಪುನರಾಕ್ರಮಣಗಳಿಗೆ ಸಿದ್ಧತೆ ಮಾಡಲಿಕ್ಕಾಗಿದ್ದರೂ ಸರಿ. ಪವಿತ್ರ ಖುರ್‌ಆನ್ ಅಧ್ಯಾಯ 8 ವಚನ 63ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳುತ್ತಾನೆ:

"ಅವರು ನಿನ್ನನ್ನು ವಂಚಿಸಲು ಉದ್ದೇಶಿಸಿದರೆ ಖಂಡಿತವಾಗಿಯೂ ಅಲ್ಲಾಹನು ನಿನಗೆ ಸಾಕು. ತನ್ನ ನೆರವಿನಿಂದಲೂ ಸತ್ಯವಿಶ್ವಾಸಿಗಳಿಂದಲೂ ಅವನೇ ನಿನಗೆ ಶಕ್ತಿ ನೀಡಿದನು."

ವಿರೋಧ ಪಕ್ಷದವರು ವಂಚನೆಯಿಂದ ವರ್ತಿಸುವ ಭಯವಿದ್ದರೂ ಮುಸ್ಲಿಮರು ಅಂತಹ ಭಯವನ್ನು ಕಡೆಗಣಿಸಿ ಸರ್ವಶಕ್ತನಾದ ಅಲ್ಲಾಹನ ಮೇಲೆ ಭರವಸೆ ಇಡಬೇಕೆಂದು ಹೇಳಲಾಗಿದೆ.

ನಾನು ನಿಮ್ಮ ಮುಂದೆ ಇರಿಸಿದ ವಿಚಾರಗಳನ್ನು ಗಮನಿಸಿದ ನಂತರ ಸಹ ಇಸ್ಲಾಮ್ ಉಗ್ರಗಾಮಿ ಹಿಂಸಾತ್ಮಕ ಧರ್ಮ ಎಂದು ಸೂಚಿಸಲು ಸಾಧ್ಯವೇ? ಇದಕ್ಕಿರುವ ಸ್ಪಷ್ಟ ಉತ್ತರ "ಅಲ್ಲ" ಎಂದಾಗಿದೆ. ಇಂದಿನ ಮುಸ್ಲಿಮರು ಬರ್ಬರ ಕೃತ್ಯಗಳನ್ನು ಮತ್ತು ವಿವರಿಸಲಾಗದ ಕ್ರೂರ ಕೃತ್ಯಗಳನ್ನು ಮಾಡುತ್ತಿರುವುದು ಅವರು ಇಸ್ಲಾಮಿನ ನೈಜ ತತ್ವಗಳನ್ನು ಉಲ್ಲಂಘಿಸುವುದರಿಂದಾಗಿದೆ. ಆದುದರಿಂದ ಮುಸ್ಲಿಮರು ವಿದೇಶಗಳಿಗೆ ಪ್ರವೇಶಿಸಿ ಬರ್ಬರ ಹತ್ಯೆ ಮತ್ತು ನಿರ್ದಯ ಕ್ರೂರ ಕೃತ್ಯಗಳನ್ನು ನಡೆಸುವುದು ಹೇಗೆ ತಾನೆ ಅನುಜ್ಞೇಯವಾಗುವುದು?

ಕೆಲವು ಜನರು ಇಸ್ಲಾಮ್ ಧರ್ಮ ಉಪದೇಶಗಳು ಶಾಂತಿಯನ್ನು ಪ್ರತಿಪಾದಿಸುತ್ತವೆ ಎಂದು ಅಂಗೀಕರಿಸುತ್ತಾರಾದರೂ ಇಂತಹ ಉಪದೇಶಗಳನ್ನು ಪವಿತ್ರ ಪೈಗಂಬರರ(ಸ) ಕಾಲದಲ್ಲಿ ಅನುಸರಿಸಿ ಕೃತ್ಯರೂಪಕ್ಕೆ ತಂದಿದ್ದರೋ? ಎಂದು ವಿಚಾರಿಸಬಹುದು. ಈ ವಿಷಯದ ಬಗ್ಗೆ ನೀವು ನನ್ನ ಮಾತನ್ನು ಮಾತ್ರ ಅಂಗೀಕರಿಸಬೇಕೆಂದಿಲ್ಲ. ಮುಸ್ಲಿಮೇತರರಾದ ಚರಿತ್ರೆಗಾರರು ಮತ್ತು ಪೌರಸ್ತ್ಯ ಸಂಸ್ಕೃತಿ ಶಾಸ್ತ್ರಜ್ಞರು ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕಾಲಘಟ್ಟವನ್ನು ಗಂಭೀರವಾಗಿ ಅಧ್ಯಯನ ಮಾಡಿ ಏನು ಹೇಳಿದರೆಂದು ನೋಡಿರಿ. ಉದಾಹರಣೆಗೆ ಸ್ಟಾನ್ಲಿ ಲೇನ್‌ಪೋಲ್– ಅವರು ಬ್ರಿಟಿಷ್ ಪ್ರಜೆಯೂ ಪೌರಸ್ತ್ಯ ಸಂಸ್ಕೃತಿ ಶಾಸ್ತ್ರಜ್ಞರೂ ಪ್ರಾಚೀನ ವಸ್ತು ಶಾಸ್ತ್ರ ವಿದಗ್ಧರೂ ಡಬ್ಲಿನ್ ಯುನಿವರ್ಸಿಟಿಯಲ್ಲಿ ಅರೇಬಿಕ್ ಸ್ಟಡೀಸ್ ವಿಭಾಗದ ಪ್ರೊಫೆಸರರೂ ಆಗಿದ್ದರು. ಪವಿತ್ರ ಪೈಗಂಬರರು(ಸ) ತನ್ನ ಜನ್ಮ ಸ್ಥಳವಾದ ಮಕ್ಕದಲ್ಲಿ ದೀರ್ಘಕಾಲ ಹಿಂಸಾಚಾರಗಳಿಗೆ ಗುರಿಯಾಗಿ ಮದೀನಕ್ಕೆ ವಲಸೆ ಹೋದ ನಂತರ ಮರಳಿ ಬಂದು ಮಕ್ಕ ನಗರವನ್ನು ಜಯಿಸಿ ಪ್ರವೇಶಿಸಿದ ಸಂದರ್ಭವನ್ನು ಹೀಗೆ ಅವರು ವಿವರಿಸುತ್ತಾರೆ:



Yuga - January 2019 (2).pmd 6 2/19/2019, 11:34 AM

"ಮುಹಮ್ಮದ್ ತನ್ನ ವಿರೋಧಿಗಳ ವಿರುದ್ಧ ಗಳಿಸಿದ ಅತ್ಯಂತ ದೊಡ್ಡ ವಿಜಯದ ದಿನ ಅವರು ತನ್ನ ಆತ್ಮದ ಮೇಲೆ ಭವ್ಯ ವಿಜಯ ಗಳಿಸಿದ ದಿನವೂ ಆಗಿತ್ತು..... ವರ್ಷಗಟ್ಟಲೆ ಕಾಲ ತನ್ನ ಮೇಲೆ ಖುರೈಶ್ ಗೋತ್ರದವರು ಮಾಡಿದ ದುಃಖದಾಯಕವಾದ ಮತ್ತು ಕ್ರೂರ ಅಪಹಾಸ್ಯ ಕೃತ್ಯಗಳನ್ನು ಅವರು ನಿಶ್ಶರ್ತವಾಗಿ ಕ್ಷಮಿಸಿದರು. ಅವರು ಮಕ್ಕದ ಎಲ್ಲ ನಿವಾಸಿಗಳಿಗೆ ಕ್ಷಮಾದಾನ ನೀಡಿದರು. ಸೈನ್ಯ ಅವರ ಮಾದರಿಯನ್ನು ಅನುಸರಿಸಿತು ಮತ್ತು ನಗರವನ್ನು ಮೌನವಾಗಿಯೂ ಶಾಂತಿಯುತವಾಗಿಯೂ ಪ್ರವೇಶಿಸಿತು. ಯಾವುದೇ ಮನೆ ಕೊಳ್ಳೆ ಹೊಡೆಯಲ್ಪಡಲಿಲ್ಲ. ಯಾವುದೇ ಮಹಿಳೆ ಅಪಮಾನಿಸಲ್ಪಡಲಿಲ್ಲ..... ಮುಹಮ್ಮದ್ ತನ್ನ ಜನ್ಮ ನಗರವನ್ನು ಪ್ರವೇಶಿಸಿದುದು ಆ ರೀತಿಯಾಗಿತ್ತು. ವಿಜಯಗಳನ್ನು ವಿವರಿಸುವ ಪೂರ್ವಕಾಲದ ಚರಿತ್ರೆಗಳಲ್ಲಿ ಇದಕ್ಕೆ ಸಮಾನವಾದ ವಿಜಯಶಾಲಿ ನಗರ ಪ್ರವೇಶದ ಉದಾಹರಣೆ ಕಾಣಲು ಸಿಗಲಾರದು." (Lane-Poole S (1882), The Speeches and Table Talk Of The Prophet Muhammad, London, Mc Millan.)

ಈ ರೀತಿ ಈ ಲೇಖಕರು ಸಾಕ್ಷ್ಯ ಹೇಳುತ್ತಾರೆ– ವಿಜಯೋತ್ಸವದ ಕಾಲದಲ್ಲಿ ಪವಿತ್ರ ಪೈಗಂಬರರು(ಸ) ಹೆಮ್ಮೆ ಪ್ರಕಟಿಸಲಿಲ್ಲ. ತನ್ನನ್ನು ಮತ್ತು ತನ್ನ ಅನುಯಾಯಿಗಳನ್ನು ಪೀಡಿಸಿದವರ ವಿರುದ್ಧ ಪ್ರತೀಕಾರ ಮಾಡಲಿಲ್ಲ. ಹಿಂಸಿಸಿದ ಎಲ್ಲರಿಗೂ ಅವರು ಕ್ಷಮಾದಾನ ಮಾಡಿದರು.

ಆದುದರಿಂದ ನಾನು ನಿಖರವಾಗಿ ಹೇಳುತ್ತಿದ್ದೇನೆ– ಉಗ್ರವಾದಿ ಭಯೋತ್ಪಾದಕ ಕೃತ್ಯಗಳನ್ನು ಮಾಡುವವರು ಪವಿತ್ರ ಖುರ್‌ಆನಿನ ಉಪದೇಶಗಳನ್ನೂ ಪವಿತ್ರ ಪೈಗಂಬರರ(ಸ) ನಡೆವಳಿಕೆಗಳನ್ನೂ ಉಲ್ಲಂಘಿಸುವವರಾಗಿದ್ದಾರೆ.

ಇಸ್ಲಾಮಿನ ಪವಿತ್ರ ಪೈಗಂಬರರು(ಸ) ತನ್ನನ್ನು ಮತ್ತು ತನಗೆ ಪ್ರಿಯರಾದವರನ್ನು ಚಿತ್ರ ಹಿಂಸೆಗೆ ಗುರಿಪಡಿಸಿದ ಮಕ್ಕದ ನಿವಾಸಿಗಳನ್ನು ಕ್ಷಮಿಸಿದರು. ಆದರೆ ಇಂದಿನ ಕಾಲದ ಮುಸ್ಲಿಮ್ ನಾಮಧಾರಿಗಳು ನಿರಪರಾಧಿ ಜನರನ್ನು ಹಿಂಸಾಚಾರಗಳಿಗೆ ಗುರಿಪಡಿಸುತ್ತಾರೆ ಮತ್ತು ಕೊಲ್ಲುತ್ತಿದ್ದಾರೆ.

ಹೀಗಿದ್ದರೂ ಒಂದು ವಿಷಯ ಹೇಳುವುದು ಸಮಂಜಸವಾಗಿದೆ. ಮುಸ್ಲಿಮ್ ದೇಶಗಳಲ್ಲಿ ಇಂದು ನಡೆಯುತ್ತಿರುವ ಯುದ್ಧಗಳಿಗೆ ಬಹಿರಂಗವಾಗಿ ಅಥವಾ ಪರೋಕ್ಷವಾಗಿ ಆಯುಧಗಳನ್ನು ಪೂರೈಕೆ ಮಾಡುವವರು ಈ ಪ್ರದೇಶದಿಂದ ಹೊರಗಿರುವವರಾಗಿದ್ದಾರೆ. ಮುಸ್ಲಿಮ್ ಸರಕಾರಗಳಾಗಲಿ, ವಿದ್ರೋಹಿ ಗುಂಪುಗಳಾಗಲಿ, ಭಯೋತ್ಪಾದಕ ಸಂಘಟನೆಗಳಾಗಲಿ, ಇವುಗಳಲ್ಲಿ ಯಾವುದಕ್ಕೂ ಅವರೆಲ್ಲರೂ ಬಳಸುತ್ತಿರುವ ವಿವಿಧ ವಿನಾಶಕಾರಿ ಆಧುನಿಕ ಆಯುಧಗಳನ್ನು ನಿರ್ಮಾಣ ಮಾಡುವ ಶಕ್ತಿ ಸಾಮರ್ಥ್ಯಗಳಿಲ್ಲ. ಸಿರಿಯಾ ಮತ್ತು ಇರಾಖ್ ದೇಶಗಳಲ್ಲಿ ಬಳಸಲಾಗುವ ಆಯುಧಗಳಲ್ಲಿ ಬಹುತೇಕ ಭಾಗ ವಿದೇಶದಿಂದ ಆಮದು ಮಾಡಿದವುಗಳಾಗಿವೆ. ಆದುದರಿಂದ ಅಂತಹ ಮಾರಕಾಯುಧಗಳನ್ನು ನಿರ್ಮಿಸಿ ಮುಸ್ಲಿಮ್ ದೇಶಗಳಿಗೆ ಮಾರಾಟ ಮಾಡುವವರು ಇಂದಿನ ಜಾಗತಿಕ ಅಸ್ತವ್ಯಸ್ತತೆಗೆ ತಮಗಿರುವ ಪಾಲಿನ ಹೊಣೆಗಾರಿಕೆಯನ್ನು ವಹಿಸಿಕೊಳ್ಳಬೇಕು.

ಅನೇಕ ವಿಶ್ಲೇಷಣಗಾರರು ಮತ್ತು ತಜ್ಞರು ದಾಯೆಶ್ (ಐ ಎಸ್) ಎಂಬ ಭಯೋತ್ಪಾದಕರು, ವಿದ್ರೋಹಿಗಳು ಮತ್ತು ಉಗ್ರಗಾಮಿ ಗುಂಪುಗಳು ಬಳಸುವ ಆಯುಧಗಳು ಪಶ್ಚಿಮದ ದೇಶಗಳಲ್ಲಿ ಅಥವಾ ಪೂರ್ವ ಯುರೋಪಿನಲ್ಲಿ ನಿರ್ಮಿಸಲ್ಪಟ್ಟವುಗಳಾಗಿವೆ ಎಂದು ನಿಸ್ಸಂಶಯವಾಗಿ ಸಾಬೀತು ಗೊಳಿಸಿದ್ದಾರೆ. ಆದುದರಿಂದ ಯುದ್ಧಗಳನ್ನು ಕೊನೆಗೊಳಿಸುವುದಕ್ಕೆ ಬದಲಾಗಿ ಪ್ರಮುಖ ಶಕ್ತಿಶಾಲಿ ದೇಶಗಳು ಮುಸ್ಲಿಮ್ ದೇಶಗಳಲ್ಲಿ ಯುದ್ಧವನ್ನು ಮುಂದುವರಿಯಲು ಉತ್ತೇಜಿಸುತ್ತಿವೆ. ಶಾಂತಿ ಸ್ಥಾಪನೆಗೆ ಆದ್ಯತೆ ನೀಡುವುದಕ್ಕೆ ಬದಲಾಗಿ ಈ ದೇಶಗಳು ನಿರಂತರವಾಗಿ ತಮ್ಮ ಪ್ರಭಾವ ವರ್ಧಿಸುವ ಮತ್ತು ಯುದ್ಧದಿಂದ ಲಾಭ ಗಳಿಸುವ ಪ್ರಯತ್ನ ಮಾಡುತ್ತಿವೆ. ಮುಸ್ಲಿಮ್ ದೇಶಗಳಲ್ಲಿ ಅಂತರ್‌ಯುದ್ಧಗಳು ಮತ್ತು ಸಂಘರ್ಷ ಪ್ರಾರಂಭಿಸಿದಾಗ ನೆರೆ ಹೊರೆಯ ದೇಶಗಳು ಹಸ್ತಕ್ಷೇಪ ಮಾಡಿ ಅಲ್ಲಿ ಶಾಂತಿ ಸ್ಥಾಪಿಸಲು ಪ್ರಯತ್ನಿಸುತ್ತಿದ್ದರೆ ಅದು ಉತ್ತಮವಾಗುತ್ತಿತ್ತು.

ಆದರೆ ಮಹಾಶಕ್ತಿಶಾಲಿ ದೇಶಗಳ ವಿದೇಶ ಧೋರಣೆ ಮತ್ತು ವಾಣಿಜ್ಯ ಹಿತಾಶಕ್ತಿಗಳು ಬೇರೆಯೇ ಆದೇಶ ನೀಡಿದುವು. ಉದಾಹರಣೆಗೆ, ಅನೇಕ ಪಾಶ್ಚಿಮಾತ್ಯ ದೇಶಗಳು ಬಿಲಿಯನ್ ಗಟ್ಟಲೆ ಬೆಲೆಬಾಳುವ ಯುದ್ಧಾಯುಧಗಳನ್ನು ಸೌದಿ ಅರೇಬಿಯಾ ದೇಶಕ್ಕೆ ಮಾರಾಟ ಮಾಡುತ್ತಿವೆ. ಬಹಳ ಚಿಕ್ಕ ಅರಬ್ ದೇಶವಾದ ಯಮನ್ ಮೇಲೆ ದೌರ್ಜನ್ಯ ಮಾಡಲು ಈ ಆಯುಧಗಳು ಬಳಸಲ್ಪಡುತ್ತವೆ ಎಂದು ತಿಳಿದುಕೊಂಡ ನಂತರ ಸಹ ಹೀಗೆ ಮಾಡಲಾಗುತ್ತಿದೆ. ಸೌದಿ ಅರೇಬಿಯಾ ಯಮನ್ ದೇಶದ ವಿರುದ್ಧ ಸ್ವಚ್ಛಂದ ಬಾಂಬ್ ದಾಳಿ ಮಾಡಿ ಮಿಲಿಯಗಟ್ಟಲೆ ಜನರನ್ನು ಕೊಂದು ನಗರಗಳನ್ನು ಧ್ವಂಸ ಮಾಡುತ್ತಿದೆ. ಮಿಲಿಯಗಟ್ಟಲೆ ನಿರಪರಾಧಿ ಜನರು ಕೊಲ್ಲಲ್ಪಡುತ್ತಿದ್ದಾರೆ. ಅಭಯ ಕೇಂದ್ರಗಳಾದ ಆಸ್ಪತ್ರೆಗಳನ್ನು ಕೂಡ ಬಾಂಬ್ ದಾಳಿಗೆ ಗುರಿಪಡಿಸಲಾಗುತ್ತಿದೆ.

ಸಿರಿಯಾ ಮತ್ತು ಇರಾಖ್‌ನಲ್ಲಿ ಸಹ ಹೀಗೆಯೇ ಸಂಭವಿಸುತ್ತಿದೆ. ಯುದ್ಧದಿಂದ ಸಂತ್ರಸ್ತರಾದವರಿಗೆ ಸೇವೆ ಸಲ್ಲಿಸಲು ಧೈರ್ಯದಿಂದ ಮುಂದೆ ಬಂದ ಡಾಕ್ಟರ್‌ಗಳು ಮತ್ತು ನರ್ಸ್‌ಗಳು ಸಹ ಆಕ್ರಮಣಗಳಿಗೆ ಈಡಾಗಿದ್ದಾರೆ. ಆರಾಧನಾಲಯಗಳು ಆಕ್ರಮಿಸಲ್ಪಡುತ್ತಿವೆ. ನಿರಪರಾಧಿ ಮಹಿಳೆಯರು ಮತ್ತು ಮಕ್ಕಳು ವಾಸಿಸುತ್ತಿರುವ ಬಹುಮಾಳಿಗೆ ಕಟ್ಟಡಗಳು ಸಹ ಆಕ್ರಮಣಗಳಿಗೆ ಗುರಿಯಾಗಿ ಅವರು ಕೊಲ್ಲಲ್ಪಡುತ್ತಿದ್ದಾರೆ. ಇವುಗಳಲ್ಲಿ ಯಾವುದನ್ನಾದರೂ ಸಮರ್ಥಿಸಲು ಸಾಧ್ಯವೇ? ಈ ಕಾಲಘಟ್ಟದಲ್ಲಿ ಇಂತಹ ಘಟನೆಗಳನ್ನು ಸಹಿಸುವುದು ಹೇಗೆ? ಈ ಅನ್ಯಾಯಕರ ಧೋರಣೆಗಳ ಅಂತಿಮ ಪರಿಣಾಮ ಏನು? ಆ ದೇಶಗಳ ಯುವ ಜನರು ತೀವ್ರವಾದಿಗಳಾಗುತ್ತಿದ್ದಾರೆ. ತಮ್ಮ ಭಾವೀ ಜೀವಿತದ ಬಗ್ಗೆ ಯಾವುದೇ ಉತ್ತಮ ಪ್ರತೀಕ್ಷೆ ಹೊಂದದ ಅವರು ತಮ್ಮನ್ನು ಕಷ್ಟಕ್ಕೆ ಗುರಿಪಡಿಸುವುದರಲ್ಲಿ ಪ್ರಮುಖ ಪಾತ್ರವಹಿಸಿದುವು ಎಂದು ಅವರು ನಂಬುವ ಪಶ್ಚಿಮದ ದೇಶಗಳ ವಿರುದ್ಧ ಭಯಾನಕ ಭಯೋತ್ಪಾದಕ ಕೃತ್ಯಗಳನ್ನು ನಡೆಸುತ್ತಿದ್ದಾರೆ. ಆದುದರಿಂದ ನಾನು ಪುನಃ ಹೇಳುತ್ತಿದ್ದೇನೆ– ಲೋಕದಲ್ಲಿ ಶಾಂತಿ ಸ್ಥಾಪಿಸುವ ತುರ್ತು ಆವಶ್ಯಕತೆ ಇದೆ. ಇಂದಿನ ದಿನವನ್ನು ಕೆನಡದಲ್ಲಿಯೂ ಲೋಕದ ಅನೇಕ ಭಾಗಗಳಲ್ಲಿ ರಿಮೆಂಬ್ರೆನ್ಸ್ ಡೇ (ನೆನಪಿಸುವ ದಿನ) ಎಂದು ಆಚರಿಸುತ್ತಿದ್ದಾರೆ. ನೀವು ದ್ವಿತೀಯ ಮಹಾಯುದ್ಧದ ಕಡೆಗೆ ತಿರುಗಿ ನೋಡಿದರೆ ಅಂದಾಜು ಎಪ್ಪತ್ತು ಮಿಲಿಯ ಜನರು ಆ ಯುದ್ಧದಲ್ಲಿ ತಮ್ಮ ಜೀವವನ್ನು ಕಳೆದುಕೊಂಡರೆಂದು ನಾವು ಕಾಣುತ್ತೇವೆ.

ಅನೇಕ ದಶಕಗಳು ದಾಟಿ ಹೋಗಿದ್ದರೂ ಒಬ್ಬನು ಆ ಮಹಾಯುದ್ಧದಲ್ಲಿ ಸಂಭವಿಸಿದ ವಿನಾಶದ ಬಗ್ಗೆ ಮತ್ತು ಪಾಶವಿಕ ಕೃತ್ಯಗಳ ಬಗ್ಗೆ ಚಿಂತಿಸಿದರೆ ಬೆನ್ನೆಲುಬಿನಲ್ಲಿ ನಡುಕ ಉಂಟಾಗುತ್ತದೆ. ಆ ಮಹಾಯುದ್ಧ ನಮಗೆ ಹೀಗೆ ಕಲಿಸಿತು. ಆಧುನಿಕ ಕಾಲದ ಯುದ್ಧಗಳು ಧರ್ಮದೊಂದಿಗೆ ಸಂಬಂಧಿಸಿರದೆ ದುರಾಶೆಯ



Yuga - January 2019 (2).pmd 7 2/19/2019, 11:34 AM

ಪರಾಕಾಷ್ಠೆ ಮತ್ತು ಅಧಿಕಾರಕ್ಕೋಸ್ಕರ ಶಮನವಾಗದ ದಾಹದ ಕಾರಣದಿಂದ ಸಂಭವಿಸುತ್ತವೆ. ಆ ಯುದ್ಧದಲ್ಲಿ ಪ್ರಥಮ ಬಾರಿ ಅಣುಬಾಂಬನ್ನು ಲೋಕವು ಬಳಸಿತು. ಯುನೈಟೆಡ್ ಸ್ಟೇಟ್ಸ್ (ಅಮೇರಿಕ) ಅದನ್ನು ಬಳಸಿ ಮಾಡಿದ ದೌರ್ಜನ್ಯವನ್ನು ಇಸ್ಲಾಮ್ ಧರ್ಮದ ಪೈಗಂಬರರ ಉದಾಹರಣೆಯೊಂದಿಗೆ ಇರುವ ವಿಭಿನ್ನತೆಯನ್ನು ಸೂಚಿಸುತ್ತಾ ಇಪ್ಪತ್ತನೇ ಶತಮಾನದ ಲೇಖಿಕೆ ರೂಥ್ ಕ್ರಾನ್ಸ್‌ಟನ್ 1949ರಲ್ಲಿ "ವರ್ಲ್ಡ್ ಫೈತ್" ಎಂಬ ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ:

"ಮುಹಮ್ಮದ್ ಎಂದೂ ಯುದ್ಧವನ್ನೂ ರಕ್ತಪಾತವನ್ನೂ ಪ್ರಚೋದಿಸಿರಲಿಲ್ಲ. ಅವರು ಹೋರಾಡಿದ ಪ್ರತಿಯೊಂದು ಯುದ್ಧ ಆಕ್ರಮಣಗಾರರನ್ನು ಹಿಮ್ಮೆಟ್ಟಿಸಲಿಕ್ಕಾಗಿತ್ತು. ಅವರು ಬದುಕಿ ಬಾಳಲು ಪ್ರತಿರೋಧಾತ್ಮಕ ಯುದ್ಧ ಮಾಡಿದರು..... ಅವರು ಆ ಕಾಲದ ಆಯುಧಗಳನ್ನು ಬಳಸಿ ಆ ಕಾಲದ ಸಂಪ್ರದಾಯಗಳ ಪ್ರಕಾರ ಯುದ್ಧ ಮಾಡಿದರು....

......ನಿಶ್ಚಯವಾಗಿಯೂ 140 ಮಿಲಿಯ ಜನರಿರುವ ಕ್ರೈಸ್ತ ಸಮುದಾಯವಾದ ನಾವು ಇಂದು 1,20,000 ನಿಸ್ಸಹಾಯಕ ಜನರನ್ನು ಒಂದು ಬಾಂಬ್‌ನಿಂದ ಕೊಲ್ಲುತ್ತಿರುವಾಗ ತನ್ನ ಅತ್ಯಂತ ದೊಡ್ಡ ಯುದ್ಧದಲ್ಲಿ ಐನೂರು ಅಥವಾ ಆರುನೂರು ಜನರನ್ನು ಕೊಂದ ಒಬ್ಬ ನಾಯಕರನ್ನು ವಿಮರ್ಶಿಸುವುದಾದರೂ ಹೇಗೆ?"

ಇದು ಒಬ್ಬ ಮುಸ್ಲಿಮನಾಗಲಿ, ಮುಸ್ಲಿಮ್ ಪಕ್ಷಪಾತಿಯಾಗಲಿ ಬರೆದುದಲ್ಲ. ಇದು ಒಬ್ಬ ಗೌರವಾನ್ವಿತ ನಿಷ್ಪಕ್ಷಪಾತಿ ಮುಸ್ಲಿಮೇತರ ಲೇಖಿಕಿ ಬರೆದುದಾಗಿದೆ. ವಾಸ್ತವಿಕತೆ ಏನೆಂದರೆ ಇಂದಿನ ಕಾಲದ ಯುದ್ಧಗಳು ಧಾರ್ಮಿಕ ಕಾರಣದಿಂದ ನಡೆಯುವುದಿಲ್ಲ. ಭೂಮಿ ಮತ್ತು ರಾಜಕೀಯ ಕಾರಣಗಳಿಂದಲೂ ಸಂಪತ್ತು ಮತ್ತು ಅಧಿಕಾರ ಗಳಿಸಲಿಕ್ಕಾಗಿಯೂ ಈ ಯುದ್ಧಗಳು ನಡೆಸಲ್ಪಡುತ್ತವೆ. ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಯುನೈಟೆಡ್ ಸ್ಟೇಟ್ಸ್ ಕೈಯಲ್ಲಿ ಮಾತ್ರ ಅಣುಬಾಂಬು ಇತ್ತು. ಇಂದಿನ ಕಾಲದಲ್ಲಿ ಅನೇಕ ದೇಶಗಳು, ಕೆಲವು ಅತ್ಯಂತ ಚಿಕ್ಕ ದೇಶಗಳು ಅಣುಬಾಂಬುಗಳನ್ನು ಹೊಂದಿವೆ. ಈ ಅಣುಬಾಂಬ್‌ಗಳು ಯುದ್ಧ ಪ್ರಿಯರಾದ ಭಯೋತ್ಪಾದಕರ ಕೈಗೆ ಸೇರುವ ಬಗ್ಗೆ ವರ್ಧಿಸುತ್ತಿರುವ ಆತಂಕವಿದೆ.

ಲೋಕವು ಮಹಾವಿನಾಶದ ಪ್ರಪಾತದ ಅಂಚಿನಲ್ಲಿ ಇರುವುದು ಪ್ರಶ್ನಾತೀತವಾಗಿದೆ. ತೃತೀಯ ಜಾಗತಿಕ ಯುದ್ಧದ ಎಚ್ಚರಿಕೆ ನೀಡುವ ಚಂಡಮಾರುತದ ಮೋಡಗಳು ದಿನಗಳೆದಂತೆ ದಟ್ಟವಾಗುತ್ತಾ ಇವೆ. ಅಂತಹ ಯುದ್ಧದ ದುಷ್ಪರಿಣಾಮಗಳು ಅನೇಕ ದಶಕಗಳ ಕಾಲ ಮುಂದುವರಿಯುವುವು. ಅಣುವಿಕರಣದ ದೀರ್ಘಕಾಲೀನ ಪರಿಣಾಮದ ಕಾರಣ ಅಂಗವಿಕಲರಾಗಿ ಅನೇಕ ಪೀಳಿಗೆಗಳ ಮಕ್ಕಳು ಜನಿಸುವ ಸಂಭವಗಳಿವೆ. ಆದುದರಿಂದ ಮಾನವರೆಲ್ಲರೂ ತುರ್ತಾಗಿ ಒಗ್ಗೂಡಿ ನಮ್ಮ ಭಾವೀ ಜೀವಿತವನ್ನು ಸಂರಕ್ಷಿಸಲು ಪರಿಶ್ರಮಿಸಬೇಕಾದುದು ಇಂದಿನ ಆವಶ್ಯಕತೆಯಾಗಿದೆ.

ಜಾಗತಿಕ ಅಸ್ವಸ್ಥತೆಗೆ ಮುಸ್ಲಿಮರನ್ನು ಮಾತ್ರ ದೂಷಿಸುವುದಕ್ಕೆ ಬದಲಾಗಿ ಜಾಗತಿಕ ಮಹಾಶಕ್ತಿ ದೇಶಗಳು ಹಿಂದಕ್ಕೆ ಹೆಜ್ಜೆಹಾಕಿ ತಮ್ಮನ್ನೇ ಪರಿಶೋಧಿಸಬೇಕು. ಮುಸ್ಲಿಮರು ತಮ್ಮ ದೇಶಕ್ಕೆ ಆಗಮಿಸುವುದನ್ನು ತಡೆಗಟ್ಟುವೆವು ಎಂದು ಹೇಳುವ ಪ್ರಸಿದ್ಧಿಪ್ರಿಯ ರಾಜಕಾರಣಿಗಳಿಗಿಂತ ನಮ್ಮನ್ನು ವಿಭಜಿಸುವ ವ್ಯತ್ಯಾಸಗಳನ್ನು ದೂರ ಸರಿಸಿ ನಮ್ಮನ್ನು ಒಗ್ಗೂಡುವಂತೆ ಮಾಡುವ ಸೇತುವೆಗಳನ್ನು ನಿರ್ಮಿಸುವ ರಾಜಕಾರಣಿಗಳ ಆವಶ್ಯಕತೆ ಇದೆ.

ಅನ್ಯರ ಸಾಧನ ಸಂಪತ್ತನ್ನು ದುರಾಶೆಯಿಂದ ನೋಡುವುದಕ್ಕೆ ಬದಲಾಗಿ ಜಾಗತಿಕ ಮಹಾಶಕ್ತಿಶಾಲಿ ದೇಶಗಳು ಮಾನವರ ಅಭಿವೃದ್ಧಿಗೋಸ್ಕರ ತಮ್ಮ ಶಕ್ತಿಗಳನ್ನು ಕೇಂದ್ರೀಕರಿಸಬೇಕು. ಯುದ್ಧ ಮತ್ತು ರಕ್ತಪಾತದ ದುಷ್ಪರಿಣಾಮಗಳಿಂದ ನಮ್ಮ ಮುಂದಿನ ಪೀಳಿಗೆಗಳನ್ನು ರಕ್ಷಿಸುವುದು ನಮ್ಮ ಅತ್ಯಂತ ಮುಖ್ಯ ಉದ್ದೇಶ ಲಕ್ಷ್ಯವಾಗಬೇಕು. ಆದುದರಿಂದ ಸರಕಾರಗಳು ಮತ್ತು ಧೋರಣೆ ರೂಪಿಸುವವರು ಲೋಕದ ಮೇಲ್ವಿಚಾರಕರೆಂಬ ನೆಲೆಯಲ್ಲಿ ತಮ್ಮ ಬೃಹತ್ ಹೊಣೆಗಾರಿಕೆಗಳನ್ನು ಮನವರಿಕೆ ಮಾಡಿಕೊಳ್ಳಬೇಕು. ನಮ್ಮ ನಂತರದ ಪೀಳಿಗೆಯುವರು ಅಂಗವಿಕಲರಾಗಿ ಹುಟ್ಟಬಾರದೆಂದೂ ಅವರು ಆರೋಗ್ಯದಿಂದಲೂ ಸಂತೋಷಭರಿತರಾಗಿಯೂ ಹೆಚ್ಚಿನ ಶಾಂತಿ ಮತ್ತು ಸೌಹಾರ್ದಭರಿತ ಲೋಕಕ್ಕೆ ಆಗಮಿಸುವುದನ್ನು ಖಾತರಿ ಪಡಿಸಬೇಕು.

ಪರಿಪೂರ್ಣವಾದ ನ್ಯಾಯಪಾಲನೆ ನಿಸ್ವಾರ್ಥ ಭಾವನೆಯ ತಳಹದಿಯ ಮೇಲೆ ಸ್ಥಾಪಿಸಲ್ಪಟ್ಟು ಎಲ್ಲ ವಿಧ ದುರಾಶೆಗಳನ್ನು ಜಯಿಸುವಾಗ ಇದು ಸಾಧ್ಯವಾಗುವುದು. ಯುದ್ಧವನ್ನು ಪ್ರೋತ್ಸಾಹಿಸುವವರಿಗೆ ಅಲ್ಲಾಹನು ವಿವೇಕವನ್ನು ದಯಪಾಲಿಸಲಿ ಮತ್ತು ತಮ್ಮ ಕೃತ್ಯಗಳ ದುಷ್ಪರಿಣಾಮಗಳನ್ನು ಅವರು ಬೇಗನೆ ಅರಿತುಕೊಳ್ಳುವವರಾಗಲಿ. ಲೋಕದ ಜನರು ತಮ್ಮ ಸೃಷ್ಟಿಕರ್ತನನ್ನು ಗುರುತಿಸುವಂತಾಗಲಿ. ಅವರು ಶಾಂತಿಗೋಸ್ಕರ ಮತ್ತು ಅನ್ಯೋನ್ಯ ಹಕ್ಕುಗಳನ್ನು ಈಡೇರಿಸುವುದಕ್ಕೆ ಪರಿಶ್ರಮಪಡುವುದರ ಮಹತ್ವ ಅರಿತುಕೊಳ್ಳುವಂತಾಗಲಿ. ಮಾನವರಿಗೆ ಉತ್ತಮ ಭಾವೀ ಜೀವನ ದೊರೆಯುವಂತೆ ಮಾಡಲು ಅಲ್ಲಾಹನು ನಮಗೆ ಸಾಮರ್ಥ್ಯ ದಯಪಾಲಿಸಲಿ – ಆಮೀನ್.

ನೀವೆಲ್ಲರೂ ನಮ್ಮ ಆಮಂತ್ರಣವನ್ನು ಸ್ವೀಕರಿಸಿ ಆಗಮಿಸಿದುದಕ್ಕಾಗಿ ನಿಮಗೆ ಇನ್ನೊಮ್ಮೆ ಕೃತಜ್ಞತೆ ಸಲ್ಲಿಸಿ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ನಿಮಗೆ ಬಹಳ ಧನ್ಯವಾದಗಳು. ♦

**(Review of Religions - February 2017 ಸಂಚಿಕೆಯಿಂದ. ಭಾಷಾಂತರ: ಯಮ್. ಉಬೈದುಲ್ಲಾ)**

# LOVE FOR ALL - HATRED FOR NONE

# ಎಲ್ಲರೊಂದಿಗೆ ಪ್ರೀತಿ – ಯಾರೊಂದಿಗೂ ದ್ವೇಷವಿಲ್ಲ



Yuga - January 2019 (2).pmd 8 2/19/2019, 11:34 AM

# ಯಥಾರ್ಥ ಅಹ್ಮದಿಯರ ಗುಣಲಕ್ಷಣಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಅಮೆರಿಕದ ಹ್ಯೂಸ್ಟನ್‌ನ **'ಬೈತುಲ್ ಸಮೀಅ್'** ಮಸೀದಿಯಲ್ಲಿ **26–10–2018**ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

ಅಲ್ಲಾಹನು ತನ್ನ ಅನುಗ್ರಹದಿಂದ ನಮಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವ ಸೌಭಾಗ್ಯ ನೀಡಿ ನಮ್ಮ ಮೇಲೆ ಬಹಳದೊಡ್ಡ ಔದಾರ್ಯವನ್ನು ಮಾಡಿದ್ದಾನೆ. ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಮಸೀಹ್ ಮೌಊದ್ ಅಲೈಹಿಸಲಾಮರನ್ನು "ನಮ್ಮ ಮಹ್‌ದೀ" ಎಂದು ಕರೆದಿದ್ದಾರೆ. ಹಝ್ರತ್ ಪೈಗಂಬರ್[ಸ] ನಮ್ಮ ಮಹ್‌ದೀ ಎಂದು ಹೇಳಿ ವಾಗ್ದತ್ತ ಮಸೀಹ್ ಮತ್ತು ಮಹ್‌ದೀ ಅಲೈಹಿಸ್ಸಲಾಮರ ಬಗ್ಗೆ ತನ್ನ ಪ್ರೀತಿ ಮತ್ತು ಸಾಮೀಪ್ಯದ ಪ್ರಕಟಣೆ ಉನ್ನತವಾದ ರೀತಿಯಲ್ಲಿ ಮಾಡಿದ್ದಾರೆ. ಹಝ್ರತ್ ಮಸೀಹ್ ಮೌಊದ್[ಅ] ತನ್ನನ್ನು ನಂಬುವವರೊಡನೆ ಬೈಅತಿಗೆ ಸಂಬಂಧಿಸಿದ ಹೊಣೆಗಾರಿಕೆಗಳನ್ನು ಈಡೇರಿಸಿ ನೈಜ ವಿಶ್ವಾಸಿಗಳಾಗುವ ಬಗ್ಗೆ ನೋವುಭರಿತರಾಗಿ ಮಾರ್ಗದರ್ಶನ ನೀಡಿದ್ದಾರೆ. ಆ ಮಾರ್ಗದರ್ಶನಗಳನ್ನು ನಾವು ಯಾವಾಗಲೂ ನಮ್ಮ ಮುಂದೆ ಇರಿಸಬೇಕಾಗಿದೆ. ಹೀಗೆ ಮಾಡುವುದೇ ನಮ್ಮ ಆಧ್ಯಾತ್ಮಿಕ ತರಬೇತಿಯ ಮಾರ್ಗವಾಗಿದೆ. ನಾವು ಈ ಮಾರ್ಗದ ಮೂಲಕವೇ ಧರ್ಮದ ಬಗ್ಗೆ ವಾಸ್ತವಿಕ ಜ್ಞಾನ ಗಳಿಸುವೆವು. ನಾವು ಈ ಮಾರ್ಗದ ಮೂಲಕವೇ ಅಲ್ಲಾಹನ ಸಾಮೀಪ್ಯ ಗಳಿಸುವ ಮಾರ್ಗವನ್ನು ಅನ್ವೇಷಿಸಬಲ್ಲೆವು. ನಾವು ಈ ಮಾರ್ಗವನ್ನು ಅವಲಂಬಿಸಿಯೇ ಪವಿತ್ರ ಖುರ್‌ಆನಿನ ಸೂಕ್ಷ್ಮಜ್ಞಾನ ಗಳಿಸಬಲ್ಲೆವು. ಈ ಮಾರ್ಗದ ಮೂಲಕವೇ ಹಝ್ರತ್ ಪೈಗಂಬರರ[ಸ] ಮಹತ್ವಪೂರ್ಣ ಸ್ಥಾನವನ್ನು ನಾವು ಅರಿತುಕೊಳ್ಳಬಲ್ಲೆವು. ಈ ಮಾರ್ಗದ ಮೂಲಕವೇ ನಾವು ನಮ್ಮ ವಿಶ್ವಾಸದ ಸ್ಥಿತಿಯನ್ನು ಉತ್ತಮಗೊಳಿಸಬಲ್ಲೆವು.ಈ ಮಾರ್ಗದ ಮೂಲಕವೇ ನಾವು ನಮ್ಮ ಅನುಷ್ಠಾನ ಕರ್ಮಗಳನ್ನು ಉತ್ತಮಪಡಿಸಬಲ್ಲೆವು. ಜ್ಞಾನದ ಈ ಖಜಾನೆಯನ್ನು ಹೊಂದಿದ್ದರೂ ನಾವು ಅದರಿಂದ ಲಾಭ ಪಡೆಯುವುದಿಲ್ಲವಾದರೆ ಅದು ನಮ್ಮ ದೌರ್ಭಾಗ್ಯವಾಗಿದೆ. ಹಝ್ರತ್ ಮಸೀಹ್ ಮೌಊದರ[ಅ] ನುಡಿಗಳಲ್ಲಿರುವ ಶಕ್ತಿ, ಪರಿಶುದ್ಧತೆ ಮತ್ತು ಪ್ರಭಾವ ಬೇರೆ ಯಾವುದೇ ನುಡಿಯಲ್ಲಿ ಇರಲು ಸಾಧ್ಯವಿಲ್ಲ. ಏಕೆಂದರೆ, ಹಝ್ರತ್ ಮಸೀಹ್ ಮೌಊದರನ್ನು[ಅ] ಅಲ್ಲಾಹನು ಹಝ್ರತ್ ಪೈಗಂಬರರನ್ನು[ಅ] ಅನುಸರಿಸುವ ಸೇವಕನನ್ನಾಗಿ ಮಾಡಿ ಇಸ್ಲಾಮಿನ ಪುನರುತ್ಥಾನಕ್ಕೋಸ್ಕರ ಮತ್ತು ಅಲ್ಲಾಹನ ಸಾಮೀಪ್ಯ ಗಳಿಸಲಿಕ್ಕೋಸ್ಕರ ಈ ಕಾಲಘಟ್ಟದಲ್ಲಿ ಕಳುಹಿಸಿರುವನು. ಆದುದರಿಂದ ಅವರ ನುಡಿಗಳನ್ನು ಓದುವುದು, ಆಲಿಸುವುದು ಮತ್ತು ಅವುಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸುವುದು ನಮಗೆ ಕಡ್ಡಾಯವಾಗಿದೆ. ನಮ್ಮಲ್ಲಿ ಪ್ರತಿಯೊಬ್ಬನು ಎಲ್ಲಿ ನಿಂತಿರುವನು ಮತ್ತು ಎಲ್ಲಿ ನಿಂತಿರಬೇಕಾಗಿದೆ ಎಂದು ಹಝ್ರತ್ ಮಸೀಹ್ ಮೌಊದರ[ಅ] ಉಪದೇಶಗಳ ಬೆಳಕಿನಲ್ಲಿ ಪರಿಶೋಧಿಸಬಹುದಾಗಿದೆ. ತಖ್ವ ಎಂದರೇನು, ತಖ್ವದ ಮಟ್ಟ ಹೇಗಿರಬೇಕು; ಒಳಿತೆಂದರೇನು, ಒಳಿತಿನ ಮಟ್ಟ ಹೇಗಿರಬೇಕು; ನಮ್ಮ ಹೊಣೆಗಾರಿಕೆಗಳು ಯಾವುವು ಎಂದೆಲ್ಲ ಪರಿಶೋಧಿಸಬಹುದಾಗಿದೆ.

ಹಝ್ರತ್ ಮಸೀಹ್ ಮೌಊದ್[ಅ] ಹೇಳಿದ್ದಾರೆ: "ಅಲ್ಲಾಹನ ಸಂಪ್ರೀತಿಗೆ ಕಾರಣವಾಗುವಂತಹ ಸತ್ಯವಾದ ದೇವಭಕ್ತಿಯನ್ನು (ತಖ್ವಾ) ಗಳಿಸಲು ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಪದೇ ಪದೇ ಉಪದೇಶಿಸಿದ್ದಾನೆ. ಅವನು ಹೀಗೆ ಹೇಳುತ್ತಾನೆ: **ಯಾ ಅಯ್ಯುಹಲ್ಲಧೀನ ಆಮನುತ್ತಖುಲ್ಲಾಹ** – ಎಲೈ ಸತ್ಯವಿಶ್ವಾಸಿಗಳೇ, ತಖ್ವವನ್ನು ಅವಲಂಬಿಸಿರಿ. ಅಲ್ಲಾಹನು ಹೀಗೆ ಸಹ ಹೇಳಿದ್ದಾನೆ: **ಇನ್ನಲ್ಲಾಹ ಮಅಲ್ಲಧೀನತ್ತಖವ್ ವಲ್ಲಧೀನ ಹುಮ್ ಮುಹ್‌ಸಿನೂನ್** – ತಖ್ವವನ್ನು ಅವಲಂಬಿಸುವವರಿಗೆ ಅಲ್ಲಾಹನು ಬೆಂಬಲ ನೀಡುವವನೂ ಸಹಾಯ ಮಾಡುವವನೂ ಆಗಿದ್ದಾನೆ.

"ಕೆಟ್ಟ ಕೆಲಸಗಳಿಂದ ದೂರ ಸರಿಯುವುದಕ್ಕೆ ತಖ್ವಾ ಎಂದು ಹೇಳಲಾಗಿದೆ. ಕೆಟ್ಟ ಕೆಲಸಗಳನ್ನು ಮಾಡದೆ ಇರುವುದರೊಂದಿಗೆ ಒಳಿತುಗಳನ್ನು ಮಾಡುವವರು ಮುಹ್‌ಸಿನೂನ್ ಆಗಿರುತ್ತಾರೆ. **ಲಿಲ್ಲಧೀನ ಅಹ್‌ಸನುಲ್ ಹುಸ್‌ನಾ** ಎಂದೂ ಅಲ್ಲಾಹನು ಹೇಳಿದ್ದಾನೆ. ಎಂದರೆ, ಅವರು ಒಳಿತುಗಳನ್ನು ಅತ್ಯುತ್ತಮ ರೀತಿಯಲ್ಲಿ ಮಾಡುತ್ತಾ ಇರುತ್ತಾರೆ.**ಇನ್ನಲ್ಲಾಹ ಮಅಲ್ಲಧೀನತ್ತಖವ್ ವಲ್ಲಧೀನ ಹುಮ್ ಮುಹ್‌ಸಿನೂನ್** ಎಂಬ ದಿವ್ಯವಾಣಿ ನನಗೆ ಪದೇ ಪದೇ ಅವತೀರ್ಣವಾಗಿದೆ. ಎಣಿಸಲಾರದಷ್ಟು ಸಂಖ್ಯೆಯಲ್ಲಿ ಈ ಸಂದೇಶವಾಣಿ ಅವತೀರ್ಣವಾಗಿದೆ. ಪ್ರಾಯಶಃ ಎರಡು ಸಾವಿರ ಸಲ ನನಗೆ ಈ ಇಲ್‌ಹಾಮ್ ಅವತೀರ್ಣಗೊಂಡಿರಬಹುದು. ಜಮಾಅತಿಗೆ ಸೇರಿದ್ದೇವೆ ಎಂಬ ಕಾರಣದಿಂದ ಮಾತ್ರ ಈ ಜಮಾಅತಿನಲ್ಲಿರುವವರು ಸಂತೋಷಪಡುವವರಾಗಬಾರದು ಎಂಬುದಾಗಿದೆ ಇದರ ಉದ್ದೇಶ. ಯಥಾರ್ಥ ದೇವಭಕ್ತಿ ಮತ್ತು ಅದರೊಂದಿಗೆ ಒಳಿತುಗಳ ಅನುಷ್ಠಾನದಿಂದ ಮಾತ್ರ ಅಲ್ಲಾಹನ ಸಾಮೀಪ್ಯ ಮತ್ತು ಸಹಾಯ ಲಭಿಸುವುದು."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಕೆಲವು ಸ್ಪಷ್ಟವಾದ ಪಾಪಗಳಾಗಿರುತ್ತವೆ. ಉದಾಹರಣೆಗೆ: ಸುಳ್ಳು ಹೇಳುವುದು, ವ್ಯಭಿಚಾರ ಮಾಡುವುದು, ವಿಶ್ವಾಸ ವಂಚನೆ ಮಾಡುವುದು, ಸುಳ್ಳು ಸಾಕ್ಷ್ಯ ಹೇಳುವುದು, ಹಕ್ಕುಗಳ ಅಪಹಾರ, ಶಿರ್ಕ್ ಮೊದಲಾದುವುಗಳು. ಆದರೆ, ಕೆಲವು ಪಾಪಕೃತ್ಯಗಳು ಸೂಕ್ಷ್ಮವಾಗಿರುತ್ತವೆ. ಮನುಷ್ಯನು ಆ ಪಾಪ ಕೃತ್ಯ ಮಾಡುತ್ತಿದ್ದರೂ ಅವನಿಗೆ ಅದರ ಬಗ್ಗೆ ಅರಿವೇ ಇರುವುದಿಲ್ಲ. ಇಂತಹ ಪಾಪ ಕೃತ್ಯ ಮಾಡುತ್ತಾ ವೃದ್ಧರಾದರೂ ಅವರಿಗೆ ಅದು ಪಾಪ ಕೃತ್ಯ ಎಂದು ತಿಳಿಯುವುದೇ ಇಲ್ಲ. ಉದಾಹರಣೆಗೆ, ಪರದೂಷಣೆ ಬಹಳ ಚಿಕ್ಕ ಸಂಗತಿ ಎಂದು ಭಾವಿಸುತ್ತಾರೆ. ಆದರೆ ಪವಿತ್ರ ಖುರ್‌ಆನ್ ಇದನ್ನು ಮಹಾಪಾಪವೆಂದು ವಿವರಿಸುತ್ತಾ ಹೀಗೆ ಹೇಳುತ್ತದೆ – **ಅಯುಹಿಬ್ಬು ಅಹದುಕುಮ್ ಅನ್ ಯಅ್‌ಕುಲ ಲಹ್‌ಮ ಅಖೀಹಿ ಮಯ್‌ತನ್** – ನಿಮ್ಮ ಪೈಕಿ ಯಾರಾದರೂ ತನ್ನ ಮೃತ ಸಹೋದರನ ಮಾಂಸವನ್ನು ತಿನ್ನಲು ಇಚ್ಛೆಸುವನೇ?"

ಮನುಷ್ಯನು ತನ್ನ ಸಹೋದರನನ್ನು ಹೀನೈಸುವ ಮಾತುಗಳನ್ನು ಆಡುವುದನ್ನು ಅಲ್ಲಾಹನು ಇಷ್ಟಪಡುವುದಿಲ್ಲ. ನೀವು ನಿಮ್ಮ ಮೃತ ಸಹೋದರನ ಮಾಂಸವನ್ನು ತಿನ್ನಲು ಬಯಸುವಿರೋ? ಎಂದು ಅಲ್ಲಾಹನು ಕೇಳುತ್ತಾನೆ. ಒಬ್ಬನು ತನ್ನ ಸಹೋದರ ಅಜ್ಞಾನಿಯೂ ತಿಳಿಗೇಡಿಯೂ ಎಂದು ಸಾಬೀತುಪಡಿಸುವ ರೀತಿಯಲ್ಲಿ ಮಾತಾಡುವುದು ಕೆಟ್ಟ ಕೆಲಸವಾಗಿದೆ. ಇದೇ ರೀತಿ ಜಿಪುಣತನ ಮಾಡುವುದು ಮತ್ತು ಸಿಟ್ಟುಗೊಳ್ಳುವುದು ಕೆಟ್ಟ ಕೆಲಸಗಳಾಗಿವೆ. ಇವುಗಳನ್ನು ತ್ಯಜಿಸುವುದು ಮತ್ತು ಕಣ್ಣುಗಳಿಂದ, ಕಿವಿಗಳಿಂದ, ಕೈ ಕಾಲುಗಳಿಂದ ಮಾಡಲಾಗುವ ಪ್ರತಿಯೊಂದು ರೀತಿಯ ಪಾಪ ಕೃತ್ಯಗಳಿಂದ ದೂರವಿರುವುದು ಅಲ್ಲಾಹನ



Yuga - January 2019 (2).pmd 9 2/19/2019, 11:34 AM

ಈ ನಿರ್ದೇಶನದ ಪ್ರಕಾರ ಮೊದಲ ಹಂತವಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಅನೇಕ ಕೆಡುಕುಗಳು ಕೇವಲ ಕೆಟ್ಟ ಸಂಶಯಗಳಿಂದ ತಲೆದೋರುತ್ತವೆ. ಒಬ್ಬನ ಬಗ್ಗೆ ಏನಾದರೂ ಆಲಿಸಿದ ಕೂಡಲೇ ನಂಬುವುದು ಬಹಳ ಕೆಟ್ಟದಾಗಿದೆ. ನಿಖರವಾಗಿ ಮತ್ತು ಖಚಿತವಾಗಿ ಗೊತ್ತಿಲ್ಲದ ಸಂಗತಿಯನ್ನು ಹೃದಯದಲ್ಲಿರಿಸಬೇಡಿರಿ." ಕೆಟ್ಟ ಸಂಶಯಗಳು ನಮ್ಮ ಸಮಾಜದಿಂದ ದೂರ ಸರಿಯುವುದಾದರೆ ನಮ್ಮ ಸಮಾಜದಿಂದ ಅರ್ಧಾಂಶ ಜಗಳ ಮತ್ತು ಕಲಹಗಳು ದೂರ ಸರಿಯುವುವು. ನಮ್ಮಲ್ಲಿ ಐಕ್ಯತೆ ಹುಟ್ಟುವುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಅನ್ಯರ ಬಗ್ಗೆ ಒಳ್ಳೆಯ ಅಭಿಪ್ರಾಯ ಹೊಂದಿರಿ. ಯಾವುದಾದರೂ ವದಂತಿ ಲಭಿಸಿದರೆ ಅದರ ಬಗ್ಗೆ ಖಾತರಿಪಡಿಸಿಕೊಳ್ಳಿರಿ. ಮನುಷ್ಯನು ಬಲಹೀನನಾಗಿದ್ದಾನೆ. ಕೆಲವು ಕೆಟ್ಟ ಯೋಚನೆಗಳು ಹೃದಯದಲ್ಲಿ ಹುಟ್ಟಬಹುದಾಗಿದೆ. ಆದರೆ ಆ ಆಲೋಚನೆಗಳ ಪ್ರಕಾರ ಕಾರ್ಯನಿರತನಾಗದಿದ್ದರೆ ಅಲ್ಲಾಹನು ಕ್ಷಮಿಸುತ್ತಾನೆ. ಹೃದಯದಲ್ಲಿ ಅಪಾಯಕಾರಿ ಯೋಚನೆಗಳು ಹಾದುಹೋದ ಕಾರಣದಿಂದ ಅಲ್ಲಾಹನು ಹಿಡಿಗೂಡಲಾರನು. ಉದಾಹರಣೆಗೆ, ಇಂತಿಂಥವನ ಸಂಪತ್ತು ನನಗೆ ದೊರಕಿದರೆ ಒಳ್ಳೆಯದು ಎಂದು ಒಬ್ಬನು ಯೋಚಿಸುತ್ತಾನೆ. ಇದು ಒಂದು ತರಹದ ದುರಾಶೆಯಾಗಿದೆ. ಆದರೆ ಕೇವಲ ಈ ಯೋಚನೆ ಹೃದಯದಲ್ಲಿ ಬಂದುಹೋದ ಕಾರಣದಿಂದ ಅಲ್ಲಾಹನು ಶಿಕ್ಷಿಸಲಾರನು. ಆದರೆ ಈ ಯೋಚನೆಯನ್ನು ಹೃದಯದಲ್ಲಿರಿಸಿ ಯಾವುದಾದರೂ ಉಪಾಯದಿಂದ ಅನ್ಯನ ಸಂಪತ್ತನ್ನು ಅಪಹರಿಸಬೇಕೆಂದು ದೃಢನಿರ್ಧಾರ ಮಾಡಿದರೆ ಅಂತಹ ವ್ಯಕ್ತಿಯನ್ನು ಅಲ್ಲಾಹನು ಶಿಕ್ಷಿಸುವನು."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: "ಯಾವುದೇ ಕೊಲೆ ಮಾಡಿರದ, ಮನೆಗೆ ಕನ್ನ ಹಾಕಿರದ, ಕದಿಯದ, ಡಕಾಯಿತಿ ಮಾಡಿರದ ಅಥವಾ ಬೇರೆ ರೀತಿಯ ದೊಡ್ಡ ಪಾಪ ಕೃತ್ಯ ಮಾಡಿರದ ಅನೇಕ ಜನರು ಇರಬಹುದು. ಆದರೆ ಪರದೂಷಣೆ ಮಾಡದ, ಚಾಡಿ ಮಾತು ಹೇಳದ, ಬೆನ್ನ ಹಿಂದೆ ಕೆಟ್ಟ ಮಾತು ಹೇಳದ, ಕೆಟ್ಟ ಸಂಶಯ ಹೊಂದದ, ತನ್ನ ಸಹೋದರನನ್ನು ಹೀನೈಸಿ ಅವನಿಗೆ ದುಃಖವಾಗುವಂತೆ ಮಾಡದ, ಸುಳ್ಳು ಹೇಳದ ಎಷ್ಟು ಜನರಿದ್ದಾರೆ? ಯಾರಿಗಾದರೂ ನೋವಾಗುವಂತೆ ವರ್ತಿಸದವರು, ಯಾರ ಬಗ್ಗೆಯಾದರೂ ದೂರು ಹೇಳದವರು, ಕೆಟ್ಟ ಸಂಶಯ ಹೊಂದದವರು, ಸುಳ್ಳು ಹೇಳದವರು, ಕೆಟ್ಟ ಯೋಚನೆಗಳನ್ನು ಹೃದಯದಲ್ಲಿ ಹೊಂದದವರು ಬಹಳ ಕಡಿಮೆ ಎಂದು ನಾನು ಖಚಿತವಾಗಿ ಹೇಳಬಲ್ಲೆನು."

ಹಝ್ರತ್ ಮಸೀಹ್ ಮೌಊದ್(ಅ) ಪುನಃ ಹೇಳುತ್ತಾರೆ: "ವಿಶ್ವಾಸದ ಪ್ರಥಮ ಹಂತ ತಖ್ವವನ್ನು ಹೊಂದುವುದಾಗಿದೆ ಎಂದು ಅಲ್ಲಾಹನು ಹೇಳುತ್ತಾನೆ. ಅಲ್ಲಾಹನು ಲೋಕದಲ್ಲಿ ಐಕ್ಯವನ್ನು ಹರಡಲು ಇಚ್ಛಿಸುತ್ತಾನೆ. ಆದರೆ ತನ್ನ ಸಹೋದರನಿಗೆ ನೋವನ್ನು ಉಂಟುಮಾಡುವವನು, ದೌರ್ಜನ್ಯ ಮಾಡುವವನು ಮತ್ತು ವಂಚನೆ ಮಾಡುವವನು ಐಕ್ಯದ ಶತ್ರುವಾಗಿರುತ್ತಾನೆ. ಈ ಕೆಟ್ಟ ಯೋಚನೆಗಳನ್ನು ಹೃದಯದಿಂದ ದೂರಸರಿಸುವ ತನಕ ಯಥಾರ್ಥ ಐಕ್ಯ ಎಂದೂ ಹಬ್ಬಲಾರದು. ನೀವು ಪವಿತ್ರ ಖುರ್‌ಆನನ್ನು ಪದೇ ಪದೇ ಓದುತ್ತಾ ಅದರಲ್ಲಿ ಕೆಟ್ಟ ಕೆಲಸಗಳೆಂದು ವಿವರಿಸಲಾದ ಸಂಗತಿಗಳನ್ನು ಬರೆಯುತ್ತಾ ಹೋಗಿರಿ. ಅನಂತರ ಅಲ್ಲಾಹನ ಕೃಪೆ ಮತ್ತು ಸಹಾಯವನ್ನು ಬೇಡಿಕೊಂಡು ಈ ಕೆಟ್ಟ ಕೆಲಸಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸಿರಿ. ಇದು ತಖ್ವದ ಪ್ರಥಮ ಹಂತವಾಗಿದೆ. ನೀವು ಈ ರೀತಿ ಪ್ರಯತ್ನ ಮಾಡಿದರೆ ಅಲ್ಲಾಹನು ನಿಮಗೆ ಪಾಪದಿಂದ ದೂರವಿರಲು ಶಕ್ತಿ ನೀಡುವನು. ಪಾಪ ಕೃತ್ಯ ಮಾಡುವ ಭಾವನೆಗಳನ್ನು ಪರಿಪೂರ್ಣವಾಗಿ ದೂರಮಾಡುವಂತಹ ಕರ್ಪೂರದ ಪಾನೀಯವನ್ನು ನಿಮಗೆ ಕುಡಿಸಲಾಗುವುದು. ಮನುಷ್ಯನು ದೇವಭಯವುಳ್ಳವನಾಗುವ ತನಕ ಈ ಪಾನೀಯವನ್ನು ನೀಡಲಾಗುವುದಿಲ್ಲ ಹಾಗೂ ಅವನ ಆರಾಧನೆ ಮತ್ತು ಪ್ರಾರ್ಥನೆಗಳು ಅಲ್ಲಾಹನಿಂದ ಸ್ವೀಕಾರಾರ್ಹ ಆಗಲಾರವು. ಏಕೆಂದರೆ ಅಲ್ಲಾಹನು ಹೇಳಿದ್ದಾನೆ **–ಇನ್ನಮಾ ಯತಖಬ್ಬಲುಲ್ಲಾಹುಮಿನಲ್ ಮುತ್ತಖೀನ್** – ನಿಶ್ಚಯವಾಗಿಯೂ ಅಲ್ಲಾಹನು ಮುತ್ತಖಿಗಳ ಪ್ರಾರ್ಥನೆಗಳನ್ನು ಮಾತ್ರ ಸ್ವೀಕರಿಸುತ್ತಾನೆ. ಮುತ್ತಖಿಗಳ ನಮಾಝ್ ಮತ್ತು ವ್ರತಾನುಷ್ಠಾನಗಳು ಮಾತ್ರವೇ ಸ್ವೀಕೃತವಾಗುತ್ತವೆ ಎಂಬುದು ಸಂಪೂರ್ಣವಾಗಿ ಸತ್ಯ ಸಂಗತಿಯಾಗಿದೆ. ನಮಾಝ್ ಅಂಗೀಕಾರ ಪಡೆಯುವುದರ ಅರ್ಥ, ನಮಾಝ್ ಅನುಷ್ಠಿಸುವವನಲ್ಲಿ ನಮಾಝ್ ಅನುಷ್ಠಾನದ ಪ್ರಭಾವ ಮತ್ತು ಅನುಗ್ರಹಗಳು ಹುಟ್ಟಬೇಕು. ನಮಾಝ್ ಅನುಷ್ಠಾನದ ಪ್ರಭಾವಗಳು ಮತ್ತು ಅನುಗ್ರಹಗಳು ಕಾಣಿಸದಿದ್ದರೆ ಅವನ ನಮಾಝ್ ಕೇವಲ ಅಂಗವಿನ್ಯಾಸ ಮಾತ್ರವಾಗಿರುತ್ತದೆ."

ಜಮಾಅತಿನ ಹುದ್ದೇದಾರರು ವಿಶಿಷ್ಟವಾಗಿ ಒಂದು ವಿಷಯದ ಬಗ್ಗೆ ಬಹಳ ಲಕ್ಷ್ಯನೀಡಬೇಕು. ಅವರು ತಮ್ಮ ಜಮಾಅತಿನ ಮಜ್ಲಿಸ್ ಆಮಿಲದಲ್ಲಿ ಚರ್ಚಿಸುವ ವಿಷಯಗಳನ್ನು ತಮ್ಮ ಮನೆಗಳಲ್ಲಿ ಅಥವಾ ಅನಾವಶ್ಯಕವಾಗಿ ಇತರ ವ್ಯಕ್ತಿಗಳೊಂದಿಗೆ ಹೇಳಬಾರದು. ಈ ಬಗ್ಗೆ ನಿಯಂತ್ರಣವಿರಬೇಕಾಗಿದೆ. ಅನೇಕ ಯುವಕರು ಹುದ್ದೇದಾರರ ಈ ವರ್ತನೆಗಳನ್ನು ನೋಡಿ ಮೊದಲು ಜಮಾಅತಿನಿಂದ ಮೆಲ್ಲಮೆಲ್ಲಗೆ ದೂರ ಸರಿದರು, ಮಸೀದಿಯಿಂದ ದೂರ ಸರಿದರು, ಆರಾಧನೆಯಿಂದ ದೂರ ಸರಿದರು, ನಂತರ ಅಲ್ಲಾಹನಿಂದಲೂ ದೂರ ಸರಿದು ಹೋಗುತ್ತಾರೆ. ಆದುದರಿಂದ ನಮ್ಮ ಮುಂದಿನ ಪೀಳಿಗೆಯನ್ನು ರಕ್ಷಿಸಲು ಹುದ್ದೇದಾರರು ಮತ್ತು ಹಿರಿಯರು ತಮ್ಮಲ್ಲಿ ತಖ್ವವನ್ನು ಮೈಗೂಡಿಸುವುದು ಆವಶ್ಯಕವಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಒಂದು ಸಂದರ್ಭದಲ್ಲಿ ಹೀಗೆ ಹೇಳುತ್ತಾರೆ: "ನೆನಪಿಟ್ಟುಕೊಳ್ಳಿರಿ, ತಖ್ವ ಎಂದರೆ ಸ್ಪಷ್ಟವಾದ ಪಾಪಗಳಿಂದ ರಕ್ಷಿಸಿಕೊಳ್ಳುವುದು ಮಾತ್ರವಲ್ಲ. ಸೂಕ್ಷ್ಮಾತಿಸೂಕ್ಷ್ಮ ಪಾಪಗಳಿಂದಲೂ ಸುರಕ್ಷಿತರಾಗಿರಬೇಕು. ನೀವು ಪವಿತ್ರ ಖುರ್‌ಆನನ್ನು ಪದೇ ಪದೇ ಓದಿ ಚಿಂತಿಸಿರಿ. ಏಕೆಂದರೆ ಅಲ್ಲಾಹನು ಹಾಗೆ ಮಾಡಲು ಆಜ್ಞಾಪಿಸಿದ್ದಾನೆ. ಆದುದರಿಂದ ಇದು ಬಹಳ ನೆನಪಿಡಬೇಕಾದ ವಿಷಯವಾಗಿದೆ. ತಾನು ಯಾವ ಪಾಪವನ್ನೂ ಮಾಡಲಿಲ್ಲ ಎಂಬ ಕಾರಣದಿಂದ ಸತ್ಯವಿಶ್ವಾಸಿ ಸಂತೋಷ ಪಡಲಾರ. ಅಲ್ಲಾಹನು ಹೇಳುವುದೇನೆಂದರೆ, ಕೆಟ್ಟ ಕೆಲಸಗಳಿಂದ ದೂರವಿರುವುದರೊಂದಿಗೆ ಒಳ್ಳೆಯ ಕೆಲಸಗಳನ್ನು ಮಾಡಬೇಕು. ಹಾಗೆ ಮಾಡದೆ ಮೋಕ್ಷ ಸಿಗದು. ತಾನು ಯಾವ ಪಾಪವನ್ನೂ ಮಾಡಲಿಲ್ಲ ಎಂದು ಅಹಂಭಾವ ಪ್ರಕಟಿಸುವವನು ತಿಳಿಗೇಡಿಯಾಗಿದ್ದಾನೆ. ಇಸ್ಲಾಮ್ ಮನುಷ್ಯನನ್ನು ಕೇವಲ ಈ ಹಂತಕ್ಕೆ ತಲುಪಿಸಿ ಕೈಬಿಡುವುದಿಲ್ಲ. ಬದಲಿಗೆ, ಅದು ಎರಡು ಭಾಗಗಳನ್ನು ಪೂರ್ತಿಮಾಡಲು ಇಚ್ಛಿಸುತ್ತದೆ. ಎಂದರೆ, ಎಲ್ಲ ಕೆಟ್ಟ ಕೆಲಸಗಳನ್ನು ಸಂಪೂರ್ಣವಾಗಿ ತ್ಯಜಿಸಿ ಒಳ್ಳೆಯ ಕೆಲಸಗಳನ್ನು ನಿಷ್ಠೆಯಿಂದ ಮಾಡಬೇಕೆಂದು ಇಸ್ಲಾಮ್ ಉಪದೇಶಿಸುತ್ತದೆ. ಇವೆರಡೂ ಇಲ್ಲದಿದ್ದರೆ ಮೋಕ್ಷ ಇರಲಾರದು."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನೀವು ಕೃತ್ಯರೂಪದಲ್ಲಿ ಸತ್ಯಸಂಧತೆಯನ್ನು ಪ್ರಕಟಿಸಬೇಕೆಂದು ಅಲ್ಲಾಹನು ಇಚ್ಛಿಸುತ್ತಾನೆ. ಹಾಗೆ ಮಾಡಿದರೆ ಅಲ್ಲಾಹನು ನಿಮ್ಮ ಜೊತೆಗಿರುವನು. ಕಾರುಣ್ಯ, ಸದ್ಗುಣ, ಸತ್ಕಾರ್ಯ, ಸಹಾನುಭೂತಿ, ವಿನಯ ಇವುಗಳಲ್ಲಿ



Yuga - January 2019 (2).pmd 10 2/19/2019, 11:34 AM

ಕೊರತೆ ಸಂಭವಿಸಿದರೆ ಅಂತಹ ಜಮಾಅತ್ ನಾಶವಾಗುವುದು. ಸಹಾಬರು ತೋರಿಸಿದ ಮಾದರಿ ಹೇಗಿತ್ತು? ಅವರು ಅಲ್ಲಾಹನ ಮಾರ್ಗದಲ್ಲಿ ಜೀವ ನೀಡಲು ಸಿದ್ಧರಾದರು. ದೇವಮಾರ್ಗದಲ್ಲಿ ಜೀವಾರ್ಪಣೆ ಮಾಡಲು ಸಿದ್ಧವಾಗುವಂತಹ ಸ್ಥಿತಿ ಮನುಷ್ಯನಲ್ಲಿ ಉಂಟಾಗುವುದು ಸುಲಭವೇನೂ ಅಲ್ಲ. ಆದರೆ ಸಹಾಬರ ಚರಿತ್ರೆ ನಮಗೆ ತಿಳಿಸುವುದು ಏನೆಂದರೆ ಅವರು ಜೀವಾರ್ಪಣೆ ಮಾಡಬೇಕೆಂಬ ಕಡ್ಡಾಯ ಕರ್ತವ್ಯವನ್ನು ಈಡೇರಿಸಲು ಸಿದ್ಧರಾದರು. ಅಲ್ಲಾಹನ ಮಾರ್ಗದಲ್ಲಿ ಜೀವ ನೀಡಬೇಕೆಂದು ಆಜ್ಞಾಪಿಸಿದಾಗ ಅವರು ಲೋಕದ ಕಡೆಗೆ ಬಾಗಲಿಲ್ಲ. ಆದುದರಿಂದ ನೀವು ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವುದು ಆವಶ್ಯಕವಾಗಿದೆ. ಸಹಾಬರ ನಡೆವಳಿಕೆ ನಮಗೆ ಅನುಕರಣೀಯವಾದ ಉತ್ತಮ ಮಾದರಿಯಾಗಿದೆ. ಕೇವಲ ಲೌಕಿಕ ಲಾಭ ಗಳಿಸಲು ಇಚ್ಛಿಸುವ ಜನರು ಅಲ್ಲಾಹನ ದೃಷ್ಟಿಯಲ್ಲಿ ಈ ಜಮಾಅತಿಗೆ ಸೇರಿದವರಲ್ಲ. ಲೌಕಿಕ ವಿಷಯಗಳನ್ನು ಬಿಟ್ಟುಬಿಡುವವರು ಮಾತ್ರವೇ ಅಲ್ಲಾಹನ ದೃಷ್ಟಿಯಲ್ಲಿ ಈ ಜಮಾಅತಿಗೆ ಸೇರಿದವರಾಗಿರುತ್ತಾರೆ. ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವವರೇ ಅಲ್ಲಾಹನ ದೃಷ್ಟಿಯಲ್ಲಿ ಸತ್ಯವಿಶ್ವಾಸಿಗಳೂ ಬೈಅತ್ ಪ್ರತಿಜ್ಞೆ ಈಡೇರಿಸಿದವರೂ ಆಗಿರುತ್ತಾರೆ ಎಂದು ಚೆನ್ನಾಗಿ ನೆನಪಿಡಿರಿ. ಲೌಕಿಕ ಉದ್ದೇಶಗಳಿಗೆ ಆದ್ಯತೆ ನೀಡುವವನು ಬೈಅತ್ ಪ್ರತಿಜ್ಞೆಯನ್ನು ಮುರಿಯುವವನಾಗಿದ್ದಾನೆ ಮತ್ತು ಅಲ್ಲಾಹನ ಸನ್ನಿಧಿಯಲ್ಲಿ ಅಪರಾಧಿ ಆಗಿರುತ್ತಾನೆ. ನೆನಪಿಡಿರಿ, ಮನುಷ್ಯನ ಕರ್ಮಗಳು ಸರಿಯಾಗಿರದಿದ್ದರೆ ಅವನ ಮಾತುಗಳಿಗೆ ಯಾವ ಬೆಲೆಯೂ ಇಲ್ಲ. ಸತ್ಯವಾದ ವಿಶ್ವಾಸವು ಹೃದಯದಲ್ಲಿ ಪ್ರವೇಶಿಸಿ ವ್ಯಕ್ತಿಯ ಕರ್ಮಗಳಲ್ಲಿ ಪ್ರಭಾವ ಬೀರುತ್ತದೆ. ಇಂತಹ ಸ್ಥಿತಿ ಸಹಾಬರಲ್ಲಿ ಕಂಡುಬಂದಿತ್ತು. ಅವರು ವೈಯಕ್ತಿಕ ಇಚ್ಛೆಗಳು ಮತ್ತು ಉದ್ದೇಶಗಳು ಹಾಗೂ ಸ್ವಾರ್ಥ ಚಿಂತನೆಗಳಿಂದ ಸಂಪೂರ್ಣ ಮುಕ್ತವಾಗಿದ್ದರು."

ಬೈಅತ್ ಮಾಡಿದ ನಂತರ ಒಬ್ಬ ಅಹ್ಮದಿಯ ಸ್ಥಿತಿ ಹೇಗಿರಬೇಕು ಎನ್ನುವುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಒಂದು ಕೊಂಬೆಯ ಸಂಬಂಧ ಮರದ ಕಾಂಡದೊಂದಿಗೆ ಇಲ್ಲದಿದ್ದರೆ ಅದು ಒಣಗಿ ಹೋಗುತ್ತದೆ. ಜೀವಂತವಾದ ವಿಶ್ವಾಸ ಹೊಂದಿದವನು ಲೋಕದ ಪರಿವೆ ಮಾಡುವುದಿಲ್ಲ. ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವವನೇ ಅನುಗ್ರಹೀತನು. ಆದರೆ ಲೌಕಿಕ ಕಾರ್ಯಗಳಿಗೆ ಆದ್ಯತೆ ನೀಡುವವನು ಒಂದು ಶವದ ಹಾಗಿರುತ್ತಾನೆ. ಅವನು ದೇವನ ಸಹಾಯಗಳಿಸಲಾರನು. ಧಾರ್ಮಿಕ ಕಾರ್ಯಗಳಿಗೆ ಆದ್ಯತೆ ನೀಡಿ ಅದರಲ್ಲಿ ಪ್ರಗತಿ ಹೊಂದಲು ಪ್ರಯತ್ನಿಸುವಾಗ ಮಾತ್ರ ಬೈಅತ್ ಪ್ರಯೋಜನಕರವಾಗುತ್ತದೆ."

ಈ ದೇಶಕ್ಕೆ ಆಗಮಿಸಿದವರೊಂದಿಗೆ ನಾನು ಹೇಳಲು ಬಯಸುತ್ತೇನೆ. ಅಲ್ಲಾಹನು ಇಲ್ಲಿ ನಿಮ್ಮ ಸ್ಥಿತಿಯನ್ನು ಉತ್ತಮಗೊಳಿಸಿರುವನು. ನಿಮಗೆ ಧಾರ್ಮಿಕ ಸ್ವಾತಂತ್ರ್ಯ ಲಭಿಸಿದೆ. ನೀವು ಸ್ವತಂತ್ರವಾಗಿ ಆರಾಧನೆ ಮಾಡುವವರಾದಿರಿ. ನೀವು ನಿಮ್ಮ ಧರ್ಮವನ್ನು ಬಹಿರಂವಾಗಿ ಪ್ರಕಟಿಸಲು ಸಾಧ್ಯವಾಗಿದೆ. ಆದುದರಿಂದ ಇಲ್ಲಿಗೆ ಆಗಮಿಸುವ ಪ್ರತಿಯೊಬ್ಬ ಅಹ್ಮದೀ ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡಲು ಪ್ರಯತ್ನಿಸುವುದು ಆವಶ್ಯಕವಾಗಿದೆ. ಅಲ್ಲಾಹನ ಆಜ್ಞೆಗಳನ್ನು ಅನುಷ್ಠಾನಕ್ಕೆ ತರಲು ನಿಮ್ಮ ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ಬಳಸಿರಿ. ನಮಾಝ್‌ಗಳ ಬಗ್ಗೆ ಬಹಳ ಲಕ್ಷ್ಯ ನೀಡಬೇಕು. ಮಸೀದಿಗಳನ್ನು ನಿರ್ಮಿಸಿದ ನಂತರ ಅದಕ್ಕೆ ಸಂಬಂಧಿಸಿದ ಹೊಣೆಗಾರಿಕೆಗಳನ್ನು ಈಡೇರಿಸಲು ಸಹ ಶ್ರಮಿಸಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಮುಖ್ಯ ಉಪದೇಶ ನೀಡುತ್ತಾ ಹೀಗೆ ಹೇಳಿದರು: "ಇಂದಿನ ಕಾಲಘಟ್ಟ ಬಹಳ ಕೆಟ್ಟದಾಗುತ್ತಾ ಇದೆ. ವಿವಿಧ ರೀತಿಗಳ ಶಿರ್ಕ್, ನವೀನಾಚರಣೆಗಳು ಮತ್ತು ಕೆಡುಕುಗಳು ತಲೆದೋರಿವೆ. ಬೈಅತ್ ಮಾಡುವಾಗ ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುತ್ತೇನೆ ಎಂದು ಮಾಡಿದ ಪ್ರತಿಜ್ಞೆ ವಾಸ್ತವಿಕವಾಗಿ ಅಲ್ಲಾಹನ ಮುಂದೆ ಮಾಡಿದ ಪ್ರತಿಜ್ಞೆಯಾಗಿದೆ. ಆದುದರಿಂದ ಮರಣದ ತನಕ ಈ ಪ್ರತಿಜ್ಞೆಯನ್ನು ಚೆನ್ನಾಗಿ ಪಾಲಿಸಬೇಕು.ಇಲ್ಲವಾದರೆ, ನೀವು ಬೈಅತ್ ಮಾಡಿಲ್ಲ ಎಂದು ತಿಳಿದುಕೊಳ್ಳಿರಿ. ನೀವು ಬೈಅತ್ ಪ್ರತಿಜ್ಞೆಯಲ್ಲಿ ನೆಲೆನಿಂತರೆ ಅಲ್ಲಾಹನು ನಿಮ್ಮ ಧಾರ್ಮಿಕ ಮತ್ತು ಲೌಕಿಕ ಕಾರ್ಯಗಳನ್ನು ಅನುಗ್ರಹಿಸುವನು."

ಹಝ್ರತ್ ಮಸೀಹ್ ಮೌಊದ್(ಅ) ನಮಗೆ ಎಚ್ಚರಿಕೆ ನೀಡಿದ್ದಾರೆ. ಆದುದರಿಂದ ನಾವು ನಮ್ಮ ಸುಧಾರಣೆ ಬಗ್ಗೆ ಲಕ್ಷ್ಯ ನೀಡಬೇಕು.ಲೋಕದಲ್ಲಿ ಸಂಭವಿಸುತ್ತಿರುವ ವಿಪತ್ತುಗಳು ಸಾಮಾನ್ಯ ವಿಪತ್ತುಗಳೇನೂ ಅಲ್ಲವೆಂದು ಲೋಕಕ್ಕೆ ನಾವು ತಿಳಿಸಬೇಕು.ಅವುಗಳ ಬಗ್ಗೆ ಒಂದು ನೂರು ವರ್ಷಗಳ ಹಿಂದೆ ಭವಿಷ್ಯ ನುಡಿಯಲಾಗಿದೆ.ಅವುಗಳಿಂದ ರಕ್ಷಣೆ ಪಡೆಯುವ ಒಂದೇ ಒಂದು ಮಾರ್ಗ ಮನುಷ್ಯನು ಅಲ್ಲಾಹನ ಕಡೆಗೆ ಬರುವುದಾಗಿದೆ. ಈಗ ಸಹ ಪ್ರಜ್ಞೆ ಹೊಂದದಿದ್ದರೆ ರಕ್ಷಣೆ ಹೊಂದುವುದು ಅಸಾಧ್ಯ. ಮನುಷ್ಯನು ಸ್ವತಃ ತನಗೋಸ್ಕರ ಕಷ್ಟಗಳನ್ನು ಉಂಟುಮಾಡಿದ್ದಾನೆ. ಯುದ್ಧಗಳು ನಡೆಯುತ್ತಿವೆ. ದೌರ್ಜನ್ಯ ನಡೆಸಲಾಗುತ್ತಿದೆ. ಅಲ್ಲಾಹನು ಬಹಳ ಬಿಡುವು ನೀಡುತ್ತಾನೆ. ಆದರೆ ದೌರ್ಜನ್ಯಗಳು ಅಲ್ಲಾಹನ ದೃಷ್ಟಿಯಲ್ಲಿ ಪರಾಕಾಷ್ಠೆಗೆ ತಲುಪಿದರೆ ದೌರ್ಜನ್ಯ ಮಾಡುವ ಸಮುದಾಯಗಳು ನಾಶಗೊಳಿಸಲ್ಪಡುವುವು. ಆಗ ರಕ್ಷಿಸಲ್ಪಡುವ ಜನರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಪದ್ಯದಲ್ಲಿ ಹೀಗೆ ವಿವರಿಸಿದ್ದಾರೆ:

**"ಆಗ್ ಹೈ ಪರ್ ಆಗ್‌ಸೆ ಓ ಸಬ್ ಬಚಾಯೆ ಜಾಯೇಂಗೆ**
**ಜೊ ಕೆ ರಖ್ತೇ ಹೈಂ ಖುದಾಯೆ ಧುಲ್ ಅಜಾಯಿಬ್ ಸೆ ಪ್ಯಾರ್."**

ಎಂದರೆ, "ಅಗ್ನಿ ಇದೆ. ಆದರೆ ಅದ್ಭುತಗಳ ಒಡೆಯನನ್ನು ಪ್ರೀತಿಸುವ ಎಲ್ಲರೂ ಬೆಂಕಿಯಿಂದ ರಕ್ಷಿಸಲ್ಪಡುವರು."

ಈ ವಿಷಯದ ಬಗ್ಗೆ ಲಕ್ಷ್ಯ ನೀಡಿರಿ. ತಮ್ಮನ್ನು ರಕ್ಷಿಸಲು ಮತ್ತು ಲೋಕವನ್ನು ರಕ್ಷಿಸಲು ನಾವು ಬಹಳ ಪ್ರಯತ್ನ ಮಾಡಬೇಕು. ಅಲ್ಲಾಹನ ಸಾಮೀಪ್ಯ ಗಳಿಸಲಿಕ್ಕೋಸ್ಕರ ನಮ್ಮ ಸಂಪೂರ್ಣ ಶಕ್ತಿ ಸಾಮರ್ಥ್ಯಗಳನ್ನು ಬಳಸಿ ಪ್ರಯತ್ನಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಈ ಜಮಾಅತ್ ಸ್ಥಾಪಿಸಿರುವುದು ಮನುಷ್ಯನು ಅಲ್ಲಾಹನ ಸಾಮೀಪ್ಯ ಗಳಿಸಲಿಕ್ಕೋಸ್ಕರವಾಗಿದೆ. ಅಲ್ಲಾಹನ ಸಾಮೀಪ್ಯ ಗಳಿಸುವುದು ಬಹಳ ಕಷ್ಟಕರ. ಅದೊಂದು ರೀತಿಯ ಮರಣವಾಗಿದೆ. ಆದರೆ ಕೊನೆಗೆ ಜೀವ ಗಳಿಸುವುದು ಅದರಿಂದಲೇ ಆಗಿದೆ. ತನ್ನಿಂದ ಶೈತಾನೀ ಅಂಶವನ್ನು ಹೊರಗೆ ಹಾಕುವವನು ಅನುಗ್ರಹೀತನು. ಅವನ ಮನೆಗೆ, ಅವನ ಶರೀರಕ್ಕೆ ಮತ್ತು ನಗರಕ್ಕೆ ಅದರ ಅನುಗ್ರಹ ತಲಪುತ್ತದೆ."

ನಾವು ಬೈಅತ್ ಪ್ರತಿಜ್ಞೆಯ ಹಕ್ಕನ್ನು ಈಡೇರಿಸುತ್ತಾ ನಮ್ಮೊಳಗೆ ಪರಿಶುದ್ಧ ಬದಲಾವಣೆ ಉಂಟುಮಾಡುವವರಾಗಲು ಅಲ್ಲಾಹನು ಸೌಭಾಗ್ಯ ನೀಡಲಿ. ನಾವು ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳಿಗಿಂತ ಆದ್ಯತೆ ನೀಡುವ ಪ್ರತಿಜ್ಞೆಯನ್ನು ಈಡೇರಿಸುವವರಾಗೋಣ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನು ನೀಡಿದ ವಾಗ್ದಾನಗಳ ವಾರಸುದಾರರಾಗುವ ಭಾಗ್ಯ ಅಲ್ಲಾಹನು ನಮಗೆ ದಯಪಾಲಿಸಲಿ – ಆಮೀನ್. ◆



Yuga - January 2019 (2).pmd 11 2/19/2019, 11:34 AM

# ಮಕ್ಕದವರ ವಿರೋಧದ ಮುಂದುವರಿಯುವಿಕೆ

♦ಸರ್ ಮುಹಮ್ಮದ್ ಝಫರುಲ್ಲಾ ಖಾನ್
ಅಂತರ್ರಾಷ್ಟ್ರೀಯ ನ್ಯಾಯಾಲಯದ ಮಾಜಿ ಅಧ್ಯಕ್ಷ

ಬದ್ರ್ ಯುದ್ಧದ ಒಂದು ವರ್ಷದ ನಂತರ ಉಹುದ್‌ನಲ್ಲಿ ನಡೆದ ಯುದ್ಧದಲ್ಲಿ ಸೈನಿಕರು ಮತ್ತು ಆಯುಧಗಳಿಗೆ ಸಂಬಂಧಿಸಿದ ವ್ಯತ್ಯಾಸವು ಬದ್ರ್ ಯುದ್ಧದ ಕಾಲಕ್ಕಿಂತ ಹೆಚ್ಚಾಗಿದ್ದರೂ ಹೋರಾಟದ ಆರಂಭದಲ್ಲಿ ಮುಸ್ಲಿಮರು ಶತ್ರುಗಳನ್ನು ಯುದ್ಧ ಕ್ಷೇತ್ರದಿಂದ ಓಡಿಸಿದರು. ಆದರೆ ಮುಸ್ಲಿಮರ ಒಂದು ಸಣ್ಣ ಗುಂಪು ಮಾಡಿದ ಘೋರ ತಪ್ಪಿನ ಕಾರಣ ಮುಸ್ಲಿಮರಿಗೆ ಬಹಳ ಹಾನಿ ಉಂಟಾಯಿತು. ಇಂತಹ ಸನ್ನಿವೇಶದಲ್ಲೂ ಮದೀನವನ್ನು ವಶಪಡಿಸಲು ಅವರಿಗೆ ಸುಲಭ ಸಾಧ್ಯವಾಗಿದ್ದರೂ ಖುರೈಶರು ತಮ್ಮ ಉದ್ದೇಶಲಕ್ಷ್ಯವನ್ನು ಸಾಧಿಸಲಾಗದೆ ಮಕ್ಕಕ್ಕೆ ಮರಳಿದರು.

ಹಝ್ರತ್ ಪೈಗಂಬರರ(ಸ) ಮತ್ತು ಮುಸ್ಲಿಮರ ಶಕ್ತಿ ಹೆಚ್ಚುತ್ತಾ ಇದ್ದು ಇಸ್ಲಾಮ್ ನಿಧಾನವಾಗಿ ವೃದ್ಧಿಗೊಳ್ಳುತ್ತಿದೆ ಎಂಬುದನ್ನು ಅರಿತುಕೊಂಡು ಖುರೈಶರು ಹೆಚ್ಚು ಅರಬಿ ಗೋತ್ರಗಳನ್ನು ಒಗ್ಗೂಡಿಸಲು ಇಸ್ಲಾಮ್ ವಿರುದ್ಧ ಅಪಪ್ರಚಾರ ನಡೆಸಿ ಅವರು ಇಸ್ಲಾಮಿನ ಕಠಿಣ ಶತ್ರುಗಳನ್ನಾಗಿ ಮಾಡಿದರು. ಅಂದಾಜು ಹದಿನೆಂಟರಿಂದ ಇಪ್ಪತ್ತು ಸಾವಿರದ ತನಕ ಜನರಿದ್ದ ಒಂದು ಬೃಹತ್ ಸೈನ್ಯ ಮದೀನದ ಕಡೆಗೆ ಸಾಗಿ ತಮ್ಮ ದೃಷ್ಟಿಯಲ್ಲಿ ತಮ್ಮ ಜೀವಿತ ಶೈಲಿಗೆ ಅಪಾಯಕರವಾದ ಮುಸ್ಲಿಮರನ್ನು ನಾಶಮಾಡಲು ಮುಂದೆ ಸಾಗಿತು. ಮದೀನಕ್ಕೆ ಸಮೀಪ ತಲಪಿದಾಗ ಮದೀನದ ಸುತ್ತಲೂ ಅಗಲವಾದ ಕಂದಕವನ್ನು ತೋಡಿರುವುದಾಗಿ ಕಂಡರು. ಅದು ಅವರ ಸಾಗಾಟವನ್ನು ತಡೆಯಿತು. ಅವರಿಗೆ ಆಶಾಭಂಗವಾದರೂ ಅವರು ನಿರುತ್ಸಾಹಗೊಳ್ಳಲಿಲ್ಲ. ಅವರು ಮದೀನಕ್ಕೆ ಮುತ್ತಿಗೆ ಹಾಕಿದರು. ಮೂರು ವಾರಗಳ ತನಕ ಮುಂದುವರಿದ ಈ ಮುತ್ತಿಗೆಯಿಂದ ನಗರವಾಸಿಗಳಿಗೆ ಅಸಹನೀಯ ಕಷ್ಟ ಉಂಟಾಯಿತು. ಅಲ್ಲಿ ಹೋರಾಟ ನಡೆಯಲಿಲ್ಲ – ಕೆಲವು ಸಾರಿ ಖುರೈಶರು ಕಂದಕ ದಾಟಲು ಪ್ರಯತ್ನಿಸಿದಾಗ ಹೊರತು – ಕಂದಕ ದಾಟಲು ಮಾಡಿದ ಪ್ರಯತ್ನಗಳನ್ನು ಮುಸ್ಲಿಮರು ಶೌರ್ಯಭರಿತರಾಗಿ ತಡೆಗಟ್ಟಿದರು. ಹೀಗಿದ್ದರೂ ಮುಸ್ಲಿಮರು ಎಂತಹ ಬಲಹೀನ ಸ್ಥಿತಿಗೆ ತಲಪಿದ್ದರೆಂದರೆ ಕೇವಲ ಲೌಕಿಕ ದೃಷ್ಟಿಯಿಂದ ನೋಡುವುದಾದರೆ, ಅವರು ಶತ್ರುಗಳಿಂದ ರಕ್ಷಿಸಲ್ಪಡುವರೆಂದು ಊಹಿಸಲು ಕೂಡ ಸಾಧ್ಯವಿರಲಿಲ್ಲ. ಇವರೊಂದಿಗೆ ಮದೀನದಲ್ಲಿದ್ದ ಏಕಮಾತ್ರ ಯಹೂದಿ ಗೋತ್ರ ಖುರೈಶರ ಅಪೇಕ್ಷೆ ಪ್ರಕಾರ ಮುಸ್ಲಿಮರನ್ನು ಹಿಂಭಾಗದಿಂದ ಆಕ್ರಮಿಸಲು ಮುಂಭಾಗದಿಂದ ಮಕ್ಕದ ಶತ್ರುಗಳು ಆಕ್ರಮಿಸುವಾಗ ಸಿದ್ಧರಾಗಿರುವರೆಂದು ಹಝ್ರತ್ ಪೈಗಂಬರರಿಗೆ(ಸ) ಸಮಾಚಾರ ಲಭಿಸಿತು. ಹೀಗೆ ಮುಸ್ಲಿಮರು ಬೀಸುಗಲ್ಲಿನ ಮೇಲ್ಭಾಗವಾದ ಮಕ್ಕದ ಸೈನ್ಯದಿಂದಲೂ ಕೆಳಭಾಗವಾದ ಮದೀನದ ಯಹೂದಿ ಗೋತ್ರವಾದ ಬನೂ ಖುರೈಝುದಿಂದಲೂ ಪುಡಿಗಟ್ಟಲ್ಪಡುವ ಸ್ಥಿತಿಯಲ್ಲಿದ್ದರು. ಬನೂ ಖುರೈಝು ಅವರು ಮಾಡಿಕೊಂಡಿದ್ದ ಒಪ್ಪಂದದ ವಿರುದ್ಧ ವರ್ತಿಸಿ ಶತ್ರು ಪಕ್ಷಕ್ಕೆ ಹೋದರು. ಮುಸ್ಲಿಮರ ಸ್ಥಿತಿ ಅತ್ಯಂತ ನಿರಾಶಾದಾಯಕವಾಗಿತ್ತು. ಆದರೆ ಅಲ್ಲಾಹನ ಮೇಲೆ ವಿಶ್ವಾಸ ಮತ್ತು ಅವನ ಸಂರಕ್ಷಣೆ ಬಗ್ಗೆ ಭರವಸೆ ಅವರಿಗಿತ್ತು. ಮಧ್ಯರಾತ್ರಿ ಭಯಂಕರವಾದೊಂದು ಬಿರುಗಾಳಿ ಬೀಸಿತು. ಸೈನಿಕರು ತಂಗಿದ್ದಲ್ಲಿ ಬಹಳ ಗಲಿಬಿಲಿ, ಕೋಲಾಹಲ ಉಂಟಾಯಿತು. ಓಡಿಹೋಗುವುದೇ ತಮಗಿರುವ ಏಕಮಾತ್ರ ರಕ್ಷಾಮಾರ್ಗ ಎಂದು ಅವರು ಭಯಭೀತಿಯಿಂದ ನಿರ್ಧರಿಸಿದರು. ಬೆಳಗಾಗುವಾಗ ಕಂದಕದ ಸಮೀಪ ಯಾರೂ ಬಾಕಿಯಾಗಿ ಉಳಿಯಲಿಲ್ಲ. ಖುರೈಶರು ನಡೆಸಿದ ಸಶಸ್ತ್ರ ಆಕ್ರಮಣದ ಅಂತ್ಯವು ಹೀಗಾಯಿತು. ಇಲ್ಲಿ ಕೇವಲ ಮುಖ್ಯ ಅಂಶಗಳನ್ನು ಮಾತ್ರ ವಿವರಿಸಲಾಗಿದೆ. ಅನೇಕ ವರ್ಷಗಳಲ್ಲಿ ವಂಚನೆ, ಮೋಸಗಾರಿಕೆ ಮತ್ತು ಅಡಗಿ ಆಕ್ರಮಣ ಮಾಡುವಿಕೆ ಮೊದಲಾದವುಗಳ ಮೂಲಕ ಸಹ ಅನೇಕ ಪ್ರಯತ್ನಗಳನ್ನು ಶತ್ರುಗಳು ಮುಸ್ಲಿಮರ ವಿರುದ್ಧ ಮಾಡುತ್ತಾ ಇದ್ದರು. ಶತ್ರುಗಳ ಪ್ರಯತ್ನಗಳೆಲ್ಲ ಹಝ್ರತ್ ಪೈಗಂಬರರ(ಸ) ದೂರ ದೃಷ್ಟಿಯಿಂದ ಸೋಲಿಸಲ್ಪಟ್ಟವು. ಅವರು ತನ್ನ ಸಂರಕ್ಷಣೆಗೆ ನೀಡಲ್ಪಟ್ಟವರ ರಕ್ಷಣೆಗೋಸ್ಕರ ಮಾಡಬೇಕಾದ ಆವಶ್ಯಕ ಕ್ರಮಗಳಲ್ಲಿ ಯಾವುದನ್ನೂ ಬಿಟ್ಟುಬಿಡಲಿಲ್ಲ. ಆದರೆ ಅದು ಅವರ ಏಕಮಾತ್ರ ಅಥವಾ ಮುಖ್ಯ ಉದ್ದೇಶವಾಗಿರಲಿಲ್ಲ. ಅವರ ಮೇಲೆ ಹೋರಾಟ ಹೇರಲಾಯಿತೇ ಹೊರತು ಅವರು ಸ್ವತಃ ಹೋರಾಡಲು ಪ್ರಾರಂಭಿಸಲಿಲ್ಲ. ಅವರು ತನ್ನ ಮುಖ್ಯ ಉದ್ದೇಶವಾದ ದೇವನ ಏಕತ್ವದ ಪ್ರಚಾರ ಮತ್ತು ತನ್ನ ಅನುಯಾಯಿಗಳನ್ನು ಎಲ್ಲ ಕ್ಷೇತ್ರಗಳಲ್ಲೂ ಮಾನವರಿಗೆ ಹಿತಕರವಾದ ಮೌಲ್ಯಗಳಲ್ಲಿ ಪರಿಶೀಲನೆ ನೀಡುವುದನ್ನು ಮುಂದುವರಿಸಿದರು.

ಮಕ್ಕದಿಂದ ಮದೀನಕ್ಕೆ ವಲಸೆ ಬಂದ ನಂತರ ಆರನೆಯ ವರ್ಷದಲ್ಲಿ ಹುದೈಬಿಯಾ ಎಂಬಲ್ಲಿ ಒಂದು ಶಾಂತಿ ಒಪ್ಪಂದ ಮಾಡಿದರು. ಹತ್ತು ವರ್ಷದ ತನಕ ಜಾರಿಯಲ್ಲಿರುವ ಆ ಒಪ್ಪಂದದ ಶರತ್ತುಗಳು ಮುಸ್ಲಿಮರ ದೃಷ್ಟಿಯಲ್ಲಿ ಅವರಿಗೆ ಅಪಮಾನಕರವಾಗಿತ್ತು. ಆದರೆ ಹಝ್ರತ್ ಪೈಗಂಬರರಿಗೆ(ಸ) ಅದರ ಪರಿಣಾಮದ ಬಗ್ಗೆ ಹೆಚ್ಚು ತಿಳಿದಿತ್ತು. ಈ ಶಾಂತಿ ಒಪ್ಪಂದದಿಂದ ಇಸ್ಲಾಮಿನ ಪ್ರಚಾರಕ್ಕೆ ಹೆಚ್ಚು ಸಾಧ್ಯತೆಗಳು ಲಭಿಸಿದುವು. ಎರಡು ವರ್ಷಗಳೊಳಗೆ ಖುರೈಶರು ಶಾಂತಿ ಒಪ್ಪಂದದ ಶರತ್ತುಗಳಿಗೆ ವಿರುದ್ಧವಾಗಿ ಮುಸ್ಲಿಮರ ಮಿತ್ರ ಗೋತ್ರವನ್ನು ಆಕ್ರಮಿಸಿದರು. ಆಕ್ರಮಿಸಲ್ಪಟ್ಟ ಗೋತ್ರದ ಕೋರಿಕೆ ಮೇರೆಗೆ ಹಝ್ರತ್ ಪೈಗಂಬರರು(ಸ) ಹತ್ತು ಸಾವಿರ ಸೈನಿಕರೊಂದಿಗೆ ಮಕ್ಕದ ಕಡೆಗೆ ಸಾಗಿದರು. ತಮಗೆ ರಕ್ಷೆ ಪಡೆಯುವ ಮಾರ್ಗವಿಲ್ಲವೆಂದು ಗ್ರಹಿಸಿದ ಖುರೈಶರು ಹಝ್ರತ್ ಪೈಗಂಬರರಿಗೆ(ಸ) ಶರಣಾದರು.

ಮಕ್ಕದವರು ಹಝ್ರತ್ ಪೈಗಂಬರರ(ಸ) ಮೇಲೆ ಸುರಿದ ಅಪಹಾಸ್ಯಗಳು ಮತ್ತು ಬೈಗಳು, ಮಕ್ಕದ ಜನರ ಕಡಿಮೆಯಾಗದ ಹಗೆತನ, ದೀರ್ಘಕಾಲದ ಕಷ್ಟ ಮತ್ತು ಹಿಂಸಾಚಾರ, ಎಲ್ಲ ಹೋರಾಟಗಳು, ಎಲ್ಲ ವಿಧಗಳ ನೋವು, ಪ್ರಿಯ ಸಂಬಂಧಿಕರು ಮತ್ತು ಶಿಷ್ಯರ ಅಕಾಲ ಮರಣ ಮೊದಲಾದುವುಗಳು ವಿಜಯದ ಆ ದಿನ ನೆನಪಿನಿಂದ ಬದಿಗೆ ಸರಿಸಲ್ಪಟ್ಟವು ಮತ್ತು ಮಕ್ಕದ



Yuga - January 2019 (2).pmd 12 2/19/2019, 11:34 AM

ಜನರನ್ನು ಸರ್ವಶ್ರೇಷ್ಠನೂ ಸೃಷ್ಟಿಕರ್ತನೂ ಪರಮ ದಯಾವಂತನೂ ಕಾರುಣ್ಯನಿಧಿಯೂ ಸರ್ವರ ಒಡೆಯನೂ ಆಗಿರುವ ಅಲ್ಲಾಹನ ಹೆಸರಿನಲ್ಲಿ ಕ್ಷಮಿಸಲಾಯಿತು. ಪ್ರೀತಿ ಮತ್ತು ಕರುಣೆಯ ಬಾಗಿಲನ್ನು ತೆರೆದಿಡಲಾಯಿತು. ಬೆಳಗ್ಗೆ ಕಠಿಣ ಶತ್ರುಗಳಾಗಿದ್ದವರು ಮಧ್ಯಾಹ್ನ ಸೌಹಾರ್ದ ಸ್ನೇಹಿತರಾದರು. ಕೆಲವರು ವಿಷಣ್ಣ ಸ್ಥಿತಿಯಲ್ಲಿದ್ದರು. ಅವರ ಸೋಲು ಔದಾರ್ಯದಿಂದ ಹಗುರಗೊಳಿಸಲಾಗಿದ್ದರೂ ಅವರಿಗೆ ಸಹಿಸಲು ಬಹಳ ಕಷ್ಟವಾಗಿತ್ತು. ಆದರೆ ಇಂತಹ ಜನರು ಸಹ ಹಝ್ರತ್ ಪೈಗಂಬರರು(ಸ) ಲೇಪಿಸಿದ ಚಿಕಿತ್ಸಕ ಲೇಪನದಿಂದ ಸುಖ ಗಳಿಸಿದರು. ಇಂತಹ ಪರಿಪೂರ್ಣ ಕ್ಷಮಾಧಾನದ ಮತ್ತು ಔದಾರ್ಯದ ಯಾವ ಉದಾಹರಣೆಯೂ ಚರಿತ್ರೆಯಿಂದ ತಿಳಿದು ಬರುವುದಿಲ್ಲ.

ಮಕ್ಕವನ್ನು ಜಯಿಸಿದ ನಂತರ ಕೂಡ ಶಾಂತಿ ಉಂಟಾಗಲಿಲ್ಲ. ಒಂದು ತಿಂಗಳೊಳಗೆ, ಹಝ್ರತ್ ಪೈಗಂಬರರು(ಸ) ಮಕ್ಕದಲ್ಲಿದ್ದಾಗಲೇ ವಿರೋಧೀ ಗೋತ್ರಗಳ ದೊಡ್ಡ ಸೈನ್ಯವನ್ನು ಎದುರಿಸಲು ಹುನೈನ್ ಎಂಬಲ್ಲಿಗೆ ಹೋಗಬೇಕಾಯಿತು. ಯುದ್ಧವು ಪ್ರಾರಂಭವಾಗುವ ಮೊದಲೇ ಮುಸ್ಲಿಮ್ ಸೈನ್ಯದಲ್ಲಿ ಗೊಂದಲ ತಲೆದೋರಿತು. ಆದರೆ ಅವರು ಕೂಡಲೇ ಯುದ್ಧಕ್ಕೆ ಸನ್ನದ್ಧರಾದರು ಮತ್ತು ಯುದ್ಧದಲ್ಲಿ ಜಯಶಾಲಿಗಳಾದರು. ಬಹಳ ದೊಡ್ಡ ಸಂಖ್ಯೆಯಲ್ಲಿ ಸೆರೆಯಾಳುಗಳು ಮತ್ತು ಸಂಪತ್ತು ಮುಸ್ಲಿಮರ ವಶಕ್ಕೆ ಲಭಿಸಿದುವು. ಸೆರೆಯಾಳುಗಳನ್ನು ಪರಿಹಾರ ಪಡೆಯದೆ ಬಿಡುಗಡೆ ಮಾಡಲಾಯಿತು. ಯುದ್ಧದ ಮೂಲಕ ಗಳಿಸಿದ ಅಪಾರ ಸಂಪತ್ತನ್ನು ಮಕ್ಕದವರಿಗೆ ಹಂಚಿಕೊಡಲಾಯಿತು. ಅವರಲ್ಲಿ ಕೆಲವರು ಆಗ ಮುಸ್ಲಿಮರಾಗಿರಲಿಲ್ಲ.

ಯಹೂದಿಯರು ಮುಸ್ಲಿಮರ ವಿರುದ್ಧ ಗೂಢಕಾರಸ್ಥಾನ ನಡೆಸುತ್ತಿದ್ದ ಖೈಬರನ್ನು ವಶಪಡಿಸಿದ ನಂತರ ತಾಯಿಫ್ ನಗರ ಮಾತ್ರ ಹಝ್ರತ್ ಪೈಗಂಬರರ(ಸ) ವಶಕ್ಕೆ ಬರದೆ ಬಾಕಿಯಾಗಿ ಉಳಿದಿತ್ತು. ಉತ್ತರ ದಿಕ್ಕಿನಿಂದ ಇನ್ನೂ ಅಪಾಯವು ಬೆದರಿಕೆ ನೀಡುತ್ತಿತ್ತು. ಪದೇ ಪದೇ ವದಂತಿಗಳು ಬರುತ್ತಿದ್ದುವು – ಅವು ಸುಳ್ಳು ಸಮಾಚಾರಗಳೆಂದು ಅನಂತರ ತಿಳಿಯಿತು – ಒಂದು ದೊಡ್ಡ ಸೈನ್ಯ ಆಕ್ರಮಿಸಲು ಸಿರಿಯಾದ ಗಡಿಭಾಗದಲ್ಲಿ ಜಮಾಯಿಸಿದೆ ಎಂದು. ಹಝ್ರತ್ ಪೈಗಂಬರರು(ಸ) ಕಷ್ಟಪಟ್ಟು ಒಂದು ಸೈನ್ಯವನ್ನು ಜಮಾಯಿಸಿ ಸಿರಿಯದ ಗಡಿಗೆ ಹೊರಟರು. ಅಲ್ಲಿಗೆ ತಲಪಿ ವಿವಿಧ ದಿಕ್ಕುಗಳಿಗೆ ಜನರನ್ನು ಕಳುಹಿಸಿ ವಾಸ್ತವಿಕ ಸ್ಥಿತಿಯನ್ನು ತಿಳಿಯಲು ಪ್ರಯತ್ನಿಸಿದರು. ಆ ಜನರು ಅಲ್ಲಿ ಎಲ್ಲಿಯಾದರೂ ಸೈನಿಕರು ಜಮಾಯಿಸಿಲ್ಲ ಎಂದು ವರದಿ ಮಾಡಿದರು. ಹಝ್ರತ್ ಪೈಗಂಬರರು(ಸ) ಅದರ ಬಗ್ಗೆ ದೃಢಪಡಿಸಿಕೊಂಡು ಅಲ್ಲಿ ಗಡಿಭಾಗದಲ್ಲಿದ್ದ ಗೋತ್ರಗಳೊಂದಿಗೆ ಶಾಂತಿ ಒಪ್ಪಂದ ಮಾಡಿಕೊಂಡರು. ಅಲ್ಲಿ ಯಾವುದೇ ಯುದ್ಧ ನಡೆಯಲಿಲ್ಲ. ಅರಬ್ ದೇಶದ ವಿವಿಧ ಭಾಗಗಳಿಂದ ಅನೇಕ ಪ್ರತಿನಿಧಿ ಸಂಘಗಳು ಮದೀನಕ್ಕೆ ಆಗಮಿಸಿ ತಾವು ಹಝ್ರತ್ ಪೈಗಂಬರರಿಗೆ(ಸ) ವಿಧೇಯರಾಗಿ ಇಸ್ಲಾಮನ್ನು ಸ್ವೀಕರಿಸುವುದಾಗಿ ತಿಳಿಸಿದರು.

## ಮಕ್ಕಕ್ಕೆ ಹಜ್ಜ್ ಯಾತ್ರೆ

ಹಿಜರಿ ಹನ್ನೊಂದನೆಯ ವರ್ಷ ಹಝ್ರತ್ ಪೈಗಂಬರರು(ಸ) ಮಕ್ಕಕ್ಕೆ ಹಜ್ಜ್ ಯಾತ್ರೆಗೆ ಹೊರಟರು. ಹಜ್ಜ್ ಕಾಲದಲ್ಲಿ ಅರಫ ಕಣಿವೆಯಲ್ಲಿ ಒಂದು ಲಕ್ಷ ನಿಷ್ಠಾವಂತ ಮುಸ್ಲಿಮರು ಜಮಾಯಿಸಿದ್ದರು. ಹಝ್ರತ್ ಮುಹಮ್ಮದ್(ಸ) ಅಲ್ಲಾಹನಿಂದ ಆಯ್ಕೆಗೊಂಡವರು, ಖುರೈಶರಿಂದ ತಿರಸ್ಕರಿಸಲ್ಪಟ್ಟವರು, ಹಿಂಸಾಚಾರಕ್ಕೊಳಪಟ್ಟವರು, ಬಹಿಷ್ಕರಿಸಲ್ಪಟ್ಟವರು, ತಾಯಿಫ್‌ನಿಂದ ಓಡಿಸಲ್ಪಟ್ಟವರು, ಮಕ್ಕದಿಂದ ಹೊರಹಾಕಲ್ಪಟ್ಟು ಒಂದು ನೂರು ಒಂಟೆಗಳ ಬಹುಮಾನವನ್ನು ಅವರನ್ನು ಜೀವಂತ ಅಥವಾ ಮೃತರಾಗಿರುವ ಸ್ಥಿತಿಯಲ್ಲಿ ತಂದವರಿಗೆ ನೀಡುವುದಾಗಿ ಘೋಷಿಸಲ್ಪಟ್ಟರು, ಮದೀನದಲ್ಲಿ ಕೂಡ ಖುರೈಶರ ದ್ವೇಷದಿಂದ ಬೆನ್ನಟ್ಟಲ್ಪಟ್ಟವರು, ಬಲದಿಂದ ಎದುರಿಸಲ್ಪಟ್ಟವರು, ಮುತ್ತಿಗೆ ಹಾಕಲ್ಪಟ್ಟವರು, ಗೂಢ ಉಪಾಯಗಳ ಮೂಲಕ ಹಿಂಸಿಸಲ್ಪಟ್ಟವರು ಆಗಿದ್ದರು. ಅವರು ನಿಷ್ಠಾವಂತರೂ ಭಕ್ತಿಯುಳ್ಳವರೂ ಸ್ಥಿರಚಿತ್ತರೂ ವಿನೀತರೂ ದೇವನ ವಿಧೇಯ ದಾಸರೂ ಆಗಿದ್ದರು. ಅಲ್ಲಾಹನ ಈ ಶ್ರೇಷ್ಠ ಸಂದೇಶವಾಹಕನ ಸುತ್ತುಮುತ್ತಲೂ ನಿಷ್ಠಾವಂತರಾದ ಅಲ್ಲಾಹನ ಔನ್ನತ್ಯವನ್ನು ಹೊಗಳುವ ಅನುಯಾಯಿಗಳ ಸಾಗರವು ನೆರೆದಿತ್ತು. ಅವರು ಅಲ್ಲಾಹನ ಏಕತ್ವವನ್ನು ಘೋಷಿಸಿ ಅವನಿಂದ ಕ್ಷಮೆಯನ್ನೂ ಕಾರುಣ್ಯವನ್ನೂ ದಯೆಯನ್ನೂ ಯಾಚಿಸುತ್ತಾ ಪ್ರವಾದಿ ಮುಹಮ್ಮದರಿಗೆ(ಸ) ಆಶೀರ್ವಾದವನ್ನು ಕೋರುತ್ತಾ ಇದ್ದರು.

ಹಝ್ರತ್ ಪೈಗಂಬರರು(ಸ) ತನ್ನ ಒಂಟೆ ಖಸ್ವದ ಮೇಲೇರಿ ಜಬಲುಲ್ ರಹ್ಮತ್‌ಗೆ ಹೋಗಿ ಕೊನೆಯ ಪ್ರವಚನ ನೀಡಿದರು. ಶಹಾದತ್ ಕಲಿಮ ಉಚ್ಚರಿಸಿದ ನಂತರ ಹೀಗೆ ಹೇಳಿದರು: ನಾನು ಮುಂದಿನ ವರ್ಷ ನಿಮ್ಮನ್ನು ಬಂದು ಕಾಣುವೆನು ಎಂಬ ಭರವಸೆ ನನಗಿಲ್ಲ. ನಾನು ಹೇಳುವುದನ್ನು ಕಿವಿಗೊಟ್ಟು ಆಲಿಸಿರಿ. ನೀವು ನಿಮ್ಮ ಜೀವಿತವನ್ನು ಅಲ್ಲಾಹನ ಆಜ್ಞೆಗಳಿಗೆ ಅನುಸಾರವಾಗಿ ಕ್ರಮಬದ್ಧಗೊಳಿಸಿರಿ. ಅನ್ಯರ ಜೀವ, ಸ್ವತ್ತು ಮತ್ತು ಗೌರವವನ್ನು ಹಾನಿಗೊಳಿಸಬೇಡಿರಿ. ಮಹಿಳೆಯರೊಂದಿಗೆ ಸಹಾನುಭೂತಿಯಿಂದ ವರ್ತಿಸಿರಿ. ಅವರ ಹಕ್ಕುಗಳ ಬಗ್ಗೆ ಲಕ್ಷ್ಯ ನೀಡಿರಿ. ಯುದ್ಧದಲ್ಲಿ ಸೆರೆಯಾಳಾಗಿ ದೊರೆತ ಜನರಲ್ಲಿ ಕೆಲವರು ಈಗಲೂ ಮುಸ್ಲಿಮರ ವಶದಲ್ಲಿರುವುದರಿಂದ ಅವರೊಂದಿಗೆ ಉತ್ತಮವಾಗಿ ಕುಟುಂಬದ ಸದಸ್ಯರ ಹಾಗೆ ವರ್ತಿಸಬೇಕು. ಎಲ್ಲ ಮನುಷ್ಯರು ಸಮಾನರಾಗಿದ್ದಾರೆ. ಯಾರೂ ತಾನು ಇನ್ನೊಬ್ಬನಿಗಿಂತ ಶ್ರೇಷ್ಠನೆಂದು ಹೇಳಬಾರದು. ಎಲ್ಲರೂ ಏಕದೇವ ವಿಶ್ವಾಸದಲ್ಲಿ ಸ್ಥಿರವಾಗಿರಬೇಕು. ಇಸ್ಲಾಮಿನ ಮುಖ್ಯ ವಿಶ್ವಾಸಗಳ ಬಗ್ಗೆ ನಿಷ್ಠೆಯಿಂದಿರಬೇಕು.

ಹಝ್ರತ್ ಪೈಗಂಬರರು(ಸ) ಹೀಗೆ ಕೇಳಿದರು: “ನಾನು ಅಲ್ಲಾಹನ ಸಂದೇಶ ನಿಮಗೆ ತಲಪಿಸಿ ನನ್ನ ಕರ್ತವ್ಯ ನೆರವೇರಿಸಿಲ್ಲವೇ?” ಆಗ ಎಲ್ಲರೂ ಉಚ್ಚ ಸ್ವರದಿಂದ “ನೀವು ನಿಮ್ಮ ಹೊಣೆಗಾರಿಕೆ ನಿರ್ವಹಿಸಿದಿರಿ” ಎಂದು ಹೇಳಿದರು. ಈ ಸಂದರ್ಭದಲ್ಲಿ ಅಲ್ಲಿ ಹಾಜರಿರುವವರು ಹಾಜರಿಲ್ಲದವರಿಗೆ ಅವರ ಸಂದೇಶವನ್ನು ತಲಪಿಸಲು ಹೇಳಿದರು.

ಹಝ್ರತ್ ಪೈಗಂಬರರ(ಸ) ಪ್ರವಚನದ ಕೊನೆಗೆ ಹೀಗೆ ದೈವಿಕ ಸಂದೇಶ ಲಭಿಸಿತು: “ಈ ದಿನ ನಿಮ್ಮ ಧರ್ಮವನ್ನು ನಿಮಗೆ ನಾನು ಪರಿಪೂರ್ಣಗೊಳಿಸಿರುವೆನು. ನನ್ನ ಅನುಗ್ರಹವನ್ನು ನಿಮಗೆ ಸಂಪೂರ್ಣವಾಗಿ ದಯಪಾಲಿಸಿರುವೆನು

ಹಾಗೂ ಇಸ್ಲಾಮನ್ನು ನಿಮಗೆ ಧರ್ಮವಾಗಿ ತೃಪ್ತಿಪಟ್ಟಿರುವೆನು." (ಪವಿತ್ರ ಖುರ್‌ಆನ್ 5:4)

ಈ ಸಂದೇಶವಾಣಿ ಹಝ್ರತ್ ಪೈಗಂಬರರು(ಸ) ತನ್ನ ಆಗಮನದ ಉದ್ದೇಶವನ್ನು ಈಡೇರಿಸಿದುದಾಗಿ ತಿಳಿಸುತ್ತದೆ. ಆದುದರಿಂದ ಅವರು ತನ್ನ ಸೃಷ್ಟಿಕರ್ತನಾದ ಪ್ರಭುವಿನ ಕಡೆಗೆ ಮರಳಲು ಸಿದ್ಧನಾಗಬೇಕೆಂಬ ಸೂಚನೆ ಸಹ ಇದರಲ್ಲಿದೆ.

ಮಧ್ಯಾಹ್ನ ಮತ್ತು ಸಾಯಂಕಾಲದ ನಮಾಝ್‌ಗಳನ್ನು ಜೊತೆಗೂಡಿಸಿ ಸಾಮೂಹಿಕವಾಗಿ ಅನುಷ್ಠಿಸಿದ ನಂತರ ಖಸ್ವವನ್ನು ಏರಿ ಜಬಲುಲ್ ರಹ್ಮತ್ ಸಮೀಪಕ್ಕೆ ಹೋಗಿ ಬಂಡೆಕಲ್ಲುಗಳ ಮಧ್ಯೆ ನಿಂತು ಕಅ್‌ಬವನ್ನು ಅಭಿಮುಖೀಕರಿಸಿ ಕೈಯೆತ್ತಿ ಪ್ರಾರ್ಥಿಸಲು ತೊಡಗಿದರು. ಕಡು ಸಂಕಟದಲ್ಲಿರುವ ವ್ಯಕ್ತಿ ದೈನ್ಯದಿಂದ ಪ್ರಾರ್ಥಿಸುವಂತೆ ಅವರು ಕರುಣೆಗೋಸ್ಕರ ಸೂರ್ಯನು ಅಸ್ತಮಿಸುವ ತನಕ ಪ್ರಾರ್ಥಿಸಿದರು.

ಹಜ್ಜ್ ಯಾತ್ರೆ ಮುಗಿಸಿ ಹಝ್ರತ್ ಪೈಗಂಬರರು(ಸ) ಮದೀನಕ್ಕೆ ಮರಳಿದರು. ಅವರು ಇಸ್ಲಾಮಿನ ತತ್ವಗಳನ್ನು ಮುಸ್ಲಿಮರಿಗೆ ವಿವರಿಸುತ್ತಾ ತಮ್ಮ ಜೀವನವನ್ನು ಅವುಗಳಿಗೆ ಅನುಸಾರವಾಗಿ ಅಳವಡಿಸಲು ಪ್ರೇರೇಪಿಸಿದರು. ಒಂದು ದಿನ ಅವರು ತನಗೆ ಈ ಕೆಳಗಿನ ಸಂದೇಶವಾಣಿ ಲಭಿಸಿದೆ ಎಂದರು:

"ಅಲ್ಲಾಹನ ಸಹಾಯ ಮತ್ತು ವಿಜಯ ಪ್ರಾಪ್ತಿಯಾದಾಗ, ಹಾಗೂ ಅಲ್ಲಾಹನ ಧರ್ಮದಲ್ಲಿ ಜನರು ಗುಂಪು ಗುಂಪಾಗಿ ಬಂದು ಸೇರುವುದನ್ನು ನೀನು ಕಂಡಾಗ, ನೀನು ನಿನ್ನ ಪ್ರಭುವಿನ ಸ್ತುತಿಕೀರ್ತನೆ ಮಾಡುವುದರೊಂದಿಗೆ ಅವನ ಪಾವಿತ್ರ್ಯವನ್ನು ಕೊಂಡಾಡು ಮತ್ತು ಅವನೊಡನೆ ಕ್ಷಮೆಯಾಚನೆ ಮಾಡು. ನಿಶ್ಚಯವಾಗಿಯೂ ಅವನು (ತನ್ನ ಭಕ್ತ ದಾಸರ ಕಡೆಗೆ) ಕನಿಕರದಿಂದ ಪದೇ ಪದೇ ತಿರುಗುವವನಾಗಿದ್ದಾನೆ." (ಪವಿತ್ರ ಖುರ್‌ಆನ್ 110:2–4).

ಈ ಸಂದೇಶವಾಣಿಯನ್ನು ಆಲಿಸಿ ಅಬೂಬಕರ್(ರ) ಅಳತೊಡಗಿ ಹೀಗೆ ಹೇಳಿದರು: "ಹೇ ಪ್ರವಾದಿ, ನಿಮ್ಮ ಜೀವಕ್ಕೆ ಪರಿಹಾರವಾಗಿ ನಾವು ನಮ್ಮ ತಂದೆ, ತಾಯಿ ಮತ್ತು ನಮ್ಮನ್ನು ಅರ್ಪಿಸಲು ಸಿದ್ಧರಾಗಿದ್ದೇವೆ." ಆಗ ಹಝ್ರತ್ ಪೈಗಂಬರರು(ಸ) ಹೇಳಿದರು: "ಅಲ್ಲಾಹನನ್ನು ಹೊರತು ಬೇರೆ ಯಾರನ್ನಾದರೂ ಅಮಿತವಾಗಿ ಪ್ರೀತಿಸುವುದು ಅನುಮತಿಸಲ್ಪಡುವುದಾದರೆ ನಾನು ಅಬೂಬಕರ್‌ರನ್ನು ಪ್ರೀತಿಸುತ್ತಿದ್ದೆ. ಆದರೆ ಅಂತಹ ಪ್ರೀತಿಯನ್ನು ಅಲ್ಲಾಹನೊಂದಿಗೆ ಮಾತ್ರ ಹೊಂದಲು ಸಾಧ್ಯ. ಈ ಮಸ್‌ಜಿದ್‌ಗೆ ಪ್ರವೇಶಿಸಲು ಯಾರದೆಲ್ಲ ಮನೆಗಳಿಂದ ಬಾಗಿಲುಗಳು ತೆರೆಯಲ್ಪಟ್ಟಿದೆಯೋ ಆ ಬಾಗಿಲುಗಳಲ್ಲಿ ಅಬೂಬಕರ್‌ರ ಮನೆಯ ಬಾಗಿಲನ್ನು ಹೊರತು ಪಡಿಸಿ ಉಳಿದೆಲ್ಲ ಬಾಗಿಲುಗಳನ್ನು ಮುಚ್ಚಿಬಿಡಿರಿ."

ಹಝ್ರತ್ ಪೈಗಂಬರರು(ಸ) ಅಸ್ವಸ್ಥರಾದರು. ಅವರು ರೋಗಬಾಧಿತರಾಗಿದ್ದರೂ ಕೆಲವು ದಿನಗಳ ಕಾಲ ಮಸ್‌ಜಿದ್‌ಗೆ ಹೋಗಿ ಸಾಮೂಹಿಕ ಪ್ರಾರ್ಥನೆಗೆ ನೇತೃತ್ವ ವಹಿಸುತ್ತಿದ್ದರು. ಆದರೆ ಅವರು ತುಂಬಾ ಬಲಹೀನರಾದಾಗ ಪ್ರಾರ್ಥನೆಯ ನೇತೃತ್ವ ನಡೆಸಲು ಅಬೂಬಕರ್‌ರೊಂದಿಗೆ(ರ) ಹೇಳಿದರು.

## ಹಝ್ರತ್ ಪೈಗಂಬರರು(ಸ) ನಿಧನ ಹೊಂದಿದರು

ಮೃತ್ಯು ಸಮೀಪಿಸುತ್ತಿರುವುದಾಗಿ ಮನವರಿಕೆ ಮಾಡಿಕೊಂಡ ಹಝ್ರತ್ ಪೈಗಂಬರರು(ಸ) ತನ್ನ ಮರಣಾನಂತರ ತನಗೆ ಅತಿಮಾನುಷ ಸ್ಥಾನ ನೀಡದಿರಲಿ ಎಂದು ಆಶಿಸಿ ಹಿಂದಿನ ಕಾಲದ ಪ್ರವಾದಿಗಳ ಅನುಯಾಯಿಗಳು ತಮ್ಮ ಪ್ರವಾದಿಗಳಿಗೆ ನೀಡಿದ ಹಾಗೆ ಅತಿಮಾನುಷ ಸ್ಥಾನ ತಮಗೂ ನೀಡದಿರಲಿ ಎಂದು ಹೇಳಿದರು. ತನ್ನನ್ನು ಸಂದರ್ಶಿಸಲು ಬಂದವರೊಂದಿಗೆ ತಾನೊಬ್ಬ ಮನುಷ್ಯನೆಂದೂ ಮಾನವರಿಗೆ ಮಾರ್ಗದರ್ಶನ ನೀಡಲು ತನಗೆ ಸಂದೇಶವಾಣಿಗಳನ್ನು ದೇವನು ಅವತೀರ್ಣಗೊಳಿಸಿದನೆಂದೂ ಹೇಳಿದರು. ಅವರು ಕೊನೆಗೆ "ಮಹೋನ್ನತನಾದ ಸ್ನೇಹಿತನ ಸಮೀಪಕ್ಕೆ, ಮಹೋನ್ನತನಾದ ಸ್ನೇಹಿತನ ಸಮೀಪಕ್ಕೆ" ಎಂದು ಹೇಳಿ ಪ್ರಾಣ ಬಿಟ್ಟರು.

ಹಝ್ರತ್ ಪೈಗಂಬರರ(ಸ) ನಿಧನ ಮುಸ್ಲಿಮರಿಗೆ ಭಯಾನಕವಾದ ಒಂದು ವಿಪತ್ತಿನ ಹಾಗೆ ಸಂಭವಿಸಿತು. ಮುಸ್ಲಿಮರು ಬಹಳ ಕೋಪಪೀಡಿತರಾದರು. ಉಮರ್(ರ) ಖಡ್ಗ ಹಿರಿದು ಹೇಳಿದರು: "ಹಝ್ರತ್ ಪೈಗಂಬರರು(ಸ) ನಿಧನ ಹೊಂದಿದರೆಂದು ಹೇಳುವವನ ತಲೆ ಕಡಿದು ಹಾಕುವೆನು. ಹಝ್ರತ್ ಪ್ರವಾದಿ ನಿಧನ ಹೊಂದಬಾರದು." ಅಬೂಬಕರ್(ರ) ಆಗಮಿಸಿ ಹಝ್ರತ್ ಪೈಗಂಬರರ(ಸ) ಮೃತಶರೀರದ ಹಣೆಗೆ ಚುಂಬಿಸಿ ಹೇಳಿದರು: "ಅಲ್ಲಾಹನು ನಿಮ್ಮನ್ನು ಎರಡು ಸಾರಿ ಮೃತಪಡಿಸಲಾರನು." ಅವರು ಹೊರಗೆ ಬಂದು ಉಮರ್‌ರೊಂದಿಗೆ(ರ) ಸುಮ್ಮನೆ ಇರಲು ಹೇಳಿ ಪವಿತ್ರ ಖುರ್‌ಆನಿನ ಈ ಕೆಳಗಿನ ವಚನಗಳನ್ನು ಓದಿದರು:

"ಮುಹಮ್ಮದ್ ಕೇವಲ ಓರ್ವ ಸಂದೇಶವಾಹಕರಾಗಿದ್ದಾರೆ. ಅವರಿಗಿಂತ ಹಿಂದಿನ ಎಲ್ಲ ಸಂದೇಶವಾಹಕರೂ ಗತಿಸಿದ್ದಾರೆ. ಒಂದು ವೇಳೆ ಅವರು (ಮುಹಮ್ಮದ್) ಮೃತಪಟ್ಟರೆ ಅಥವಾ ಹತ್ಯೆಗೀಡಾದರೆ ನೀವು ಹಿಂತಿರುಗಿ ಹೋಗುವಿರಾ?" (ಪವಿತ್ರ ಖುರ್‌ಆನ್ 31:145)

ಅಬೂಬಕರ್(ರ) ಮುಂದುವರಿದು ಹೇಳಿದರು: "ಯಾರು ಮುಹಮ್ಮದನ್ನು ಆರಾಧಿಸುತ್ತಾನೋ ಅವನು ತಿಳಿಯಲಿ, ಮುಹಮ್ಮದ್ ಮೃತರಾಗಿರುವರು. ಯಾರು ಅಲ್ಲಾಹನನ್ನು ಆರಾಧಿಸುತ್ತಾನೋ ಅವನು ನೆನಪಿಡಲಿ – ಅಲ್ಲಾಹನು ಶಾಶ್ವತವಾಗಿ ಜೀವಿಸಿರುವವನು. ಅವನೆಂದೂ ಮೃತನಾಗಲಾರನು."

ಅದ್ವಿತೀಯ ವ್ಯಕ್ತಿತ್ವವನ್ನು ಎಲ್ಲ ರೀತಿಗಳಲ್ಲೂ ಹೊಂದಿದ ಮಹಾಪುರುಷರ ಜೀವನ ಹೀಗೆ ಕೊನೆಗೊಂಡಿತು.

**ಕೆಲವು ಪಾಶ್ಚಿಮಾತ್ಯ ವಿದ್ವಾಂಸರ ಅಭಿಪ್ರಾಯಗಳು:** ಲಾ ಮಾರ್ಟಿನ್ ಹಿಸ್ಟರಿ ಆಫ್ ಟರ್ಕಿಯಲ್ಲಿ ಹೀಗೆ ಬರೆದಿದ್ದಾರೆ: "ದಾರ್ಶನಿಕ, ಭಾಷಣಕಾರ, ಸಂದೇಶವಾಹಕ, ನಿಯಮ ನಿರ್ಮಾಪಕ, ಯೋಧ, ತತ್ವಗಳ ಜಯಶಾಲಿ, ವೈಚಾರಿಕ ವಿಶ್ವಾಸಗಳನ್ನು ಪುನಃಸ್ಥಾಪಿಸಿದವ, ಇಪ್ಪತ್ತು ಲೌಕಿಕ ಸಾಮ್ರಾಜ್ಯಗಳ ಮತ್ತು ಒಂದು ಆಧ್ಯಾತ್ಮಿಕ ಸಾಮ್ರಾಜ್ಯದ ಸ್ಥಾಪಕ ಮುಹಮ್ಮದ್ ಆಗಿದ್ದಾರೆ. ಮನುಷ್ಯರ ಶ್ರೇಷ್ಠತೆಯನ್ನು ಅಳೆಯಬಹುದಾದ ಎಲ್ಲ ಮಾನದಂಡಗಳನ್ನು ಬಳಸಿಕೊಂಡು ನಾವು ಕೇಳಬಹುದು –

ಅವರಿಗಿಂತ ಶ್ರೇಷ್ಠನಾದ ಬೇರೊಬ್ಬ ಮಾನವನಿದ್ದಾನೆಯೇ?" (LAMARTINE, History of Turkey, Page 276)

ಎಸ್.ಪಿ. ಸ್ಕಾಟ್, ಹಿಸ್ಟರಿ ಆಫ್ ಮೂರಿಶ್ ಎಂಪಯರ್‌ನಲ್ಲಿ ಹೀಗೆ ಬರೆದರು: "ಧರ್ಮದ ಉದ್ದೇಶಲಕ್ಷ್ಯ ನೈತಿಕ ಗುಣಗಳನ್ನು ಬೆಳೆಸುವುದು, ಕೆಡುಕುಗಳನ್ನು ನಿವಾರಿಸುವುದು, ಮನುಷ್ಯರ ಸಂತೋಷ ವರ್ಧಿಸುವುದು, ಮನುಷ್ಯನ ಬುದ್ಧಿಯನ್ನು ವಿಕಾಸಗೊಳಿಸುವುದು ಆಗಿದ್ದರೆ ಮತ್ತು ಮನುಷ್ಯರು ಅಂತಿಮ ವಿಚಾರಣೆಗೆ ಕರೆಯಲ್ಪಡುವ ಮಹತ್ವಪೂರ್ಣ ದಿನದಲ್ಲಿ ಸತ್ಕರ್ಮಗಳು ಉಪಯುಕ್ತವಾಗುವುದಾದರೆ ಮುಹಮ್ಮದ್ ನಿಶ್ಚಯವಾಗಿಯೂ ದೇವನ ಸಂದೇಶವಾಹಕರಾಗಿದ್ದರು ಎಂದು ಹೇಳುವುದು ಅಸಂಬದ್ಧವಾಗಲಿ, ವಿಚಾರಹೀನವಾದುದಾಗಲಿ ಅಲ್ಲ." (S.P. Scott, History Of Moorish Empire in Europe, Page 126)

**ಉಪಸಂಹಾರ**

ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಮನುಷ್ಯರಲ್ಲಿ ಬಹಳ ದೊಡ್ಡದಾದೊಂದು ವಿಭಾಗದ ಮೇಲೆ ಸ್ಥಿರ ಪ್ರಭಾವ ಬೀರಿದರು. ಅವರು ನಿಶ್ಚಯವಾಗಿಯೂ ಮನುಷ್ಯರಿಗೆ ಉತ್ತಮ ಮಾದರಿ ಆಗಿದ್ದರು. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿರುವನು:

"ನಿಸ್ಸಂದೇಹವಾಗಿ ನಿಮಗೆ ಅಲ್ಲಾಹನ ಸಂದೇಶವಾಹಕನಲ್ಲಿ ಒಂದು ಉತ್ತಮ ಮಾದರಿ ಇದೆ." (33:22).

ಅಲ್ಲಾಹನು ಹೀಗೆ ಸಹ ಹೇಳಿರುವನು:

"ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ದೂತರು ಪ್ರವಾದಿಗೆ ಅನುಗ್ರಹಗಳನ್ನು ಬಯಸುತ್ತಾರೆ. ಎಲೈ ವಿಶ್ವಾಸಿಗಳೇ, ಅವರಿಗೆ ಅನುಗ್ರಹವೂ ಶಾಂತಿಯೂ ದೊರೆಯಲಿಕ್ಕೋಸ್ಕರ ನೀವು ಸಹ ಪ್ರಾರ್ಥಿಸಿರಿ." (33:57).

ಈ ದಿವ್ಯ ಆದೇಶ ಪ್ರಕಾರ ಮುಸ್ಲಿಮರು ಎಲ್ಲ ಶತಮಾನಗಳಲ್ಲಿ ಯಾವಾಗಲೂ ಹಝ್ರತ್ ಪೈಗಂಬರರಿಗೋಸ್ಕರ ಪ್ರಾರ್ಥಿಸಿ ಅಲ್ಲಾಹನ ಅನುಗ್ರಹವನ್ನೂ ಶಾಂತಿಯನ್ನೂ ಬಯಸುತ್ತಾರೆ. ಈಗ 100 ಕೋಟಿಗಿಂತ ಹೆಚ್ಚು ಮುಸ್ಲಿಮರು ಲೋಕದಲ್ಲಿದ್ದಾರೆ ಮತ್ತು ಅವರ ಸಂಖ್ಯೆ ವರ್ಧಿಸುತ್ತಾ ಇದೆ. ಪ್ರತಿಯೊಬ್ಬ ಸಾಮಾನ್ಯ ಮುಸ್ಲಿಮ್ ಕನಿಷ್ಠ ನಲ್ವತ್ತು ಸಾರಿ ಪ್ರತಿದಿನ ಅಲ್ಲಾಹನ ಅನುಗ್ರಹ ಹಝ್ರತ್ ಪೈಗಂಬರರಿಗೆ ದೊರೆಯಲಿ ಎಂದು ಪ್ರಾರ್ಥಿಸುತ್ತಾನೆ. ಅನೇಕರು ಹೆಚ್ಚು ಸಾರಿ ಪ್ರಾರ್ಥಿಸುತ್ತಾರೆ. ಹಝ್ರತ್ ಪೈಗಂಬರರ(ಸ) ಹೆಸರನ್ನು ಅಥವಾ ಅವರು ಪ್ರವಾದಿ ಎಂಬ ಸ್ಥಾನವನ್ನು ಹೇಳುವಾಗ ಅದರೊಂದಿಗೆ ಅವರಿಗೆ ಅನುಗ್ರಹ ಮತ್ತು ಶಾಂತಿ ದೊರಕಲಿ ಎಂದು ಪ್ರಾರ್ಥನೆ ಮಾಡಲಾಗುತ್ತಿದೆ. ಆದುದರಿಂದ ಹಗಲು ರಾತ್ರಿ ಪ್ರತಿಯೊಂದು ಕ್ಷಣ ಕ್ಷಣದಲ್ಲೂ ಹಝ್ರತ್ ಪೈಗಂಬರರಿಗೋಸ್ಕರ(ಸ) ಕೋಟಿಗಟ್ಟಲೆ ಜನರು ಪ್ರಾರ್ಥಿಸುತ್ತಾ ಇರುತ್ತಾರೆ. ದೇವನ ಸೇವೆಗೆ ಮತ್ತು ಅವನ ಸೃಷ್ಟಿಗಳ ಸೇವೆಗೋಸ್ಕರ ತನ್ನ ಜೀವಿತವನ್ನು ಸಂಪೂರ್ಣವಾಗಿ ಅರ್ಪಿಸಿದ ಆ ಮಹಾನುಭಾವರು ಮಾನವರಿಂದ ಹೃತ್ಪೂರ್ವಕ ಕೃತಜ್ಞತೆ ಪಡೆಯಲು ಅರ್ಹರಾಗಿದ್ದಾರೆ. ಹಝ್ರತ್ ಪೈಗಂಬರರಿಗೆ(ಸ) ಅಲ್ಲಾಹನ ಅನುಗ್ರಹ ಮತ್ತು ಶಾಂತಿ ದೊರೆಯಲಿ ಎಂದು ಸ್ಥಿರವಾಗಿ ಪ್ರಾರ್ಥಿಸುತ್ತಾ ಇರುವ ಜನರು ಅವರಿಗೆ ಸಲ್ಲಿಸಬೇಕಾದ ಋಣದ ಒಂದು ಅಂಶವನ್ನು ಮಾತ್ರ ಮರುಪಾವತಿ ಮಾಡುವವರಾಗಿದ್ದಾರೆ.

ಹಝ್ರತ್ ಪೈಗಂಬರರ(ಸ) ಅತ್ಯಂತ ಶ್ರೇಷ್ಠ ಅನುಯಾಯಿಯೂ ಅವರ ನಿಷ್ಠಾವಂತ ದಾಸನೂ ಆಗಿದ್ದ ವಾಗ್ದತ್ತ ಮಸೀಹರು(ಅ) ಹಝ್ರತ್ ಪೈಗಂಬರರ(ಸ) ಸತ್ಯತೆಗೆ ಇರುವ ಸಾಕ್ಷ್ಯಾಧಾರವನ್ನು ಮತ್ತು ಅವರು ಕಲಿಸಿದ ವಿಶ್ವಾಸಾದರ್ಶಗಳ ಪರಿಪೂರ್ಣತೆಯನ್ನು ಪಾರ್ಸೀ ಭಾಷೆಯ ಎರಡು ಪದ್ಯಗಳಲ್ಲಿ ಹೀಗೆ ವಿವರಿಸಿದ್ದಾರೆ:

ನಿರಕ್ಷರರಾಗಿದ್ದರೂ ಆಂತರಿಕ ಜ್ಞಾನ ಮತ್ತು ಬುದ್ಧಿ ಶಕ್ತಿಯಲ್ಲಿ ಅದ್ವಿತೀಯರು ಆಗಿರುವ ಅವರ ಸತ್ಯತೆಗೆ ಬೇರೆ ಯಾವ ಸಾಕ್ಷ್ಯಾಧಾರದ ಆವಶ್ಯಕತೆ ಇದೆ?

ನನ್ನ ಕಣ್ಣು ದೂರ ದೂರ ಸಂಚರಿಸಿ ವೀಕ್ಷಿಸಿದೆ. ಅವರು ಸ್ಥಾಪಿಸಿದ ಧರ್ಮಕ್ಕಿಂತ ಪರಿಶುದ್ಧವಾದ ಬೇರೊಂದು ಕಾರಂಜಿಯನ್ನು ನಾನು ಕಾಣಲಿಲ್ಲ.

**(ಭಾಷಾಂತರ : ಯಮ್. ಉಬೈದುಲ್ಲಾ)** ♦

**LOVE FOR ALL**
**HATRED FOR NONE**
**LET'S MAKE IT HEAVEN**

**LOVE FOR HONESTY AND**
**HATRED FOR DISHONESTY**
**ಪ್ರಾಮಾಣಿಕತೆಯೊಂದಿಗೆ ಪ್ರೀತಿ ಮತ್ತು**
**ಅಪ್ರಾಮಾಣಿಕತೆಯೊಂದಿಗೆ ದ್ವೇಷ**

# ಮಹಿಳೆಯರೊಂದಿಗೆ ವರ್ತಿಸುವ ಬಗ್ಗೆ ಇಸ್ಲಾಮ್ ನೀಡುವ ಉಪದೇಶಗಳು–2

**ಅಹ್ಮದಿಯಾ ಜಮಾಅತ್ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಅವರ ಉಪದೇಶಗಳ ಆಯ್ದ ಭಾಗಗಳು**

## ಬಹುಭಾರ್ಯತ್ವ

ಬಹುಭಾರ್ಯತ್ವದ ಬಗ್ಗೆ ವಿಮರ್ಶಕರು ಅದು ಆತ್ಮನಿಯಂತ್ರಣರಾಹಿತ್ಯ ಎಂದೂ ಏಕಪತ್ನೀತ್ವ ಆದರ್ಶ ಪದ್ಧತಿ ಎಂದೂ ಹೇಳುತ್ತಾರೆ. ಅನ್ಯರು ಅನಾವಶ್ಯಕ ಹಸ್ತಕ್ಷೇಪ ಮಾಡುವುದರ ಬಗ್ಗೆ ನಾನು ಆಶ್ಚರ್ಯಪಡುತ್ತೇನೆ. ಇಸ್ಲಾಮ್ ಪುರುಷನಿಗೆ ನಾಲ್ಕು ಪತ್ನಿಯರನ್ನು ವಿವಾಹವಾಗುವ ಅನುಮತಿ ನೀಡಿದ್ದರೂ ಅದು ಕಡ್ಡಾಯವಾದುದೇನೂ ಅಲ್ಲ. ಪ್ರತಿಯೊಬ್ಬ ಪುರುಷನಿಗೂ ಸ್ತ್ರೀಗೂ ಈ ವಿಷಯ ತಿಳಿದಿದೆ. ಪತ್ನಿ ವಿವಾಹಕ್ಕೆ ಮೊದಲು ಹೀಗೆ ಶರತ್ತು ವಿಧಿಸಬಹುದಾಗಿದೆ: ಯಾವ ಸಂದರ್ಭದಲ್ಲಿಯೂ ತನ್ನ ಪತಿ ದ್ವಿತೀಯ ವಿವಾಹ ಮಾಡಬಾರದು ಎಂದು. ಇಂತಹ ಶರತ್ತು ಪ್ರಕಾರ ವಿವಾಹವಾಗಿದ್ದರೆ ಪತಿ ಇನ್ನೊಂದು ವಿವಾಹವಾದರೆ ಅವನು ವಿವಾಹದ ಶರತ್ತನ್ನು ಉಲ್ಲಂಘಿಸುವವನಾಗುತ್ತಾನೆ. ಆದರೆ ಪತ್ನಿ ಯಾವುದೇ ಶರತ್ತನ್ನು ಮುಂದಿಡದೆ ವಿವಾಹವಾದರೆ, ರೂಢಿಯಲ್ಲಿರುವ ಕಾನೂನು ಪ್ರಕಾರ ತೃಪ್ತಳಾಗಿದ್ದರೆ, ಹೊರಗಿನವರು ಹಸ್ತಕ್ಷೇಪ ಮಾಡುವ ಹಕ್ಕು ಹೊಂದಿರುವುದಿಲ್ಲ. ಇಂತಹ ಸಂದರ್ಭದಲ್ಲಿ ಈ ನಾಣ್ಣುಡಿ ಅನ್ವಯವಾಗುತ್ತದೆ: "ಪತಿ ಪತ್ನಿಯರು ರಾಜಿಯಾಗಿದ್ದರೆ ಖಾಝಿಗೆ ಅಲ್ಲೇನು ಕೆಲಸವಿದೆ?"

ಅಲ್ಲಾಹನು ಬಹುಭಾರ್ಯತ್ವವನ್ನು ಕಡ್ಡಾಯ ಮಾಡಿಲ್ಲ ಎಂದು ಪ್ರತಿಯೊಬ್ಬ ಬುದ್ಧಿಶಾಲಿಗೆ ತಿಳಿದಿದೆ. ಅಲ್ಲಾಹನು ಅದಕ್ಕೆ ಕೇವಲ ಅನುಮತಿ ನೀಡಿ ಅದನ್ನು ನ್ಯಾಯಬದ್ಧವನ್ನಾಗಿ ಮಾಡಿರುವನು. ಯಾವನಾದರೂ ಪತಿ ಯೋಗ್ಯ ಕಾರಣಗಳಿರುವುದರಿಂದ ಶರೀಅತ್ ಪ್ರಕಾರ ದ್ವಿತೀಯ ವಿವಾಹವಾಗಲು ಇಚ್ಛಿಸಿದರೆ ಮತ್ತು ಆತನ ಪತ್ನಿ ಅದರ ಬಗ್ಗೆ ಅತೃಪ್ತಳಾಗಿದ್ದರೆ ಆಕೆ ವಿವಾಹ ವಿಚ್ಛೇದನೆಯನ್ನು ಆವಶ್ಯಪಟ್ಟು ತನ್ನ ಆತಂಕವನ್ನು ಪರಿಹರಿಸಬಹುದಾಗಿದೆ. ವಿವಾಹವಾಗಲಿರುವ ದ್ವಿತೀಯ ಮಹಿಳೆಗೆ ಇಷ್ಟವಿಲ್ಲದಿದ್ದರೆ ಆಕೆ ವಿವಾಹದ ಪ್ರಸ್ತಾಪವನ್ನು ತಿರಸ್ಕರಿಸಬಹುದು. ಯಾರ ಮೇಲೆಯೂ ನಿರ್ಬಂಧ ಹೇರಿಲ್ಲ. ಆದರೆ ಈ ಇಬ್ಬರು ಮಹಿಳೆಯರು ದ್ವಿತೀಯ ವಿವಾಹವನ್ನು ಸಮ್ಮತಿಸಿದರೆ ಒಬ್ಬ ಆರ್ಯಾಸಾಮಾಜಿಗೆ ಹಸ್ತಕ್ಷೇಪ ಮಾಡಲು ಹೇಗೆ ತಾನೆ ಸಾಧ್ಯ? ವಿವಾಹಿತನಾಗುವವನು ಮೇಲೆ ಹೇಳಿದ ಇಬ್ಬರು ಮಹಿಳೆಯರಿಗೆ ತನ್ನ ಪ್ರಸ್ತಾಪ ತಿಳಿಸುತ್ತಾನೆಯೇ ಹೊರತು ಆರ್ಯಾಸಮಾಜಿ ದೂಷಕನಿಗಲ್ಲ. ಒಬ್ಬ ಪತ್ನಿ ತನ್ನ ಪತಿಯ ದ್ವಿತೀಯ ವಿವಾಹಕ್ಕೆ ಸಮ್ಮತಿಸಿದರೆ, ದ್ವಿತೀಯ ಪತ್ನಿಗೂ ಅದು ತೃಪ್ತಿಕರವಾಗಿದ್ದರೆ ಬೇರೆ ಯಾರಿಗೂ ಅದರ ಬಗ್ಗೆ ಹಸ್ತಕ್ಷೇಪ ಮಾಡಲು ಅಧಿಕಾರವಿಲ್ಲ. ಇದು ಮಾನವನ ಹಕ್ಕುಗಳಿಗೆ ಸಂಬಂಧಿಸಿದ ವಿಷಯವಾಗಿದೆ. ಒಬ್ಬನು ಇಬ್ಬರು ಪತ್ನಿಯರನ್ನು ಹೊಂದಲು ಬಯಸಿದರೆ ಅವನು ದೇವನಿಗೆ ಯಾವ ಹಾನಿಯನ್ನೂ ಉಂಟುಮಾಡುವುದಿಲ್ಲ. ಪ್ರಥಮ ಪತ್ನಿ ಅಥವಾ ದ್ವಿತೀಯ ಪತ್ನಿಗೆ ಮಾತ್ರ ಹಾನಿ ಸಂಭವಿಸಬಹುದಾಗಿದೆ. ಪ್ರಥಮ ಪತ್ನಿ ತನ್ನ ಹಕ್ಕುಗಳಿಗೆ ತನ್ನ ಪತಿಯ ದ್ವಿತೀಯ ವಿವಾಹದ ಕಾರಣ ಹಾನಿ ಸಂಭವಿಸಬಹುದೆಂದು ಭಾವಿಸಿದರೆ ಆಕೆ ತನ್ನ ಪತಿಯಿಂದ ವಿವಾಹ ವಿಚ್ಛೇದನೆಯನ್ನು ಆವಶ್ಯಪಡಬಹುದು. ಪತಿ ಅದಕ್ಕೆ ಒಪ್ಪದಿದ್ದರೆ ಆಕೆ ನ್ಯಾಯಾಲಯದ ಮೂಲಕ ವಿವಾಹ ವಿಚ್ಛೇದನೆ ಪಡೆಯಬಹುದು. ದ್ವಿತೀಯ ಪತ್ನಿ ಪರಿಸ್ಥಿತಿ ಅತೃಪ್ತಿಕರವಾಗಿದೆ ಎಂದು ಮನಗಂಡರೆ ಅವಳು ಸಹ ತನ್ನ ಹಕ್ಕುಗಳ ಬಗ್ಗೆ ಸ್ವತಃ ತೀರ್ಮಾನಿಸಬಹುದಾಗಿದೆ.

ನ್ಯಾಯ ಪಾಲನೆಯಾಗಿಲ್ಲವೆಂದು ಆಕ್ಷೇಪಿಸುವುದು ನಿರರ್ಥಕವಾಗಿದೆ. ಸರ್ವಶಕ್ತನಾದ ಅಲ್ಲಾಹನು ಆಜ್ಞಾಪಿಸಿರುವುದೇನೆಂದರೆ, ಒಬ್ಬಳಿಗಿಂತ ಹೆಚ್ಚು ಪತ್ನಿಯರನ್ನು ಹೊಂದಿದವರು ಪ್ರತಿಯೊಬ್ಬ ಪತ್ನಿಯೊಂದಿಗೆ ನ್ಯಾಯಪೂರ್ಣವಾಗಿ ವರ್ತಿಸಬೇಕೆಂದು ಮತ್ತು ಹಾಗೆ ಮಾಡಲು ಸಾಧ್ಯವಾಗುವುದಿಲ್ಲವಾದರೆ ಒಬ್ಬ ಪತ್ನಿಯನ್ನು ಮಾತ್ರ ಹೊಂದಬೇಕೆಂದು.

ಬಹುಭಾರ್ಯತ್ವವನ್ನು ಅನುಮತಿಸಿರುವುದು ಲೈಂಗಿಕ ಸುಖಾನುಭೂತಿಗೋಸ್ಕರ ಎಂದು ಆಕ್ಷೇಪಿಸುವುದು ಪೂರ್ವಗ್ರಹ ಪೀಡಿತರಾಗಿ ಮತ್ತು ಅಜ್ಞಾನದಿಂದಾಗಿದೆ. ಲೈಂಗಿಕ ಸುಖಾನುಭೂತಿಯುಳ್ಳ ಅನೇಕರನ್ನು ನಾನು ಬಲ್ಲೆನು. ಆದರೆ ಅವರು ಬಹುಭಾರ್ಯತ್ವವನ್ನು ಅವಲಂಬಿಸಿ ತಮ್ಮನ್ನು ರಕ್ಷಿಸಿ ಉತ್ತಮ ನೈತಿಕ ಗುಣವುಳ್ಳವರೂ ದೇವಭಕ್ತಿಯುಳ್ಳವರೂ ಆದರು. ಹೀಗೆ ಮಾಡದವರು ತಮ್ಮ ಇಂದ್ರಿಯಾಸಕ್ತಿಗಳ ಬಿರುಗಾಳಿಯಿಂದ, ಕುಖ್ಯಾತರಾದ ಮಹಿಳೆಯರ ಬಾಗಿಲಿಗೆ ಹೋಗಿ ಲೈಂಗಿಕ ಕಾಯಿಲೆಗಳಿಗೆ ತುತ್ತಾಗುತ್ತಾರೆ. ಅವರು ಬಹಿರಂಗವಾಗಿಯೂ ರಹಸ್ಯವಾಗಿಯೂ ಎಂತಹ ಕೆಲಸ ಮಾಡುತ್ತಾರೆಂದರೆ, ಇಬ್ಬರು, ಮೂವರು ಪತ್ನಿಯರನ್ನು ಹೊಂದಿದವರು ಅಂತಹ ಕೆಟ್ಟ ಕೃತ್ಯಗಳನ್ನು ಎಂದೂ ಮಾಡುವುದಿಲ್ಲ. ಬಹುಭಾರ್ಯರನ್ನು ಹೊಂದದವರು ಸ್ವಲ್ಪ ಸಮಯ ಸಂಯಮದಿಂದಿರುತ್ತಾರೆ. ಆದರೆ ಅನಂತರ ಅವರ ಇಂದ್ರಿಯಾಸಕ್ತಿ ಒಡೆದ ಅಣೆಕಟ್ಟಿನಿಂದ ರಭಸವಾಗಿ ಧುಮ್ಮಿಕ್ಕುವ ನೀರಿನ ಹಾಗೆ ಧುಮುಕಿ ವಿಶಾಲ ಪ್ರದೇಶವನ್ನು ನೆರೆಯಿಂದ ಹಾವಳಿ ನಡೆಸುವಂತಾಗುತ್ತದೆ.

ಸತ್ಯವೇನೆಂದರೆ, ಕರ್ಮಗಳು ಸಂಕಲ್ಪಕ್ಕೆ ಅನುಸಾರವಾಗಿ ತೀರ್ಮಾನಿಸಲ್ಪಡುತ್ತವೆ. ದ್ವಿತೀಯ ವಿವಾಹ ಮಾಡಿ ತಮಗೆ ಸಾತ್ವಿಕರಾಗಿ ಜೀವಿಸಲು ಸಾಧ್ಯವಾಗುವುದು, ತಮಗೆ ಭೋಗಲಾಲಸೆಯಿಂದ ಬಿಡುಗಡೆ ಹೊಂದಬಹುದು, ತಮ್ಮ ಸಾತ್ವಿಕರಾದ ಮಕ್ಕಳು ಜನಿಸುವಂತಾಗುವುದು, ಎಂದು ಭಾವಿಸುವವರು ಈ ಪರಿಶುದ್ಧ ಪದ್ಧತಿಯನ್ನು ಅನುಸರಿಸಬೇಕು. ವ್ಯಭಿಚಾರ ಮತ್ತು ದುರ್ನೋಟ ಪಾಪಕೃತ್ಯಗಳಾಗಿದ್ದು ನೈತಿಕತೆಯನ್ನು ಕೆಡಿಸುವಂತಹದೂ ಶಾರೀರಿಕ ಕಷ್ಟಗಳಿಗೆ ಕಾರಣವಾಗುವವೂ ಆಗಿವೆ. ಒಬ್ಬಳಿಗಿಂತ ಹೆಚ್ಚು ಪತ್ನಿಯರನ್ನು, ತನ್ನನ್ನು ರಕ್ಷಿಸಲು ವಿವಾಹವಾಗುವವನು ದೇವದೂತರ ಹಾಗೆ ಪರಿಶುದ್ಧನಾಗಲು ಬಯಸುವವನಾಗಿದ್ದಾನೆ. ಅಂಧವಾದ ಲೋಕವು ತಪ್ಪು ತರ್ಕ ಮತ್ತು ನಿರಾಧಾರ ಅಹಂಭಾವಕ್ಕೆ ಈಡಾಗಿದೆ



Yuga - January 2019 (2).pmd 16 2/19/2019, 11:34 AM

ಎಂದು ನಾನು ತಿಳಿದಿದ್ದೇನೆ. ನೈತಿಕತೆಯನ್ನು ಅವಲಂಬಿಸಲು ಸ್ಥಿರವಾಗಿ ಪ್ರಯತ್ನ ಮಾಡದವರು, ಅದನ್ನು ಗಳಿಸಲು ಪ್ರಯತ್ನ ಮಾಡದವರು, ಅದಕ್ಕೋಸ್ಕರ ಪ್ರಾರ್ಥಿಸದವರು ಹೊರಗೆ ಹೊಳಪುಳ್ಳ ಆದರೆ ಒಳಗೆ ಕೀವು ತುಂಬಿದ ಕುರುವಿನ ಹಾಗೆ ಇರುವವರಾಗಿದ್ದಾರೆ. ಅಲ್ಲಾಹನ ಕಡೆಗೆ ಬಾಗುವವರು, ಲೋಕದ ನಿಂದನೆಗಳನ್ನು ನಿರ್ಲಕ್ಷಿಸುತ್ತಾರೆ ಮತ್ತು ಭಿಕ್ಷುಕನು ರೊಟ್ಟಿಯನ್ನು ಬೇಡುವಂತೆ ಸಾತ್ವಿಕತೆಯ ಮಾರ್ಗವನ್ನು ಅನ್ವೇಷಿಸುತ್ತಾರೆ. ಅಲ್ಲಾಹನಿಗೋಸ್ಕರ ಕಷ್ಟಗಳ ಅಗ್ನಿಗೆ ಧುಮುಕುವವರು, ಯಾವಾಗಲೂ ಶೋಕಭರಿತರಾಗಿರುವವರು, ಆತ್ಮಗಳು ಕರಗಿದವರು, ದೇವಮಾರ್ಗದಲ್ಲಿ ಉದ್ದೇಶಲಕ್ಷ್ಯವನ್ನು ತಲಪಲು ಬೆನ್ನು ಮುರಿದು ಕೊಂಡವರು ತಮ್ಮ ಪತ್ನಿಯರೊಂದಿಗೆ ಹಗಲು–ರಾತ್ರಿಗಳಲ್ಲಿ ಸ್ವಲ್ಪ ಸಮಯ ಸಹವಾಸ ಮಾಡಿ ಸಾಂತ್ವನ ಗಳಿಸಬೇಕೆಂದೂ ಅವರು ಹೊಸ ಶಕ್ತಿಯೊಂದಿಗೆ ತಮ್ಮ ಧಾರ್ಮಿಕ ಕೃತ್ಯಗಳಿಗೆ ಮರಳಬೇಕೆಂದೂ ಅಲ್ಲಾಹನು ಇಚ್ಛಿಸುತ್ತಾನೆ. ಈ ಮಾರ್ಗದ ಬಗ್ಗೆ ಅನುಭವ ಜ್ಞಾನ ಗಳಿಸಿದವನು ಹೊರತು ಬೇರೆ ಯಾರಿಗೂ ಇದನ್ನು ಮನವರಿಕೆ ಮಾಡಲು ಸಾಧ್ಯವಾಗದು. (ಚಶ್ಮಯೆ ಮಅ್‌ರಿಫತ್, ರೂಹಾನೀ ಖಝಾಇನ್ ಸಂಪುಟ 23, ಪುಟ 246 – 248).

### ಪತ್ನಿಯರೊಂದಿಗೆ ಸಮಾನ ವರ್ತನೆ

ಪತಿ, ಪತ್ನಿಯರನ್ನು ಪ್ರೀತಿಸಬೇಕಲ್ಲದೆ ಅವನು ತನ್ನ ಎಲ್ಲ ಪತ್ನಿಯರಿಗೆ ಸಮಾನ ಸೌಲಭ್ಯಗಳನ್ನು ಒದಗಿಸಬೇಕು. ಬಟ್ಟೆ, ಆಹಾರ, ಖರ್ಚಿಗೆ ಹಣ ಮತ್ತು ಸಹವಾಸಕ್ಕೆ ಸಂಬಂಧಿಸಿ ಸಮಾನವಾಗಿ ಪ್ರತಿಯೊಬ್ಬ ಪತ್ನಿಯೊಂದಿಗೆ ವರ್ತಿಸಬೇಕು. ತನಗಿರುವ ಹೊಣೆಗಾರಿಕೆಗಳ ಬಗ್ಗೆ ಪೂರ್ಣ ಜ್ಞಾನ ಗಳಿಸಿದವನು ವಿವಾಹವಾಗುವುದಕ್ಕೆ ಬದಲಾಗಿ ವಿವಾಹ ರಹಿತನಾಗಿರಲು ಬಯಸುವನು. ಅಲ್ಲಾಹನ ಆಜ್ಞೆಗಳನ್ನು ಪಾಲಿಸಲು ನಿರಂತರವಾಗಿ ನಿರತನಾದವನು ಮಾತ್ರ ತನ್ನ ಹೊಣೆಗಾರಿಕೆಗಳನ್ನು ಈಡೇರಿಸಲು ಪ್ರಯತ್ನಿಸುವನು. ದೇವ ಶಿಕ್ಷೆಗೆ ಗುರಿಯಾಗುವಂತಹ ಸುಖಲೋಲುಪ ಜೀವಿತಕ್ಕಿಂತ ಕಷ್ಟಪಡುವ ಜೀವಿತವೇ ಸಾವಿರ ಪಟ್ಟು ಉತ್ತಮವಾಗಿದೆ.

ಇಸ್ಲಾಮ್ ಬಹುಭಾರ್ಯತ್ವವನ್ನು ಅನುಮತಿಸುವುದು ಮನುಷ್ಯನನ್ನು ಪಾಪದಿಂದ ರಕ್ಷಿಸಲಿಕ್ಕಾಗಿದೆ. ಶರೀಅತ್ ಅದಕ್ಕೆ ಅನುಮತಿ ನೀಡಿರುವುದು ಒಂದು ಚಿಕಿತ್ಸೆ ರೂಪದಲ್ಲಿಯಾಗಿದೆ. ಒಬ್ಬನು ಲೈಂಗಿಕ ಚಿಂತೆಗಳಿಂದ ಪೀಡಿತನಾಗಿದ್ದರೆ, ಅವನು ಕಾಮೋದ್ವೇಗ ಭರಿತನಾಗಿ ದುರ್ನೋಟ ಬೀರುತ್ತಿದ್ದರೆ, ಅವನು ತನ್ನನ್ನು ವ್ಯಭಿಚಾರದಿಂದ ರಕ್ಷಿಸಿಕೊಳ್ಳಲು ದ್ವಿತೀಯ ವಿವಾಹವಾಗುವುದು ಉತ್ತಮವಾಗಿದೆ. ಆದರೆ ಅವನು ತನ್ನ ಪ್ರಥಮ ಪತ್ನಿಯ ಹಕ್ಕುಗಳನ್ನು ಅಪಹರಿಸಬಾರದು. ತೌರಾತ್‌ನಲ್ಲಿ (ಯೆಹೂದ್ಯ ಧರ್ಮಶಾಸ್ತ್ರ) ಸಹ ದ್ವಿತೀಯ ವಿವಾಹವಾಗುವವನು ತಾನು ತನ್ನ ಯೌವ್ವನದ ಬಹುತೇಕ ಭಾಗವನ್ನು ಕಳೆದು ನಿಕಟ ಬಾಂಧವ್ಯ ಸ್ಥಾಪಿಸಿದ ಪ್ರಥಮ ಪತ್ನಿಯನ್ನು ಸಹಾನುಭೂತಿಯಿಂದ ಕಾಣಬೇಕೆಂದು ಹೇಳಿದೆ.

ಒಬ್ಬನು ತನ್ನ ಪ್ರಥಮ ಪತ್ನಿಯ ಬಗ್ಗೆ ಎಂತಹ ಗೌರವ ಭಾವನೆ ಹೊಂದಬೇಕೆಂದರೆ, ತಾನು ದ್ವಿತೀಯ ವಿವಾಹವಾಗುವುದು ತನ್ನ ಪ್ರಥಮ ಪತ್ನಿಗೆ ನೋವುಂಟು ಮಾಡುವುದೆಂದು ಭಾವಿಸುವನಾದರೆ ಅವನಿಗೆ ಪಾಪ ಕೂಪದಲ್ಲಿ ಬೀಳದೆ ತನ್ನನ್ನು ರಕ್ಷಿಸಿಕೊಳ್ಳಬಹುದೆಂದು ತೋರುವುದಾದರೆ ಅವನು ದ್ವಿತೀಯ ವಿವಾಹವಾಗದಿರುವುದೇ ಉತ್ತಮವಾಗಿದೆ....

ನನಗೆ ಸರ್ವಶಕ್ತನಾದ ಅಲ್ಲಾಹನು ಮನವರಿಕೆ ಮಾಡಿಕೊಟ್ಟ ಪ್ರಕಾರ ನಾನು ಈ ವಿಷಯಕ್ಕೆ ಸಂಬಂಧಿಸಿ ಬರೆದಿದ್ದೇನೆ. ಪವಿತ್ರ ಖುರ್‌ಆನ್ ಬಹುಭಾರ್ಯತ್ವಕ್ಕೆ ಅನುಮತಿ ನೀಡಿರುವುದು ನೀವು ಭಯಭಕ್ತಿಯುಳ್ಳವರಾಗಿ ಅಲ್ಲಾಹನ ಸಂಪ್ರೀತಿ ಗಳಿಸುವವರಾಗಲಿ ಕ್ಕೋಸ್ಕರವಾಗಿದೆ. ಸಾತ್ವಿಕರಾದ ಮಕ್ಕಳನ್ನು ಗಳಿಸುವುದು ಮತ್ತು ನಿಕಟ ಬಂಧುಗಳಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಈಡೇರಿಸುವುದು ಇತರ ಉದ್ದೇಶಗಳಾಗಿವೆ. ಇದಕ್ಕೋಸ್ಕರ ಒಂದು ಸಮಯದಲ್ಲಿ ನಾಲ್ಕು ಭಾರ್ಯೆಯರನ್ನು ಹೊಂದಲು ಅನುಮತಿ ನೀಡಲಾಗಿದೆ. ಆದರೆ ನಿಮಗೆ ಅವರೊಂದಿಗೆ ಸಮಾನವಾಗಿ ವರ್ತಿಸಲು ಸಾಧ್ಯವಿಲ್ಲವಾದರೆ ನೀವು ಏಕ ಪತ್ನಿಯನ್ನು ಹೊಂದಬೇಕು. ಅಂತಹ ಸ್ಥಿತಿಯಲ್ಲಿ ನೀವು ಒಂದಕ್ಕಿಂತ ಹೆಚ್ಚು ಪತ್ನಿಯರನ್ನು ಹೊಂದುವುದು ಶಿಕ್ಷಾರ್ಹವಾಗುವುದು.... ಅನ್ಯರ ಭಾವನೆಗಳಿಗೆ ನೋವುಂಟುಮಾಡುವುದು ಪಾಪದಾಯಕವಾಗಿದೆ. ಸ್ತ್ರೀಯರ ಭಾವನೆಗಳು ಬಹಳ ಮೃದುವಾಗಿರುತ್ತದೆ. ಒಬ್ಬ ಯುವತಿ ತನ್ನ ಮಾತಾಪಿತರನ್ನು ಅಗಲಿ ತನ್ನ ಪತಿಯ ಬಳಿಗೆ ಬರುವಾಗ ಆಕೆಗಿರುವ ಪ್ರತೀಕ್ಷೆಗಳೇನೆಂದು ಯೋಚಿಸಿರಿ. ನಾವು ಅವರ ಭಾವನೆಗಳನ್ನು ಅಲ್ಲಾಹನ ಈ ಕೆಳಗಿನ ಆಜ್ಞೆ ಮೂಲಕ ಅರಿತುಕೊಳ್ಳಬಹುದು. **ವ ಆಶಿರೂ ಹುನ್ನ ಬಿಲ್ ಮಅ್‌ರೂಫಿ** – ಅವರೊಂದಿಗೆ ಉತ್ತಮವಾಗಿ ವರ್ತಿಸಿರಿ. (4:20).

ಅಲ್ಲಾಹನ ನಿಯಮಗಳನ್ನು ಅದರ ಉದ್ದೇಶಲಕ್ಷ್ಯಕ್ಕೆ ವಿರುದ್ಧವಾಗಿ ಬಳಸಬಾರದು. ಅದನ್ನು ಸುಖಭೋಗಗಳಿಗೆ ಗುರಾಣಿಯಾಗಿಯೂ ಉಪಯೋಗಿಸಬಾರದು. ಹಾಗೆ ಮಾಡುವುದು ಮಹಾಪಾಪವಾಗುವುದು. ಸರ್ವಶಕ್ತನಾದ ಅಲ್ಲಾಹನು ಇಂದ್ರಿಯಾಸಕ್ತಿಗಳಿಗೆ ಸೋತು ಹೋಗುವ ಬಗ್ಗೆ ಪದೇ ಪದೇ ಎಚ್ಚರಿಕೆ ನೀಡಿದ್ದಾನೆ. ಧರ್ಮಶೀಲತೆ ಮಾತ್ರವೇ ನಿಮ್ಮ ಮುಖ್ಯ ಉದ್ದೇಶವಾಗಿರಬೇಕು. (ಮಲ್‌ಫೂಝಾತ್ ಭಾಗ 7 ಪುಟ 63–65)

### ಇಸ್ಲಾಮ್ ಮತ್ತು ಮಹಿಳೆಯರ ಹಕ್ಕುಗಳು

ಇಸ್ಲಾಮ್ ಮಹಿಳೆಯರ ಹಕ್ಕುಗಳನ್ನು ಸಂರಕ್ಷಿಸಿದ ಹಾಗೆ ಬೇರೆ ಯಾವ ಧರ್ಮವೂ ಅವರ ಹಕ್ಕುಗಳನ್ನು ಸಂರಕ್ಷಿಸಿಲ್ಲ. ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಹೀಗೆ ಹೇಳಿದೆ: **ಲಹುನ್ನ ಮಿಸ್‌ಲುಲ್ಲದೀ ಅಲೈಹಿನ್ನ** – ಅವರ (ಸ್ತ್ರೀಯರ) ಮೇಲೆ ಪುರುಷರಿಗೆ ಕೆಲವು ಹಕ್ಕುಗಳಿರುವಂತೆಯೇ ಅವರಿಗೂ (ಸ್ತ್ರೀಯರಿಗೂ) ನ್ಯಾಯೋಚಿತವಾದ ಕೆಲವು ಹಕ್ಕುಗಳಿವೆ. (2:229).

ಕೆಲವರು ತಮ್ಮ ಪತ್ನಿಯರೊಂದಿಗೆ ಪಾದರಕ್ಷೆಗಳ ಹಾಗೆ ವರ್ತಿಸುತ್ತಾರೆ ಮತ್ತು ಅತ್ಯಂತ ಕೀಳು ಕೆಲಸಗಳನ್ನು ಅವರಿಂದ ಮಾಡಿಸುತ್ತಾರೆ. ಅವರು ಪತ್ನಿಯರನ್ನು ಬೈಯ್ಯುತ್ತಾರೆ, ಅಪಮಾನಿಸುತ್ತಾರೆ ಮತ್ತು ಪರದೆ ಧರಿಸುವ ಬಗ್ಗೆ ಕ್ರೂರವಾಗಿ ವರ್ತಿಸಿ ಅವರನ್ನು ಜೀವ ಸಹಿತ ದಫನು ಮಾಡುವ ಹಾಗೆ ವರ್ತಿಸುತ್ತಾರೆ. ಪತಿ ಪತ್ನಿಯರ ಮಧ್ಯೆ ಸಂಬಂಧ ಇಬ್ಬರು ಸತ್ಯಸಂಧರೂ ಪ್ರಾಮಾಣಿಕರೂ ಆಗಿರುವ ಸ್ನೇಹಿತರ ಹಾಗಿರಬೇಕು. ಮನುಷ್ಯನ ಉತ್ತಮ ನೈತಿಕ ಗುಣದ ಬಗ್ಗೆ ಮತ್ತು ಅಲ್ಲಾಹನೊಂದಿಗೆ ಅವನಿಗಿರುವ ಸಂಬಂಧದ ಬಗ್ಗೆ ಪತ್ನಿ ಮುಖ್ಯ ಸಾಕ್ಷಿಯಾಗಿರುತ್ತಾಳೆ.



Yuga - January 2019 (2).pmd 17 2/19/2019, 11:34 AM

ಪತಿಯು ತನ್ನ ಪತ್ನಿಯೊಂದಿಗೆ ಉತ್ತಮ ಸಂಬಂಧ ಹೊಂದಿಲ್ಲವಾದರೆ ಅವನಿಗೆ ಅಲ್ಲಾಹನಿಂದ ನೆಮ್ಮದಿ ದೊರಕುವುದಾದರೂ ಹೇಗೆ? ಪವಿತ್ರ ಪೈಗಂಬರು[ಸ] ಹೇಳಿದರು: **ಖೈರುಕುಮ್ ಖೈರುಕುಮ್ ಲಿಅಹ್‌ಲಿಹೀ** – **"**ನಿಮ್ಮ ಪೈಕಿ ಉತ್ತಮನಾದವನು ತನ್ನ ಪತ್ನಿಯೊಂದಿಗೆ ಉತ್ತಮವಾಗಿ ವರ್ತಿಸುವವನಾಗಿದ್ದಾನೆ.**"** (ಮಲ್‌ಫೂಝಾತ್ ಭಾಗ 5 ಪುಟ 417–418).

**ಅಹ್ಮದೀ ವನಿತೆಯರು ತಖ್ವ (ದೇವ ಭಯಭಕ್ತಿ) ಮೈಗೂಡಿಸುವಂತೆ ಮಾಡುವುದರ ಮಹತ್ವ**

ನನ್ನ ಜಮಾಅತಿನ ಪ್ರತಿಯೊಬ್ಬ ವ್ಯಕ್ತಿ ತಮ್ಮ ಮಹಿಳೆಯರಲ್ಲಿ ತಖ್ವ ಮೈಗೂಡುವಂತೆ ಮಾಡಬೇಕಾದುದು ಕಡ್ಡಾಯವಾಗಿದೆ. ಆ ಮೂಲಕ ಅವರು ತಖ್ವವುಳ್ಳವರಾಗುವರು. ಹಾಗೆ ಮಾಡದಿದ್ದರೆ ಅವರಿಗೆ ಪಾಪದೋಷ ತಗಲುವುದು. ಒಬ್ಬ ಪತ್ನಿ ತನ್ನ ಪತಿಯ ಕುಂದುಕೊರತೆಗಳನ್ನು ಅವನ ಮುಂದೆಯೇ ಎಣಿಸಲು ಸಾಧ್ಯವಾಗುವ ಪರಿಸ್ಥಿತಿಯಲ್ಲಿರುವಾಗ ಆಕೆ ಸ್ವತಃ ದೇವ ಭಯಭಕ್ತಿ (ತಖ್ವ) ಹೊಂದುವುದಾದರೂ ಹೇಗೆ? ತಂದೆ ತಾಯಂದಿರು ಸಾತ್ವಿಕರಲ್ಲವಾದರೆ ಅವರ ಮಕ್ಕಳು ಪರಿಶುದ್ಧರಾಗಲಾರರು. ಮಕ್ಕಳು ತಖ್ವವನ್ನು ಅವಲಂಬಿಸಬೇಕಾದರೆ ತಂದೆ ತಾಯಂದಿರು ತಖ್ವವನ್ನು ಹೊಂದಬೇಕಾದುದು ಆವಶ್ಯಕವಾಗಿದೆ. ತಂದೆ ತಾಯಂದಿರು ತಖ್ವ ರಹಿತರಾದರೆ ಅವರ ಮಕ್ಕಳು ಕೆಟ್ಟವರಾಗುವರು.

ಆದುದರಿಂದ ಪುರುಷರು ಪಶ್ಚಾತ್ತಾಪದಿಂದ ಅಲ್ಲಾಹನ ಕ್ಷಮೆಯಾಚಿಸಿ ತಮ್ಮ ಮಹಿಳೆಯರಿಗೆ ಮಾದರಿ ಆಗಬೇಕು. ಪತ್ನಿ ಪತಿಯ ಮೇಲೆ ದೃಷ್ಟಿ ಇರಿಸಿರುತ್ತಾಳೆ. ಪತಿಗೆ ತನ್ನ ತಪ್ಪುಗಳನ್ನು ತನ್ನ ಪತ್ನಿಯಿಂದ ಮರೆಮಾಡಲು ಸಾಧ್ಯವಿಲ್ಲ. ಮಹಿಳೆಯರು ತೋರಿಸಿಕೊಳ್ಳದಿದ್ದರೂ ಅವರು ಬುದ್ಧಿಶಾಲಿಗಳಾಗಿರುತ್ತಾರೆ. ಅವರನ್ನು ತಿಳಿಗೇಡಿಗಳೆಂದು ಭಾವಿಸಬೇಡಿರಿ. ನೀವು ಮಾಡುವ ಪ್ರತಿಯೊಂದರಿಂದ ಅವರು ಪ್ರಭಾವಿತರಾಗುತ್ತಾರೆ. ಪತಿ ಸಾತ್ವಿಕನಾದರೆ ಪತ್ನಿ ಅವನನ್ನು ಗೌರವಿಸುವಳು ಮತ್ತು ಅಲ್ಲಾಹನ ಬಗ್ಗೆಯೂ ಗೌರವ ಭಾವ ಹೊಂದುವಳು..... ಪ್ರವಾದಿಗಳ ಪತ್ನಿಯರು ಮತ್ತು ಸಾತ್ವಿಕರ ಪತ್ನಿಯರು ಪರಿಶುದ್ಧೆಯರಾಗಿದ್ದರು. ಏಕೆಂದರೆ ಅವರು ತಮ್ಮ ಪತಿಯ ಉತ್ತಮ ಪ್ರಭಾವಗಳನ್ನು ಗ್ರಾಹ್ಯ ಮಾಡುತ್ತಿದ್ದರು. ದುಷ್ಟರ ಪತ್ನಿಯರು ಅವರ ಹಾಗೆಯೇ ದುಷ್ಟೆಯರಾಗಿರುತ್ತಾರೆ. ಒಬ್ಬ ಕಳ್ಳನ ಪತ್ನಿ ತನ್ನ ಪತಿ ರಾತ್ರಿ ಕದಿಯಲು ಹೋಗಿದ್ದಾನೆ ಎಂದು ತಿಳಿದುಕೊಂಡಿರುವಾಗ ತಹಜ್ಜುದ್ ನಮಾಝ್‌ಗೆ ಎದ್ದೇಳಲು ಯೋಚಿಸಲು ಹೇಗೆ ತಾನೆ ಸಾಧ್ಯ? ಇದೇ ಕಾರಣದಿಂದ ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳಿದ್ದಾನೆ: **ಅರ್‍ರಿಜಾಲು ಖವ್ವಾಮೂನ ಅಲನ್ನಿಸಾಇ** – **"**ಪುರುಷರು ಸ್ತ್ರೀಯರ ರಕ್ಷಾಧಿಕಾರಿಗಳಾಗಿದ್ದಾರೆ.**"** (4:35).

ಪತ್ನಿಯರು ತಮ್ಮ ಪತಿಯ ಪ್ರಭಾವಕ್ಕೊಳಗಾಗಿರುತ್ತಾರೆ. ಪತಿ ಧರ್ಮಶ್ರದ್ಧೆಯಲ್ಲಿಯೂ ಸಾತ್ವಿಕತೆಯಲ್ಲಿಯೂ ಉನ್ನತಿ ಪಡೆಯುವ ಹಾಗೆ ಅವನ ಪತ್ನಿ ಸಹ ಅದರಲ್ಲಿ ಸಹಭಾಗಿಯಾಗುವಳು. ಅದೇ ರೀತಿ ಪತಿ ಕೆಟ್ಟವನಾದರೆ ಪತ್ನಿ ಅದರಲ್ಲಿ ಸಹಭಾಗಿ ಆಗುವಳು. (ಮಲ್‌ಫೂಝಾತ್ ಭಾಗ 5 ಪುಟ 217–218).

ನೀವು ನಿಮ್ಮನ್ನು ಸುಧಾರಣೆ ಮಾಡಲು ಇಚ್ಛಿಸುವಿರಾದರೆ ನೀವು ನಿಮ್ಮ ಮಹಿಳೆಯರನ್ನು ಸುಧಾರಣೆ ಮಾಡುವುದು ಆವಶ್ಯಕವಾಗಿದೆ. ಸ್ತ್ರೀಯರು ವಿಗ್ರಹಾರಾಧನೆಯ ಮೂಲಬೇರು ಆಗಿದ್ದಾರೆ. ಏಕೆಂದರೆ ಅವರು ಅಲಂಕಾರಕ್ಕೂ ಆಭರಣಗಳಿಗೂ ಸಹಜವಾಗಿ ಅನುರಕ್ತರಾಗಿರುತ್ತಾರೆ. ಇದೇ ಕಾರಣದಿಂದ ವಿಗ್ರಹಾರಾಧನೆ ಸ್ತ್ರೀಯರಿಂದ ಪ್ರಾರಂಭಿಸಲ್ಪಟ್ಟಿತು. ಅವರು ಕಡಿಮೆ ಧೈರ್ಯ ಹೊಂದಿರುವವರಾಗಿದ್ದಾರೆ. ಸ್ವಲ್ಪ ಮಾತ್ರ ಕಷ್ಟವಾದರೂ ಅವರು ತಮ್ಮ ಸಹ ಜೀವಿಗಳ ಮುಂದೆ ಗೋಳಿಡುತ್ತಾರೆ. ತಮ್ಮ ಪತ್ನಿಯರ ಪ್ರಭಾವಗಳಿಗೆ ಪೂರ್ಣವಾಗಿ ಅಧೀನರಾದವರು ಕ್ರಮೇಣ ಅವರ ಸ್ವಭಾವಗುಣಗಳನ್ನು ಪಡೆಯುತ್ತಾರೆ. ಆದುದರಿಂದ ಮಹಿಳೆಯರನ್ನು ಸುಧಾರಣೆ ಮಾಡಲು ಸ್ಥಿರವಾಗಿ ಪ್ರಯತ್ನಿಸಬೇಕು. ಸರ್ವಶಕ್ತನಾದ ಅಲ್ಲಾಹನು ಹೇಳಿದ್ದಾನೆ: **ಅರ್‍ರಿಜಾಲು ಖವ್ವಾಮೂನ ಅಲನ್ನಿಸಾಇ** – **"**ಪುರುಷರು ಸ್ತ್ರೀಯರ ರಕ್ಷಾಧಿಕಾರಿಗಳಾಗಿದ್ದಾರೆ.**"** (4:35).

ಇದೇ ಕಾರಣದಿಂದ ಪುರುಷನಿಗೆ ಹೆಚ್ಚಿನ ಸಾಮರ್ಥ್ಯ ನೀಡಲಾಗಿದೆ. ಆಧುನಿಕ ಕಾಲದಲ್ಲಿ, ಪುರುಷರು ಮತ್ತು ಮಹಿಳೆಯರು ಸಮಾನ ಹಕ್ಕುಗಳನ್ನು ಹೊಂದಿದ್ದಾರೆ ಎಂಬ ವಾದವನ್ನು ಮಾಡುವಾಗ ಆಶ್ಚರ್ಯವಾಗುತ್ತದೆ. ಇಂತಹ ವಾದ ಮಾಡುವವರು ಮಹಿಳೆಯರ ಒಂದು ಸೈನ್ಯವನ್ನು ರಚಿಸಿ ಯುದ್ಧಕ್ಕೆ ಕಳುಹಿಸಿ ಪರಿಣಾಮವನ್ನು ನೋಡಲಿ. ಒಬ್ಬ ಗರ್ಭಿಣಿ ಮಹಿಳೆ ರಣಾಂಗಣದಲ್ಲಿ ತನ್ನ ಕರ್ತವ್ಯ ಹೇಗೆ ನಿಭಾಯಿಸುವಳು? ಸಂಕ್ಷಿಪ್ತವಾಗಿ ಹೇಳುವುದಾದರೆ, ಸ್ತ್ರೀಯರಿಗೆ ಪುರುಷರಿಗಿಂತ ಕಡಿಮೆ ಸಾಮರ್ಥ್ಯಗಳಿವೆ. ಆದುದರಿಂದ ಪುರುಷರು ಅವರನ್ನು ತಮ್ಮ ಸಂರಕ್ಷಣೆಯಲ್ಲಿರಿಸಬೇಕು. (ಮಲ್‌ಫೂಝಾತ್ ಭಾಗ 7 ಪುಟ 133–134).

**ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಪತ್ನಿಯರ ಶ್ರೇಷ್ಠ ಉದಾಹರಣೆಗಳು**

ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಪತ್ನಿಯರ ಸ್ಥಾನಕ್ಕಿಂತ ಮೇಲಿನ ಸ್ಥಾನವನ್ನು ಕೇಳುವ ಅಧಿಕಾರ ಯಾರಿಗೂ ಇಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪತ್ನಿಯರು ಶ್ರೇಷ್ಠ ಸ್ಥಾನ ಪಡೆದಿದ್ದರೂ ಅವರು ಎಲ್ಲ ಮನೆಗೆಲಸಗಳನ್ನು ಮಾಡುತ್ತಿದ್ದರು. ಅವರು ತಮ್ಮ ಕೋಣೆಗಳನ್ನು ಗುಡಿಸುತ್ತಿದ್ದರು. ಎಲ್ಲ ಮನೆಗೆಲಸಗಳನ್ನು ಮಾಡುತ್ತಿದ್ದರೂ ಅವರು ದೇವಾರಾಧನೆಗೆ ಬಹಳ ಲಕ್ಷ್ಯ ನೀಡುವವರಾಗಿದ್ದರು. ಒಬ್ಬ ಪತ್ನಿ ಆರಾಧಿಸುವಾಗ ತೂಕಡಿಕೆ ಬಾರದಿರಲು ಒಂದು ಉಪಾಯವನ್ನು ಕಂಡುಹಿಡಿದಿದ್ದರು. ಮಹಿಳೆಯ ಆರಾಧನೆಯ ಒಂದು ಭಾಗ ತನ್ನ ಪತಿಗೆ ಸಂಬಂಧಿಸಿದ ಕರ್ತವ್ಯಗಳನ್ನು ಈಡೇರಿಸುವುದಾಗಿದೆ. ಇನ್ನೊಂದು ಭಾಗ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವುದಾಗಿದೆ. (ಮಲ್‌ಫೂಝಾತ್ ಭಾಗ 6 ಪುಟ 53). ♦

**ಇನ್ಸಾನಿಯತ್ ಝಿಂದಾಬಾದ್ – ಮಾನವೀಯತೆ ಚಿರಕಾಲ ಬಾಳಲಿ**



Yuga - January 2019 (2).pmd 18 2/19/2019, 11:34 AM



# ದೇವನು 21ನೇ ಶತಮಾನದಲ್ಲಿ

21ನೇ ಶತಮಾನದಲ್ಲಿ ದೇವನ ಆವಶ್ಯಕತೆ ಇದೆಯೇ? ನೈತಿಕ ಸಮಾಜವನ್ನು ರೂಪಿಸುವುದರಲ್ಲಿ ಇಂದು ಧರ್ಮ ಯಾವ ಪಾತ್ರವಹಿಸಬಹುದು? ಮಾನವ ವಿಕಾಸದ ಈ ಕಾಲದಲ್ಲಿ ದೇವನ ಮತ್ತು ಧರ್ಮದ ಪರಿಕಲ್ಪನೆ ಅನಗತ್ಯವಲ್ಲವೇ?

## ದೇವನು ಮನುಷ್ಯನ ಆವಿಷ್ಕಾರವೇ?

ದೇವನೆಂಬುವುದು ಒಂದು ಮಿಥ್ಯಾಕಲ್ಪನೆಯಾಗಿದೆ ಎಂಬುದಾಗಿದೆ ನಾಸ್ತಿಕರ ಮೂಲಭೂತ ವಾದ. ಎಲ್ಲ ಧರ್ಮಗಳ ಆಧಾರವಾದ ದೇವನ ಪರಿಕಲ್ಪನೆ ಮನುಷ್ಯನ ಸೃಷ್ಟಿಯಾಗಿದೆ ಎಂದು ಹೇಳಲಾಗುತ್ತದೆ. ಈ ವಾದ ಬುದ್ಧಿಶೂನ್ಯವಾದುದಾಗಿದೆ. ಇದು ವಿಶದವಾದ ಚರ್ಚೆಯ ಸಂದರ್ಭವಲ್ಲ. ಅಸ್ತಿತ್ವಕ್ಕೆ ಬರುವ ಎಲ್ಲದರ ಹಿಂದೆ ಖಂಡಿತವಾಗಿಯೂ ಒಂದು ಕಾರಣವಿರುತ್ತದೆ. ಎಲ್ಲವೂ ತನ್ನಷ್ಟಕ್ಕೆ ತಾನೆ ಅಸ್ತಿತ್ವಕ್ಕೆ ಬಂತು ಎಂದು ಹೇಳುವುದು ಮೂರ್ಖತನವಾಗಿದೆ. ಈ ಪ್ರಪಂಚವೂ ಅನಾದಿಯಲ್ಲದ ಕಾರಣದಿಂದ ಅದರ ಸೃಷ್ಟಿಕರ್ತನಿಂದ ಸೃಷ್ಟಿಸಲ್ಪಟ್ಟಿರಬೇಕು.

## ನೈತಿಕ ಅವನತಿ

ವರ್ತಮಾನ ಕಾಲದಲ್ಲಿ, ಮನುಷ್ಯನು ಭೌತಿಕ ಅಭಿವೃದ್ಧಿಯ ಕ್ಷೇತ್ರದಲ್ಲಿ ಉನ್ನತ ಮಟ್ಟವನ್ನು ಸಾಧಿಸಿದ್ದಾನೆ. ಆದಾಗ್ಯೂ ಅಸಮಾಧಾನ ಮತ್ತು ಭೀತಿ ವರ್ಧಿಸುತ್ತಿದೆ.

ಶಾಂತಿ ಏಕೆ ಇಲ್ಲ? ಏಕೆಂದರೆ ಮನುಷ್ಯನು ಸಂಘಜೀವಿಯೆಂಬ ನೆಲೆಯಲ್ಲಿ ಈಡೇರಿಸಬೇಕಾದ ತನ್ನ ಜವಾಬ್ದಾರಿಗಳನ್ನು ನಿರ್ಲಕ್ಷಿಸುತ್ತಿದ್ದಾನೆ. ಅವನು ತನ್ನ ಗುರಿಸಾಧನೆಗೆ ಇತರರ ಹಕ್ಕುಗಳನ್ನು ದೋಚಲು ಹಿಂಜರಿಯದ ಸ್ವಾರ್ಥಿಯಾಗಿರುವನು. ಮನುಷ್ಯನ ಈ ನೈತಿಕ ಅವನತಿ ಸಮಾಜದಲ್ಲಿ ವ್ಯಾಪಕವಾದ ಅಸಮಾಧಾನಕ್ಕೆ ಕಾರಣವಾಗುತ್ತಿದೆ.

## ದೇವನೊಂದಿಗೆ ಪ್ರೀತಿ ಅವನ ಸೃಷ್ಟಿಗಳೊಡನೆ ಪ್ರೀತಿಯನ್ನು ಹುಟ್ಟಿಸುತ್ತದೆ

ದೇವರಹಿತ ಸಮಾಜದಲ್ಲಿ ಸಹಜೀವಿಗಳೊಂದಿಗೆ ಈಡೇರಿಸಬೇಕಾದ ಕರ್ತವ್ಯಗಳನ್ನು ಸರಿಯಾದ ರೀತಿಯಲ್ಲಿ ನೆರವೇರಿಸುವುದು ಮನುಷ್ಯನಿಗೆ ಸಾಧ್ಯವಿಲ್ಲ. ಸೃಷ್ಟಿಕರ್ತನಿಗೆ ಸಲ್ಲಿಸಬೇಕಾದ ಗೌರವ ಮತ್ತು ಕರ್ತವ್ಯಗಳ ಕಾರಣದಿಂದ





Yuga - January 2019 (2).pmd 19 2/19/2019, 11:34 AM

ಮನುಷ್ಯನು ಇತರರನ್ನು ಗೌರವಿಸುತ್ತಾನೆ. ಆದ್ದರಿಂದ ದೇವನೊಡನೆ ಇರುವ ಪ್ರೀತಿಯೂ ಸೃಷ್ಟಿಗಳೊಡನೆ ಇರುವ ಪ್ರೀತಿಯಾಗಿ ಪರಿವರ್ತನೆಗೊಳ್ಳುತ್ತದೆ ಎಂದು ನಾವು ಹೇಳಬಹುದು. ಮನುಷ್ಯನು ದೇವನಿಲ್ಲದೆ ಬದುಕಬಹುದು ಎಂಬುದು ಬಾಲಿಶವಾದ ತತ್ವವಾಗಿದೆ. ದೇವರಾಹಿತ್ಯದಿಂದ ಉಂಟಾದ ಶೂನ್ಯತೆಯನ್ನು ತಕ್ಷಣ ಮನುಷ್ಯನ ಅಹಂಕಾರ ತುಂಬಿಸುತ್ತದೆ. ಇದರ ಕಾರಣದಿಂದ ಸ್ವಾರ್ಥತೆ ಬಲಿಷ್ಠವಾಗಿ ಮತ್ತು ಅತಿ ಶಕ್ತವಾಗಿ ಬೆಳೆಯುತ್ತದೆ. ಆದ್ದರಿಂದ, ಇಂತಹ ವ್ಯಕ್ತಿಗಳಿಂದ ಕಟ್ಟಲ್ಪಟ್ಟ ಸಮಾಜವು ಯಾವಾಗಲೂ ಸ್ವಾರ್ಥ ಮತ್ತು ಅಹಂಕಾರದಿಂದ ಕೂಡಿದ್ದು ಆಗಿರುತ್ತದೆ. ನಿಸ್ವಾರ್ಥವಾಗಿ ಇತರರಿಗೆ ಪ್ರಯೋಜನ ತಲುಪಿಸುವ ಮಾತು ಕೂಡ ಅಲ್ಲಿ ಇರುವುದಿಲ್ಲ. ಎಲ್ಲ ವಿಧ ಸೃಷ್ಟಿಗಳನ್ನು ಪರಸ್ಪರ ಒಟ್ಟುಸೇರಿಸಲು ದಯಾವಂತನಾದ ದೇವನ ರೂಪದಲ್ಲಿ ಬಾಹ್ಯವಾದ ಏನೂ ಬಾಕಿಯಾಗಿ ಇರುವುದಿಲ್ಲ.

**ಮರಣಾನಂತರ ಜೀವಿತ ಮತ್ತು ಲೆಕ್ಕಾಚಾರ:** ಜೀವಿತವನ್ನು ಮರಣದೊಂದಿಗೆ ಮುಕ್ತಾಯಗೊಳ್ಳುವ ಅಲ್ಪಕಾಲದ ಒಂದು ಪ್ರಜ್ಞಾವಸ್ಥೆಯಾಗಿ ಭೌತಿಕವಾದಿಗಳು ಚಿತ್ರೀಕರಿಸುತ್ತಾರೆ. ಅಂತಹ ಸಮಾಜದಲ್ಲಿ ಮನುಷ್ಯನು ತನ್ನ ಅಲ್ಪಕಾಲದ ಜೀವಿತವನ್ನು ಕಳೆಯುತ್ತಾನೆ ಅಷ್ಟೆ.

ಪವಿತ್ರ ಖುರ್‌ಆನ್ ಇದನ್ನೇ ಭೌತಿಕ ಸಮಾಜದ ಸಾರವೆಂದು ಸ್ಪಷ್ಟವಾಗಿ ಹೇಳುತ್ತದೆ. ನಾಸ್ತಿಕರು ಮತ್ತು ಮರಣಾನಂತರ ಜೀವಿತವನ್ನು ಅಲ್ಲಗಳೆಯುವವರು ಘೋಷಿಸುತ್ತಾರೆ:

"ನಮ್ಮ ಇಹಲೋಕ ಜೀವನದ ಹೊರತು ಬೇರೆ ಜೀವನವಿಲ್ಲ. ನಾವು (ಇಲ್ಲಿಯೇ) ಸಾಯುತ್ತೇವೆ; (ಇಲ್ಲಿಯೇ) ಬದುಕುತ್ತೇವೆ. ನಾವು ಪುನಃ ಜೀವಂತಗೊಳಿಸಲ್ಪಡಲಾರೆವು." **(23:38)**

ಮನುಷ್ಯನು ಸಮಾಜಕ್ಕೆ ತಾನು ಮಾಡಿದ ಕೃತ್ಯಗಳಿಗೆ ತಕ್ಕ ಕಾರಣಗಳನ್ನು ಕೊಡಬೇಕಾಗುವುದು ಎಂದು ಹೇಳುವುದು ಸಮಸ್ಯೆಯನ್ನು ಬಗೆಹರಿಸದು. ಸಮಾಜದ ವಿರುದ್ಧ ಮಾಡಲಾದ ಅಪರಾಧಗಳು ಸಂಶಯಾತೀತ ರೀತಿಯಲ್ಲಿ ಸಾಬೀತಾದರೆ ಮಾತ್ರ ಅವುಗಳನ್ನು ಅಪರಾಧಗಳೆಂದು ಕರೆಯಲಾಗುತ್ತದೆ. ಇದರಲ್ಲಿ ಅನ್ಯಾಯವಾಗುವ ಸಾಧ್ಯತೆಗಳು ಇವೆ.

ಆದ್ದರಿಂದ ಅನಿಯಂತ್ರಿತ ಸುಖಾನ್ವೇಷಣೆಯಲ್ಲಿ ಮುಳುಗಿರುವ ಸಮಾಜ, ದೇವನನ್ನು ಮತ್ತು ಮರಣಾನಂತರ ಜೀವಿತವನ್ನು ಪ್ರಜ್ಞಾಪೂರ್ವಕವಾಗಿ ನಿರಾಕರಿಸಿದರೆ, ಅದಕ್ಕೆ ತೀವ್ರಗತಿಯಲ್ಲಿ ನೈತಿಕ ಅವನತಿ ಉಂಟಾಗುತ್ತದೆ.

**ದೇವನ ಸಂಪ್ರೀತಿಯನ್ನು ಅರಸುವುದು:** ಮನ್ನಣೆ ಪಡೆಯಲು ಮನುಷ್ಯನಲ್ಲಿ ಇರುವ ಸಹಜವಾದ ಇಚ್ಛೆಯನ್ನು ದೃಷ್ಟಿಯಲ್ಲಿರಿಸಿಕೊಂಡು, ಮನುಷ್ಯನ ಪ್ರತಿಯೊಂದು ಒಳಿತಿಗೆ ಪ್ರತಿಫಲ ನೀಡಲಾಗುವುದು ಎಂದು ಧರ್ಮ ಘೋಷಿಸುತ್ತದೆ. ದೇವನ ಮುಂದೆ ಗೌರವಕ್ಕೆ ಪಾತ್ರನಾಗುವುದೇ ಮುಖ್ಯ ಮತ್ತು ಮುಖ್ಯವಾಗಬೇಕೆಂಬ ಅರಿವು ಇಸ್ಲಾಮ್ ಮನುಷ್ಯನಲ್ಲಿ ಉಂಟುಮಾಡುತ್ತದೆ. ತೋರಿಕೆಗೆ ಒಳಿತುಗಳನ್ನು ಮಾಡಿ ಇತರರ ಪ್ರಶಂಸೆಯನ್ನು ಪಡೆಯಲು ಮನುಷ್ಯನಿಗೆ ಇರುವ ಇಚ್ಛೆಯನ್ನು ಈ ಅರಿವು ದೂರಮಾಡುತ್ತದೆ. ಎಲ್ಲ ಒಳಿತುಗಳು ಎಲ್ಲವನ್ನು ಕಾಣುತ್ತಿರುವ ದೇವನ ಅರಿವಿನಲ್ಲಿ ಇರುವುದಾದರೆ, ಅದೇ ಒಬ್ಬ ಸತ್ಯವಿಶ್ವಾಸಿಗೆ ಸಾಕು. ಪವಿತ್ರ ಖುರ್‌ಆನ್ ಹೇಳುತ್ತದೆ:

"ಯಾರಾದರೂ ಒಂದು ಅಣುವಿನಷ್ಟು ಒಳಿತು ಮಾಡಿದ್ದರೂ ಅದನ್ನು ಅವನು ಕಾಣುವನು. ಯಾರಾದರೂ ಒಂದು ಅಣುವಿನಷ್ಟು ಕೆಡುಕು ಮಾಡಿದ್ದರೂ ಅದನ್ನು ಸಹ ಅವನು ಕಾಣುವನು." **(99:8 – 9)**

## ಧರ್ಮ ಮತ್ತು ಮನುಷ್ಯನ ನೈತಿಕತೆ

ಶಾಂತಿಯುತ ಸಮಾಜವನ್ನು ಕಟ್ಟಲು ನಮಗೆ ಧರ್ಮದ ಆವಶ್ಯಕತೆ ಇದೆಯೇ? ಮನುಷ್ಯನ ನೈತಿಕ ಅರಿವು ಈ ಉದ್ದೇಶ ಸಿದ್ಧಿಗೆ ಸಾಕಲ್ಲವೇ? ಮನುಷ್ಯನಿಗೆ ಸರಿ – ತಪ್ಪುಗಳ ಮೂಲಭೂತ ತಿಳುವಳಿಕೆ ನೀಡಲಾಗಿದೆ ಎಂಬ ಸತ್ಯವನ್ನು ಪವಿತ್ರ ಖುರ್‌ಆನ್ ದೃಢೀಕರಿಸುತ್ತದೆ. ಅದು ಹೇಳುತ್ತದೆ:

"ಅವನು (ಅಲ್ಲಾಹನು) ಅದಕ್ಕೆ (ಆತ್ಮಕ್ಕೆ) ಅದರ ದುಷ್ಟತೆ ಮತ್ತು ಸಾತ್ವಿಕತೆಯ ಬಗ್ಗೆ ತಿಳಿಯಪಡಿಸಿದನು." **(91:9)**


Yuga - January 2019 (2).pmd 20 2/19/2019, 11:34 AM

ಆದರೆ ಧರ್ಮದ ಆವಶ್ಯಕತೆವಿಲ್ಲವೆಂದು ಇದು ಯಾವ ರೀತಿಯಲ್ಲೂ ಸಾಬೀತುಪಡಿಸುವುದಿಲ್ಲ. ನೈತಿಕ ಸಮಾಜವನ್ನು ರೂಪಿಸುವುದರಲ್ಲಿ ಧರ್ಮದ ಆವಶ್ಯಕತೆಯನ್ನು ಹೆಚ್ಚಿನ ವಿಶ್ಲೇಷಣೆ ಪುಷ್ಟೀಕರಿಸುವುದು.

**ಇಚ್ಛಾ ಸ್ವಾತಂತ್ರ್ಯ:** ಹುಟ್ಟುಗುಣಕ್ಕೆ ವಿರುದ್ಧವಾಗಿ ವರ್ತಿಸಲು ಮನುಷ್ಯನಿಗೆ ಇರುವ ಸ್ವಾತಂತ್ರ್ಯದ ಕಾರಣದಿಂದ ಅವನು ತನ್ನ ನೈತಿಕಗುಣಗಳನ್ನು ಬಹುತೇಕ ಮರೆತಿದ್ದಾನೆ ಎಂಬುವುದರಲ್ಲಿ ಸಂಶಯವಿಲ್ಲ. ಒಳಿತು – ಕೆಡುಕುಗಳ ಸರಿಯಾದ ವಿವರಣೆ ಇಲ್ಲದ ಸಮಾಜಗಳಲ್ಲಿ ಇದು ಕಾಣಬಹುದಾಗಿದೆ. ಒಬ್ಬ ವ್ಯಕ್ತಿಯ ಸರಿ ಇನ್ನೊಬ್ಬನ ತಪ್ಪಾಗಿರಬಹುದು. ಆದ್ದರಿಂದ ತನ್ನ ನೈತಿಕ ಪ್ರಜ್ಞೆಯನ್ನು ಸಂಪೂರ್ಣವಾಗಿ ಸಂರಕ್ಷಿಸಲಾಗಿದೆ ಎಂದು ಯಾರೂ ವಾದಿಸಲಾರನು. ಈಗ, ಮನುಷ್ಯನಿಗೆ ತಾನು ಮರೆತ ಸಹಜಗುಣವನ್ನು ನೆನಪಿಸಿಕೊಡಬೇಕಲ್ಲವೇ? ಈ ಕೆಲಸವನ್ನು ಧರ್ಮ ಮಾಡುತ್ತದೆ. ಪವಿತ್ರ ಖುರ್‌ಆನ್ ಹೇಳುತ್ತದೆ:

**"**ಈ (ಪರಿಪೂರ್ಣ) ಜ್ಞಾಪಕ (ಗ್ರಂಥ)ವನ್ನು ನಿನಗೆ ನಾವು ಅವತೀರ್ಣಗೊಳಿಸಿದ್ದೇವೆ – ಅವರಿಗೋಸ್ಕರ ಇಳಿಸಲ್ಪಟ್ಟ ಸಂದೇಶವನ್ನು ನೀನು ಜನರಿಗೆ ವಿವರಿಸಿಕೊಡಲಿಕ್ಕೂ ಅವರು ಚಿಂತನೆ ಮಾಡಲಿಕ್ಕೂ ಬೇಕಾಗಿ.**" (16:45)**

**ಧರ್ಮ ಮನುಷ್ಯನ ನೈತಿಕತೆಯನ್ನು ಪೋಷಿಸುತ್ತದೆ:** ಪ್ರತಿಯೊಬ್ಬ ಮನುಷ್ಯ ಮೂಲಭೂತ ನೈತಿಕ ಗುಣಗಳೊಂದಿಗೆ ಹುಟ್ಟಿರುತ್ತಾನೆ. ಮನುಷ್ಯನು ತನ್ನ ಪರಿಸರದೊಂದಿಗೆ ಹೊಂದಿಕೊಳ್ಳುವಾಗ, ಅದು ಅವನ ಈ ಗುಣಗಳನ್ನು ಉತ್ತೇಜಿಸಲು ಅಥವಾ ನಿರ್ನಾಮ ಮಾಡಲು ಹಿರಿದಾದ ಪಾತ್ರವಹಿಸುತ್ತದೆ. ಈ ಮೂಲಭೂತ ಗುಣಗಳನ್ನು ಪರಿಪೂರ್ಣತೆಗೆ ತಲುಪಿಸಲು ಸಹಾಯಕವಾಗುವ ರೀತಿಯಲ್ಲಿ ಅತ್ಯುತ್ತಮವಾಗಿ ಧಾರ್ಮಿಕ ಕರ್ಮಗಳನ್ನು ರೂಪಿಸಲಾಗಿದೆ. ಉದಾಹರಣೆಗೆ, ಹಸಿದವನೊಂದಿಗೆ ಸಹಾನುಭೂತಿ ತೋರಿಸುವುದು ಒಂದು ನೈತಿಕ ಗುಣವಾಗಿದೆ. ಒಬ್ಬನು ಉಪವಾಸ ಅನುಷ್ಠಿಸಿ ಹಸಿವಿನ ತೀವ್ರತೆಯನ್ನು ಅರಿಯುವಾಗ ಸಹಾನುಭೂತಿಯ ಈ ಗುಣ ಅಧಿಕವಾಗುತ್ತದೆ. ಹೀಗೆ ಧರ್ಮ ಮನುಷ್ಯನ ನೈತಿಕ ಮಟ್ಟವನ್ನು ಮೇಲೆಕ್ಕೆತ್ತುತ್ತದೆ ಮತ್ತು ಅವನ ನೈತಿಕ ಗುಣವನ್ನು ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆಗೆ ಮುಟ್ಟಿಸುತ್ತದೆ.

## ಎಲ್ಲ ಧಾರ್ಮಿಕ ಜನರು ನೈತಿಕ ಗುಣಗಳನ್ನು ಏಕೆ ಹೊಂದಿಲ್ಲ?

ದೇವನಲ್ಲಿ ಮತ್ತು ಮರಣಾನಂತರ ಜೀವಿತದಲ್ಲಿ ದೃಢವಿಶ್ವಾಸ ಹೊಂದಿರುವ ಸಮಾಜದಲ್ಲಿಯೂ ಕೆಡುಕುಗಳು ಹರಡುತ್ತಿರುವುದಾಗಿ ನಾವು ನೋಡುತ್ತಿದ್ದೇವೆ. ಹಾಗಾದರೆ, ಉತ್ತಮ ನೈತಿಕಗುಣಗಳನ್ನು ಹೊಂದಿರುವ ಸಮಾಜವನ್ನು ಕಟ್ಟುವುದಕ್ಕೆ ದೇವವಿಶ್ವಾಸ ಸಹಾಯಕವಾಗುವುದೆಂದು ನಾವು ಹೇಗೆ ಹೇಳಬಹುದು?

ಇದಕ್ಕಿರುವ ಕಾರಣ, ಅಂತಹ ಸಮಾಜದಲ್ಲಿ ನಾಮ ಮಾತ್ರಕ್ಕೆ ಇಂತಹ ವಿಶ್ವಾಸಗಳು ಬಾಕಿಯಾಗಿ ಉಳಿದಿವೆ, ನೈತಿಕ ಹೊಣೆಯನ್ನು ವಹಿಸಬಹುದಾದ ಸ್ವಭಾವಗುಣವಾಗಿ ಆ ವಿಶ್ವಾಸ ಪರಿವರ್ತನೆಗೊಂಡಿಲ್ಲ. ಆದ್ದರಿಂದ ದೇವನೊಂದಿಗೆ ಅಲ್ಪಸ್ವಲ್ಪ ತಾತ್ವಿಕ ವಿಶ್ವಾಸವನ್ನು ಮಾತ್ರ ಇರಿಸುವುದರಿಂದ ವಿಶ್ವಾಸಿಗಳ ಸಾಮಾಜಿಕ ವರ್ತನೆಗಳ ಮೇಲೆ ಯಾವ ಪ್ರಭಾವ ಕೂಡ ಉಂಟಾಗಲಿಕ್ಕಿಲ್ಲ. ಜೀವಂತ ದೇವನೊಂದಿಗೆ ನೈಜ ಮತ್ತು ಪರಿಶುದ್ಧ ವಿಶ್ವಾಸದಿಂದ ಮಾತ್ರ ಮನುಷ್ಯನ ವರ್ತನೆಗಳು ಬದಲಾಗುವುವು.

## ಇಸ್ಲಾಮ್ ಜೀವಂತ ದೇವನನ್ನು ಮುಂದಿರಿಸುತ್ತದೆ

ಹಿಂದಿನಂತೆ ಇಂದು ಸಹ ಎಲ್ಲವನ್ನು ಆಲಿಸುವ ಮತ್ತು ತನ್ನ ದೃಷ್ಟಾಂತಗಳನ್ನು ತನ್ನ ಸಜ್ಜನ ದಾಸರಿಗಾಗಿ ಪ್ರಕಟಿಸುವ ಜೀವಂತ ದೇವನನ್ನು ಇಸ್ಲಾಮ್ ಮುಂದಿರಿಸುತ್ತದೆ. ಪವಿತ್ರ ಖುರ್‌ಆನ್ ಹೇಳುತ್ತದೆ:

**"**ಅಲ್ಲಾಹ್ – ಅವನ ಹೊರತು ಬೇರೆ ಆರಾಧ್ಯನಿಲ್ಲ. (ಅವನು) ಸದಾ ಜೀವಂತನೂ ಸ್ವತಃ ನೆಲೆನಿಂತಿರುವವನೂ (ಎಲ್ಲವನ್ನು) ನೆಲೆನಿಲ್ಲಿಸುವವನೂ ಆಗಿದ್ದಾನೆ.**" (2:256)**



Yuga - January 2019 (2).pmd 21 2/19/2019, 11:34 AM

ಜನರು ತಮ್ಮ ಸೃಷ್ಟಿಕರ್ತನನ್ನು ಗುರುತಿಸುವಂತಾಗಲು ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗ್ಪ್ಪ್ಲಾಮ್ ಅಹ್ಮದ್‌ರಿಗೆ[ಅ] ಇದ್ದ ತೀವ್ರ ಅಭಿಲಾಷೆ ಅವರ ಈ ಕೆಳಗಿನ ಲಿಖಿತದಿಂದ ಸ್ಪಷ್ಟವಾಗುವುದು:

"ತಾನು ಇಚ್ಛಿಸುವ ಎಲ್ಲವನ್ನು ಮಾಡಲು ಸಮರ್ಥನಾದ ದೇವನು ಅವನಿಗೆ ಇದ್ದಾನೆ ಎಂದು ತಿಳಿದಿಲ್ಲದ ಮನುಷ್ಯನು ಎಷ್ಟು ಭಾಗ್ಯಹೀನ! ನಮ್ಮ ದೇವನೇ ನಮ್ಮ ಸ್ವರ್ಗ. ನಮ್ಮ ಅತ್ಯುನ್ನತ ಸಂತೋಷಗಳು ನಮ್ಮ ದೇವನಲ್ಲಿವೆ. ಏಕೆಂದರೆ ನಾವು ಅವನನ್ನು ನೋಡಿರುವೆವು ಮತ್ತು ಪ್ರತಿಯೊಂದು ಸೌಂದರ್ಯವನ್ನು ನಾವು ಅವನಲ್ಲಿ ಕಂಡಿರುವೆವು. ಜೀವವನ್ನು ಬಲಿಯರ್ಪಿಸುವುದರಿಂದ (ದೇವನೆಂಬ) ಈ ಸಂಪತ್ತು ಸಿಗಬಹುದಾದರೆ ಹಾಗೆ ಪಡೆಯಲು ಅದು (ಆ ಸಂಪತ್ತು) ಅರ್ಹವಾಗಿದೆ. ಒಬ್ಬನು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವುದರಿಂದ ಪಡೆಯಬಹುದಾಗಿದ್ದರೆ ಹಾಗೆ ಖರೀದಿಸಲು ಯೋಗ್ಯವಾದ ಮಾಣಿಕ್ಯ ಇದಾಗಿದೆ. ಎಲೈ ಭಾಗ್ಯಹೀನರೇ, ನೀವು ಈ ಕಾರಂಜಿಯ ಕಡೆಗೆ ಓಡಿ ಬನ್ನಿರಿ. ಇದು ನಿಮ್ಮ ಬಾಯಾರಿಕೆಯನ್ನು ನೀಗಿಸುವುದು. ಇದು ನಿಮ್ಮನ್ನು ರಕ್ಷಿಸುವಂತಹ ಜೀವಜಲವನ್ನೀಯುವ ಕಾರಂಜಿಯಾಗಿದೆ."

(ಕಿಶ್ತೀ ನೂಹ್)

## ದೇವನಿಲ್ಲದೆ ಶಾಂತಿಸ್ಥಾಪನೆ ಸಾಧ್ಯವಲ್ಲ

ದೇವನ ಕಡೆಗೆ ಮರಳದೆ ಯಾವುದೇ ವ್ಯಕ್ತಿ ಯಥಾರ್ಥ ಮನಃಶಾಂತಿಯನ್ನು ಪಡೆಯಲು ಸಾಧ್ಯವಿಲ್ಲ, ಯಥಾರ್ಥ ಸಮಾಧಾನದ ವಿನಾ ಸಮಾಜ ಶಾಂತಿ – ಸಂಧಾನದ ತೊಟ್ಟಿಲಾಗದು. ಗೋಪ್ಯವಾದ ಸ್ವಾರ್ಥ ಉದ್ದೇಶಗಳೊಂದಿಗೆ ಶಾಂತಿಸ್ಥಾಪನೆಗಾಗಿ ಮಾಡಲಾಗುವ ಎಲ್ಲ ಮನುಷ್ಯ ಪ್ರಯತ್ನಗಳು ವಿಫಲಗೊಳ್ಳುವುವು ಮತ್ತು ವ್ಯರ್ಥವಾಗುವುವು. ದೇವನಿಲ್ಲದೆ ಶಾಂತಿ ಇಲ್ಲ. ಈ ಸತ್ಯವನ್ನು ಅರಿಯುವುದೇ ಪರಮೋನ್ನತವಾದ ಪರಿಜ್ಞಾನ.

Contact Details: Ahmadiyya Muslim Jama'at India
Head Office
Noor-ul-Islam Dept.
Qadian, Distt. Gurdaspur, Punjab, Pin:143516
Branch Office:
No1 3rd Cross, Wilson Garden, Bangalore-560027 | Darussalam, Near Railway Level Crossing Pandeshwar, Mangalore -575001
www.alislam.org /www.ahmadiyyamuslimjamaat.in
Feedback www.ahmadiyyamuslimjamaat.in/feedback
/IslamInIND /IslaminIND /+IslaminIndia /islaminindia /c/islaminindia
official blog: www.lightofislam.in
National Toll Free Number: 1800 3010 2131 (SAT-THU 9:00AM to 10:30PM)
MUSLIM TELEVISION AHMADIYYA INTERNATIONAL www.mta.tv
Satellite: Asia sat 7s, Degree: 105.5 East, Frequency 3760 Symbol Rate: 26000 FEC: Auto / C.Band 4 Feet Dish Antenna
EutelsatE70B,Degree:70°East,Frequency:11211,SymbolRate:5111,Polarization-HorizontalQPSK-1/2,KU Band 2 feet Dish Antenna



Yuga - January 2019 (2).pmd 22 2/19/2019, 11:34 AM

# ಹಝ್ರತ್ ಈಸಾ ಮಸೀಹ್(ಅ) ಮೃತರಾದ ಬಗ್ಗೆ ಚರ್ಚೆ

♦ **ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಎಂ.ಎ.**

**ಹಝ್ರತ್ ಈಸಾ ಮಸೀಹ್(ಅ) ಜೀವಂತವಾಗಿ ದೇಹ ಸಮೇತ ಆಕಾಶಕ್ಕೇರಿ ಹೋಗಿಲ್ಲ ಎಂಬುದರ ಬಗ್ಗೆ ನಾನು ಇದರ ಮೊದಲು ಸಾಬೀತುಗೊಳಿಸಲು ಪವಿತ್ರ ಖುರ್‌ಆನಿನ ವಚನಗಳನ್ನು ಮತ್ತು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹದೀಸುಗಳನ್ನು ವಿವರಿಸಿರುವೆನು. ಯಾರಾದರೂ ಸಮಾಧಾನಚಿತ್ತರಾಗಿ ಈ ಸಾಕ್ಷ್ಯಾಧಾರಗಳ ಬಗ್ಗೆ ಚಿಂತಿಸುವರಾದರೆ, ಹಝ್ರತ್ ಈಸಾ ಮಸೀಹ್(ಅ) ಜೀವಂತವಾಗಿ ದೇಹಸಮೇತ ಆಕಾಶಕ್ಕೇರಿ ಹೋಗಿರುವರೆಂದು ಖಂಡಿತವಾಗಿಯೂ ಸಾಬೀತಾಗುವುದಿಲ್ಲ ಎಂದು ಹಗಲು ಬೆಳಕಿನ ಹಾಗೆ ಸ್ಪಷ್ಟವಾಗುವುದು. ಹಝ್ರತ್ ಈಸಾ ಮಸೀಹ್(ಅ) ಮೃತರಾಗಿರುವರೆಂಬುದನ್ನು ಇನ್ನು ಮುಂದೆ ವಿವರಿಸುವೆನು.**

## ಹಝ್ರತ್ ಮುಹಮ್ಮದ್ ಪೈಗಂಬರರಿಗಿಂತ(ಸ) ಮೊದಲು ಆಗಮಿಸಿದ ಎಲ್ಲ ಪ್ರವಾದಿಗಳು ಮೃತರಾಗಿರುವರು

ಪವಿತ್ರ ಖುರ್‌ನಿನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ: **ವಮಾ ಮುಹಮ್ಮದುನ್ ಇಲ್ಲಾ ರಸೂಲುನ್ ಖದ್‌ಖಲತ್ ಮಿನ್ ಖಬ್‌ಲಿಹಿ ರ‍್ರುಸುಲ್ ಅಫ ಇನ್‌ಮ್ಮಾತ ಅವ್ ಖುತಿಲನ್‌ಕಲಬ್‌ತುಮ್ ಅಲಾ ಅಅ್‌ಖಾಬಿಕುಮ್.**

**“**ಮುಹಮ್ಮದ್ ಕೇವಲ ಓರ್ವ ಸಂದೇಶವಾಹಕರಾಗಿದ್ದಾರೆ. ಅವರಿಗಿಂತ ಹಿಂದಿನ ಎಲ್ಲ ಸಂದೇಶವಾಹಕರೂ ಗತಿಸಿದ್ದಾರೆ. ಒಂದು ವೇಳೆ ಅವರು (ಮುಹಮ್ಮದ್) ಮೃತಪಟ್ಟರೆ ಅಥವಾ ಹತ್ಯೆಗೀಡಾದರೆ ನೀವು ಹಿಂತಿರುಗಿ ಹೋಗುವಿರಾ?**”** (3:145).

ಪವಿತ್ರ ಖುರ್‌ಆನಿನ ಈ ವಚನ ಹಝ್ರತ್ ಮುಹಮ್ಮದ್ ಪೈಗಂಬರರಿಗಿಂತ(ಸ) ಮೊದಲು ಆಗಮಿಸಿದ ಎಲ್ಲ ಪ್ರವಾದಿಗಳು ಮೃತರಾಗಿರುವರು ಎಂದು ಹೇಳುತ್ತದೆ. ಹಝ್ರತ್ ಈಸಾ ಮಸೀಹ್(ಅ) ಸಹ ಹಝ್ರತ್ ಮುಹಮ್ಮದ್ ಪೈಗಂಬರರಿಗಿಂತ(ಸ) ಆರುನೂರು ವರ್ಷ ಮೊದಲು ಆಗಮಿಸಿದ ಸಂದೇಶವಾಹಕರಾಗಿದ್ದರು. ಆದುದರಿಂದ ಅವರು ಸಹ ಮೃತರಾಗಿರುವರೆಂದು ನಿಸ್ಸಂದೇಹವಾಗಿ ಸಾಬೀತಾಗುತ್ತದೆ. ಈ ವಚನದ ಬಗ್ಗೆ ಹೀಗೆ ಆಕ್ಷೇಪಿಸಲಾಗುತ್ತಿದೆ: ಈ ವಚನದಲ್ಲಿ ಬಳಸಲಾದ ಖಲಾ ಎಂಬ ಪದದ ಅರ್ಥ ಗತಿಸಿ ಹೋದರೆಂದಾಗಿದೆ. ಆದುದರಿಂದ ಮೃತರಾಗಿರುವರು ಎಂದು ದೃಢವಾಗಿ ಸಾಬೀತಾಗುವುದಿಲ್ಲ. ಒಬ್ಬ ಜೀವಂತವಾಗಿ ಆಕಾಶಕ್ಕೆತ್ತಲ್ಪಟ್ಟರೆ ಅವನ ಬಗ್ಗೆ ಸಹ ಅವನು ಇಲ್ಲಿ ಇಲ್ಲ ಇಲ್ಲಿಂದ ದಾಟಿಹೋಗಿರುವನು ಎಂದು ಹೇಳಬಹುದು.

ಈ ಆಕ್ಷೇಪದ ಬಗ್ಗೆ ಹೀಗೆ ಉತ್ತರ ನೀಡುತ್ತೇವೆ: ಒಂದನೆಯದಾಗಿ, ಖಲಾ ಶಬ್ದದ ಅರ್ಥ ಮಾತ (ಮೃತನಾದನು) ಎಂದು ಸಹ ಇದೆ ಎಂದು ನಿಘಂಟುಗಳು ವಿವರಿಸುತ್ತವೆ. ಅರಬಿ ಭಾಷೆಯ ತಾಜುಲ್ ಉರೂಸ್ ಎಂಬ ನಿಘಂಟು ಅತ್ಯಂತ ಅಧಿಕೃತವೆಂದು ಗಣಿಸಲಾಗುತ್ತವೆ. ಅದರಲ್ಲಿ ಹೀಗೆ ಬರೆದಿದೆ: **ಖಲಾ ಫುಲಾನುನ್: ಇದ಼ಾ ಮಾತ.** ಒಬ್ಬನು ಮೃತನಾದರೆ ಅವನ ಬಗ್ಗೆ ಖಲಾ – ಮೃತನಾದವನು ಎಂದು ಹೇಳುತ್ತಾರೆ.

ಎರಡನೆಯದಾಗಿ, ಅಲ್ಲಾಹು ಸ್ವತಃ ಖಲಾ ಶಬ್ದದ ಅರ್ಥ ಏನೆಂದು ಸ್ಪಷ್ಟಪಡಿಸಿದ್ದಾನೆ. ವಚನದಲ್ಲಿ ಹೀಗೆ ಹೇಳಲಾಗಿದೆ: **ಅಫ ಇನ್‌ಮ್ಮಾತ ಅವ್ ಖುತಿಲ.** ಅಂದರೆ, ಹಝ್ರತ್ ಮುಹಮ್ಮದ್ ಪೈಗಂಬರ್(ಸ) ಸಹಜವಾಗಿ ಮೃತರಾದರೆ ಅಥವಾ ಕೊಲ್ಲಲ್ಪಟ್ಟರೆ.

ಆದುದರಿಂದ ಖಲತ್ ಎಂಬ ಶಬ್ದದ ಅರ್ಥ ಮೇಲೆ ವಿವರಿಸಿದ ಸಹಜ ಮರಣ ಮತ್ತು ಕೊಲ್ಲಲ್ಪಡುವಿಕೆ ಇವುಗಳಲ್ಲಿ ಒಂದು ನಿಶ್ಚಯವಾಗಿಯೂ ಆಗಬೇಕಾಗಿದೆ. **ಅಫ ಇನ್‌ಮ್ಮಾತ ಅವ್ ಖುತಿಲ** ಎಂಬ ವಾಕ್ಯ ಸ್ಪಷ್ಟವಾಗಿ ಹೀಗೆ ಸೂಚಿಸುತ್ತದೆ: ಹಿಂದೆ ಆಗಮಿಸಿದ ಸಂದೇಶವಾಹಕರು ಗತಿಸಿ ಹೋದುದು ಈ ಎರಡು ವಿಧಗಳಲ್ಲಿ ಯಾವುದಾದರೂ ಒಂದು ರೀತಿಯಲ್ಲಾಗಿದೆ. ಅವರು ಸಹಜವಾಗಿ ಮೃತರಾದರು ಅಥವಾ ಕೊಲ್ಲಲ್ಪಟ್ಟರು. ಹಿಂದೆ ಆಗಮಿಸಿದ ಸಂದೇಶವಾಹಕರಲ್ಲಿ ಯಾರಾದರೂ ಆಕಾಶಕ್ಕೆ ಎತ್ತಲ್ಪಟ್ಟಿದ್ದರೆ ಅಥವಾ ಮೇಲೆ ವಿವರಿಸಿದ ಎರಡು ರೀತಿಗಳ ಹೊರತು ಬೇರೆ ಯಾವುದಾದರೂ ರೀತಿಯಲ್ಲಿ ಗತಿಸಿ ಹೋಗಿದ್ದರೆ ಅದರ ಬಗ್ಗೆ ಸಹ ಇಲ್ಲಿ ಪ್ರಸ್ತಾಪ ಇರಬೇಕಾಗಿತ್ತು. ಅಥವಾ ಹಝ್ರತ್ ಈಸಾ ಮಸೀಹರಿಗೆ(ಅ) ಸಂಬಂಧಿಸಿದ ವಿಶಿಷ್ಟ ಘಟನೆ ಪ್ರತ್ಯೇಕವಾಗಿ ವಿವರಿಸಬೇಕಾಗಿತ್ತು. ಆದರೆ ಆ ರೀತಿಯ ಯಾವ ವಿವರಣೆಯನ್ನೂ ನೀಡಲಾಗಿಲ್ಲ. ಆದುದರಿಂದ ಮೇಲೆ ಉಲ್ಲೇಖಿಸಿದ ವಚನದಲ್ಲಿ ಬಳಸಲಾದ ಖಲಾ ಪದದ ಅರ್ಥ ಸಹ ಮರಣ ಅಥವಾ ಕೊಲ್ಲಲ್ಪಡುವ ಮೂಲಕ ಇಹಲೋಕವನ್ನು ತ್ಯಜಿಸಿ ಹೋಗುವುದನ್ನು ಸೂಚಿಸುತ್ತದೆ. ಆದರೆ ಹಝ್ರತ್ ಈಸಾ ಮಸೀಹರ(ಅ) ಬಗ್ಗೆ **ವಮಾ ಖತಲೂಹು** ಅವರು ಅವರನ್ನು ಕೊಲ್ಲಲಿಲ್ಲ ಎಂದು ಸ್ಪಷ್ಟವಾಗಿ ಅಲ್ಲಾಹನು ಹೇಳಿರುವುದರಿಂದ ಅವರು ಖಂಡಿತವಾಗಿಯೂ ಸಹಜವಾಗಿ ಮೃತರಾಗಿ ಇಹಲೋಕ ತ್ಯಜಿಸಿದರೆಂದು ಸಾಬೀತಾಗುತ್ತದೆ.

ಪವಿತ್ರ ಖುರ್‌ಆನಿನ ಅಧ್ಯಾಯ 3 ವಚನ 145ರ ವ್ಯಾಖ್ಯಾನ ಮಾಡುತ್ತಾ ವ್ಯಾಖ್ಯಾನಗಾರರು ಹೀಗೆ ಹೇಳಿದ್ದಾರೆ: **ವ ಸಯಖ್‌ಲೂ ಕಮಾ ಖಲವ್ ಬಿಲ್‌ಮೌತಿ ಅವಿಲ್‌ಖತ್‌ಲಿ “**ಹಿಂದೆ ಆಗಮಿಸಿದ ಸಂದೇಶವಾಹಕರು ಸಹಜ ಮರಣ ಅಥವಾ ಹತ್ಯೆಗೊಳಪಡುವ ಮೂಲಕ ಇಹಲೋಕ ತ್ಯಜಿಸಿದ ಹಾಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಇಹಲೋಕವನ್ನು ತ್ಯಜಿಸಿ ಹೋಗುವರು.**”**

### ಸಹಾಬಿಗಳ ಇಜ್‌ಮಾಅ್:

ಮೇಲೆ ಉಲ್ಲೇಖಿಸಲಾದ ವಚನದ ಅರ್ಥ ಒಂದು ಪ್ರಸಿದ್ಧ ಚಾರಿತ್ರಿಕ ಘಟನೆಯ ಮೂಲಕ ಇನ್ನಷ್ಟು ಸ್ಪಷ್ಟವಾಗುತ್ತದೆ. ಹದೀಸುಗಳಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ಮುಹಮ್ಮದ್ ಪೈಗಂಬರ್(ಸ) ನಿಧನ ಹೊಂದಿದಾಗ ಹಝ್ರತ್ ಉಮರ್(ರ) ಹಝ್ರತ್ ಪೈಗಂಬರರು(ಸ) ನಿಧನ ಹೊಂದಿಲ್ಲವೆಂದೇ ಎಣಿಸಿದ್ದರು ಮತ್ತು ಅವರು ಹೇಳುತ್ತಿದ್ದರು: **“**ಹಝ್ರತ್ ಪೈಗಂಬರರು(ಸ) ಮರಳಿ ಬರುವರು. ಅವರು ಅವಿಶ್ವಾಸಿಗಳನ್ನೂ ಕಪಟವಿಶ್ವಾಸಿಗಳನ್ನೂ



Yuga - January 2019 (2).pmd 23 2/19/2019, 11:34 AM

ಧ್ವಂಸಗೊಳಿಸುವರು." ಅವರು ತಮ್ಮ ಯೋಚನೆಯಲ್ಲಿ ಎಷ್ಟು ದೃಢಚಿತ್ತರಾಗಿದ್ದರೆಂದರೆ ಅವರು ಖಡ್ಗ ಹಿರಿದು, "ಯಾರಾದರೂ ಹಝ್ರತ್ ಪೈಗಂಬರರು[ಸ] ನಿಧನ ಹೊಂದಿದರು ಎಂದು ಹೇಳಿದರೆ ನಾನು ಅವನ ತಲೆಗಡಿಯುವೆನು" ಎಂದು ಹೇಳುತ್ತಾ ಇದ್ದರು. ಆಗ ಹಝ್ರತ್ ಅಬೂಬಕರ್[ರ] ಪೈಗಂಬರರ ಶಿಷ್ಯರೆದುರಿಗೆ ನಿಂತು ಪವಿತ್ರ ಖುರ್‌ಆನಿನ ಈ ವಚನ ಪಠಿಸಿದರು: **ವಮಾ ಮುಹಮ್ಮದುನ್ ಇಲ್ಲಾ ರಸೂಲುನ್ ಖದ್‌ಖಲತ್ ಮಿನ್ ಖಬ್ಲಿಹಿ ರ್‍ರುಸುಲ್** – "ಮುಹಮ್ಮದ್ ಕೇವಲ ಓರ್ವ ಸಂದೇಶವಾಹಕರಾಗಿದ್ದಾರೆ. ಅವರಿಗಿಂತ ಹಿಂದಿನ ಎಲ್ಲ ಸಂದೇಶವಾಹಕರೂ ಗತಿಸಿದ್ದಾರೆ." (3: 145)

ಈ ವಚನವನ್ನು ಆಲಿಸಿದಾಗ ಹಝ್ರತ್ ಉಮರ್‌ರಿಗೆ[ರ] ಎಷ್ಟು ದುಃಖ ಉಂಟಾಯಿತೆಂದರೆ ಅವರು ದುಃಖಾತಿರೇಕದಿಂದ ನೆಲಕ್ಕೆ ಬಿದ್ದುಬಿಟ್ಟರು. ಏಕೆಂದರೆ ಅವರಿಗೆ ಆಗ ತಿಳುವಳಿಕೆಗೆ ಬಂತು– ಹಿಂದಿನ ಸಂದೇಶವಾಹಕರ ಹಾಗೆ ತನ್ನ ಪ್ರಿಯ ಯಜಮಾನ ಒಬ್ಬ ಸಂದೇಶವಾಹಕರು ಮಾತ್ರವಾಗಿದ್ದರು. ಹಿಂದಿನ ಸಂದೇಶವಾಹಕರ ಹಾಗೆ ಅವರು ಸಹ ಮೃತ್ಯುವಿನ ಬಾಗಿಲನ್ನು ದಾಟಿ ಹೋಗಲಿಕ್ಕಿತ್ತು. (ಬುಖಾರಿ ಕಿತಾಬುಲ್ ಮನಾಖಿಬ್).

ಇಲ್ಲಿ ಒಂದು ವಿಷಯ ಗಮನಾರ್ಹವಾಗಿದೆ. ಆ ಕಾಲಘಟ್ಟದಲ್ಲಿ ಹಿಂದೆ ಆಗಮಿಸಿದ ಯಾರಾದರೂ ಸಂದೇಶವಾಹಕ ಜೀವಿಸಿದ್ದರೆ ಹಝ್ರತ್ ಅಬೂಬಕರ್[ರ] ಹೇಳಿದ, ಹಿಂದ ಆಗಮಿಸಿದ ಎಲ್ಲ ಸಂದೇಶವಾಹಕರು ಮೃತರಾಗಿರುವರು; ಆದುದರಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೃತರಾಗುವುದು ಸಹಜ ಎಂದು ಹೇಳಿದ ಮಾತನ್ನು ಹಝ್ರತ್ ಪೈಗಂಬರರ[ಸ] ಶಿಷ್ಯರು ಖಂಡಿತವಾಗಿಯೂ ಆಕ್ಷೇಪಿಸುತ್ತಿದ್ದರು. ವಿಶಿಷ್ಟವಾಗಿ ಹಝ್ರತ್ ಉಮರ್[ರ] ಮತ್ತು ಅವರೊಂದಿಗೆ ಸಹಮತ ಹೊಂದಿದವರು– ಹಝ್ರತ್ ಮುಹಮ್ಮದ್ ಪೈಗಂಬರ್[ಸ] ಮೃತರಾಗಿಲ್ಲ ಎಂದೇ ಭಾವಿಸುತ್ತಿದ್ದವರು ಕೂಡಲೇ ಬೊಬ್ಬೆ ಹೊಡೆದು, ನೀವು ಏನು ಹೇಳುತ್ತಿರುವಿರಿ? ಎಂದು ಕೇಳುತ್ತಿದ್ದರು. ಆದರೆ ಹಾಗೆ ಸಂಭವಿಸಲಿಲ್ಲ. ಹಝ್ರತ್ ಪೈಗಂಬರರ[ಸ] ಎಲ್ಲ ಶಿಷ್ಯರು ಹಝ್ರತ್ ಅಬೂಬಕರ್[ರ] ಹೇಳಿದ ಮಾತಿಗೆ ಸಹಮತ ಸೂಚಿಸಿದರು ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರಿಗಿಂತ[ಸ] ಮೊದಲು ಆಗಮಿಸಿದ ಎಲ್ಲ ಸಂದೇಶವಾಹಕರು ಮೃತರಾಗಿರುವರು ಎಂಬ ಸಾಕ್ಷ್ಯಾಧಾರಕ್ಕೆ ಅಂಗೀಕಾರದ ಮುದ್ರೆ ಒತ್ತಿದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಿಧನ ಹೊಂದಿದ ನಂತರ ಹಝ್ರತ್ ಪೈಗಂಬರರ[ಸ] ಶಿಷ್ಯರ ಪ್ರಥಮ ಇಜ್‌ಮಾಅ್ (ಒಮ್ಮತಾಭಿಪ್ರಾಯ) ಮಾತ್ರವಲ್ಲ, ಇಸ್ಲಾಮ್ ಧರ್ಮದ ಏಕಮಾತ್ರ ಇಜ್‌ಮಾಅ್ "ಹಿಂದೆ ಆಗಮಿಸಿದ ಎಲ್ಲ ಸಂದೇಶವಾಹಕರು ಮೃತರಾಗಿರುವರು" ಎಂದಾಗಿತ್ತು. ಇದು ಹಝ್ರತ್ ಈಸಾ ಮಸೀಹರು[ಅ] ನಿಧನ ಹೊಂದಿರುವುದರ ಬಗ್ಗೆ ಎಷ್ಟು ಸ್ಪಷ್ಟ ಪುರಾವೆಯಾಗಿದೆ ಎಂದು ಯೋಚಿಸಿರಿ. ಆದರೆ ದುರದೃಷ್ಟಕರವಾದ ವಿಷಯವೇನೆಂದರೆ, ಅಹ್ಮದಿಯಾ ಜಮಾಅತಿನ ಸ್ಥಾಪಕರ ವಿರೋಧಿಗಳು ಈ ಸ್ಪಷ್ಟ ಸಾಕ್ಷ್ಯಾಧಾರದ ಕಡೆಗೆ ಲಕ್ಷ್ಯ ನೀಡುವುದಿಲ್ಲ. ಅವರು ಹೇಳುತ್ತಾರೆ: **ಬಲ್ ನತ್ತಬಿಉ ಮಾ ಅಲ್‌ಫಯ್‌ನಾ ಅಲೈಹಿ ಆಬಾಅನಾ** – "ನಮ್ಮ ತಂದೆ ತಾತಂದಿರು ಯಾವುದರಲ್ಲಿ ಇದ್ದುದಾಗಿ ನಾವು ಕಂಡೆವೋ ಅದನ್ನು ನಾವು ಅನುಸರಿಸುತ್ತೇವೆ. ಆದರೆ ಅವರು ಗಮನಿಸಬೇಕಾದುದು ಹೀಗೆ ಆಗಿದೆ: **ಅವ್ ಲವ್ ಕಾನ ಆಬಾಉಹುಮ್ ಲಾ ಯಅ್‌ಖಿಲೂನ ಶೈಅನ್ ವಲಾ ಯಹ್‌ತದೂನ್** – ಅವರ ತಂದೆ ತಾತಂದಿರು ಏನನ್ನೂ ಬುದ್ಧಿಪೂರ್ವಕವಾಗಿ ಚಿಂತಿಸದೆ ಇದ್ದರೂ ಮಾರ್ಗದರ್ಶನ ಪಡೆಯದವರಾಗಿದ್ದರೂ (ಅವರನ್ನೇ ಅನುಸರಿಸುತ್ತೀರಾ?).

## ಹಝ್ರತ್ ಈಸಾ ಮಸೀಹ್[ಅ] ಮೃತರಾದ ನಂತರ ಮಾತ್ರ ಉನ್ನತಿಗೇರಿಸಲ್ಪಟ್ಟರು

ಪವಿತ್ರ ಖುರ್‌ಆನಿನ ಈ ವಚನ ನೋಡಿರಿ: "ಎಲೈ ಈಸಾ, ನಾನು ನಿನ್ನನ್ನು (ಪ್ರಕೃತಿ ಸಹಜವಾದ ರೀತಿಯಲ್ಲಿ) ಮೃತಪಡಿಸುವೆನು ಮತ್ತು ನನ್ನಡೆಗೆ ಎತ್ತುವೆನು; ಅವಿಶ್ವಾಸಿಗಳ ಆರೋಪಗಳಿಂದ ನಿನ್ನನ್ನು ಪರಿಶುದ್ಧಗೊಳಿಸುವೆನು ಮತ್ತು ನಿನ್ನನ್ನು ಅನುಸರಿಸಿದವರಿಗೆ ಪುನರುತ್ಥಾನ ದಿನದ ವರೆಗೆ (ನಿನ್ನನ್ನು) ನಿರಾಕರಿಸಿದವರಿಗಿಂತ ಉನ್ನತ ಸ್ಥಾನವನ್ನು ನೀಡುವೆನು. (3: 56).

ಈ ವಚನದಲ್ಲಿ ಹಝ್ರತ್ ಈಸಾ ಮಸೀಹರೊಂದಿಗೆ[ಅ] ಅಲ್ಲಾಹನು ನಾಲ್ಕು ವಾಗ್ದಾನಗಳನ್ನು ಮಾಡಿರುವನು. ಅವು ವಿಶಿಷ್ಟವಾದ ಕ್ರಮಬದ್ಧತೆಯನ್ನು ಹೊಂದಿವೆ. 1. ಮರಣ, 2. ತನ್ನ ಕಡೆಗೇರಿಸುವಿಕೆ, 3. ಪರಿಶುದ್ಧಗೊಳಿಸುವಿಕೆ, 4. ಜಯಶಾಲಿಯನ್ನಾಗಿ ಮಾಡುವುದು.

ಈ ನಾಲ್ಕು ವಾಗ್ದಾನಗಳಲ್ಲಿ ಮೊದಲನೆಯ ವಾಗ್ದಾನ ಇಷ್ಟರವರೆಗೆ ಈಡೇರಿಲ್ಲ; ಅನಂತರದ ಮೂರು ವಾಗ್ದಾನಗಳು ಮಾತ್ರ ಈಡೇರಿವೆ ಎಂದು ಹೇಳುವುದು ಹಟಮಾರಿತನವಾಗಿದೆ. ಪವಿತ್ರ ಖುರ್‌ಆನ್ ಅಲ್ಲಾಹನ ವಚನ ಸಂಹಿತೆಯಾಗಿದೆ. ಅದರಲ್ಲಿ ಪದಗಳು ಮುತ್ತಿನ ಹಾಗೆ ತಂತಮ್ಮ ಸ್ಥಳಗಳಲ್ಲಿ ಜೋಡಿಸಲ್ಪಟ್ಟಿವೆ. ಪವಿತ್ರ ಖುರ್‌ಆನಿನ ಪದಗಳನ್ನು ಅತ್ತಿತ್ತ ಮಾಡುವ ಅಧಿಕಾರ ಯಾರಿಗೂ ಇಲ್ಲ. ಹೀಗೆ ಆಗಲು ತೊಡಗಿದರೆ ಶಾಂತಿ ಭಂಗವಾಗುವುದು. ಇದೇ ಕಾರಣದಿಂದ ಅಲ್ಲಾಹನು ಯಹೂದಿಯರನ್ನು ತೀವ್ರವಾಗಿ ಶಪಿಸಿರುವನು. **ಯುಹರ್‍ರಿಫೂನಲ್ ಕಲಿಮ ಅನ್ ಮವಾಝಿಹೀ** – "ಅವರು (ದೈವಿಕ) ವಚನಗಳನ್ನು ಅವುಗಳ ಸ್ಥಾನಗಳಿಂದ ಪಲ್ಲಟಗೊಳಿಸುತ್ತಾರೆ. (4: 47). ಎಂದು ಅಲ್ಲಾಹನು ಹೇಳಿರುವನು. **ಲಅನಹುಮುಲ್ಲಾಹು ಬಿ ಕುಫ್‌ರಿಹಿಮ್** – ಅವರ ಅವಿಶ್ವಾಸ ಹೇತುವಾಗಿ ಅಲ್ಲಾಹನು ಅವರನ್ನು ಶಪಿಸಿರುವನು. (4: 47).

ಆದರೆ ವಿಷಾದಕರವಾದ ವಿಷಯವೇನೆಂದರೆ, ಹಿಂದೆ ಯಹೂದಿಯರು ಮಾಡುತ್ತಿದ್ದುದನ್ನೇ ಇಂದು ಅಹ್ಮದಿಯಾ ಜಮಾಅತಿನ ಸ್ಥಾಪಕರ ವಿರೋಧಿಗಳು ಮಾಡುತ್ತಿದ್ದಾರೆ. ಅವರು ಹೇಳುವುದೇನೆಂದರೆ, **ರಾಫಿಉಕ** (ನಿನ್ನನ್ನು ನನ್ನೆಡೆಗೆ ಎತ್ತುವೆನು) ಎಂಬ ಪದಗಳನ್ನು **ಮುತವಫ್ಫೀಕ** (ನಿನ್ನನ್ನು ಮೃತ ಪಡಿಸುವೆನು) ಎಂಬ ಪದಕ್ಕೆ ಮೊದಲು ಇರಿಸಬೇಕಾಗಿದೆ. ಅವರಿಗೆ ಹೇಗೆ ಮಾಡಿಯಾದರೂ ಹಝ್ರತ್ ಈಸಾ ಮಸೀಹರು[ಅ] ಜೀವಿಸಿರುವರೆಂದು ಸಾಬೀತುಪಡಿಸಬೇಕಾಗಿದೆ. ಇದರಿಂದ ಕೆಲವು ವ್ಯಾಖ್ಯಾನಗಾರರು ಮತ್ತು ಈಗಿನ ಕಾಲದ ಕೆಲವು ಮತಪಂಡಿತರ ಪ್ರಯತ್ನಗಳ ಮೂಲಕ ನಮಗೆ ಸ್ಪಷ್ಟವಾಗಿ ತಿಳಿಯುವುದೇನೆಂದರೆ, **ಮುತವಫ್ಫೀಕ** ಎಂಬ ಪದದ ಅರ್ಥ ಅವರ ದೃಷ್ಟಿಯಲ್ಲೂ ನಿನ್ನನ್ನು ನಾನು ಮೃತಪಡಿಸುವೆನು ಎಂದೇ ಆಗಿದೆ. ಹೀಗಲ್ಲವಾದರೆ ಅವರು ಪದಗಳನ್ನು ಹಿಂದೆ ಮುಂದೆ ಮಾಡಬೇಕೆಂದು ಹೇಳಿದುದರ



Yuga - January 2019 (2).pmd 24 2/19/2019, 11:34 AM

ಉದ್ದೇಶವಾದರೂ ಏನು? **ಮುತವಫ್ಫೀಕ** ಎಂದರೆ ನಿನ್ನನ್ನು ಮೃತಪಡಿಸುವೆನು ಎಂಬ ಅರ್ಥ ಸರಿ ಎಂದು ಅವರ ಹೃದಯ ಸಾಕ್ಷಿ ಹೇಳುತ್ತಿರುವುದರಿಂದ ಪದಗಳನ್ನು ಹಿಂದೆ ಮುಂದೆ ಮಾಡುವ ನೆವನ ಹೇಳಿ ಅರ್ಥ ವ್ಯತ್ಯಾಸ ಮಾಡಲು ಬಯಸುತ್ತಾರೆ.

ಮೇಲೆ ಉಲ್ಲೇಖಿಸಿದ ವಚನ ಸ್ಪಷ್ಟವಾಗಿ ಹೀಗೆ ಹೇಳುತ್ತದೆ: ಹಝ್ರತ್ ಈಸಾ ಮಸೀಹರನ್ನು ಮೃತಪಡಿಸುವೆನೆಂದು ಅಲ್ಲಾಹನು ವಾಗ್ದಾನ ಮಾಡಿರುವನು. ಅನಂತರ ಅವರನ್ನು ತನ್ನ ಕಡೆಗೆ ಎತ್ತುವೆನೆಂದೂ ಶತ್ರುಗಳ ಆಕ್ಷೇಪಗಳಿಂದ ಪರಿಶುದ್ಧಿಗೊಳಿಸುವೆನೆಂದೂ ಅವರನ್ನು ಅನುಸರಿಸುವವರಿಗೆ ಅವರನ್ನು ವಿರೋಧಿಸುವವರ ಮೇಲೆ ಪುನರುತ್ಥಾನದ ದಿನದ ತನಕ ಜಯ ನೀಡುವೆನೆಂದೂ ವಾಗ್ದಾನ ಮಾಡಿರುವನು.

ನಮ್ಮ ವಿರೋಧಿಗಳು ಹೇಳುವುದೇನೆಂದರೆ, ಅಲ್ಲಾಹನ ಎರಡನೆಯ ವಾಗ್ದಾನ– ಹಝ್ರತ್ ಈಸಾ ಮಸೀಹರನ್ನು[ಅ] ತನ್ನೆಡೆಗೆ ಎತ್ತುವ ವಾಗ್ದಾನ ಈಡೇರಿದೆ. ಅಲ್ಲಾಹನು ಅವರನ್ನು ತನ್ನ ಕಡೆಗೆ ಎತ್ತಿಕೊಂಡಿರುವನು. ಮೂರನೆಯ ವಾಗ್ದಾನದ ಪ್ರಕಾರ ಪವಿತ್ರ ಖುರ್‌ಆನಿನ ಮೂಲಕ ಅಲ್ಲಾಹನು ಹಝ್ರತ್ ಈಸಾ ಮಸೀಹರನ್ನು[ಅ] ಯಹೂದಿಯರ ಆಕ್ಷೇಪಗಳಿಂದ ಮುಕ್ತರೂ ಪರಿಶುದ್ಧರೂ ಆಗಿರುವರೆಂದು ಘೋಷಿಸಿರುವನು. ಕೊನೆಗೆ ನಾಲ್ಕನೆಯ ವಾಗ್ದಾನ ಪ್ರಕಾರ ಹಝ್ರತ್ ಈಸಾ ಮಸೀಹರ ಅನುಯಾಯಿಗಳಿಗೆ ಅವರನ್ನು ನಿರಾಕರಿಸುವವರ ಮೇಲೆ ಜಯವನ್ನು ನೀಡಿರುವನು. ಆದರೆ ಅಲ್ಲಾಹನ ಪ್ರಥಮ ವಾಗ್ದಾನ ಎಂದರೆ ಮೃತಪಡಿಸುವ ವಾಗ್ದಾನ ಈಡೇರದುದು ಆಶ್ಚರ್ಯಕರವಾಗಿದೆ. ಮೊದಲನೆಯ ವಾಗ್ದಾನ ಈಡೇರಲಿಲ್ಲವೆಂದು ಅಂಗೀಕರಿಸುವುದಾದರೆ ಈ ವಾಗ್ದಾನ ಈಡೇರುವುದು ಕೊನೆಯ ವಾಗ್ದಾನ ಈಡೇರಿದ ನಂತರದ ಕಾಲದಲ್ಲಾಗುವುದು. ಏಕೆಂದರೆ ಕೊನೆಯ ಮೂರು ವಾಗ್ದಾನಗಳು ಈಡೇರಿವೆ. ಆದರೆ ಸಮಸ್ಯೆ ಏನೆಂದರೆ ಅನುಯಾಯಿಗಳಿಗೆ ಜಯ ನೀಡುವ ವಾಗ್ದಾನವು ಪುನರುತ್ಥಾನದ ಕಾಲದ ತನಕ ವಿಸ್ತಾರಗೊಳಿಸಲಾಗಿದೆ. **ಇಲಾ ಯೌಮಿಲ್ ಖಿಯಾಮತ್** (ಪುನರುತ್ಥಾನದ ದಿನದ ತನಕ) ಎಂಬ ಶಬ್ದಗಳು ಇದನ್ನು ಸ್ಪಷ್ಟಗೊಳಿಸುತ್ತವೆ. ಆದುದರಿಂದ ಪುನರುತ್ಥಾನದ ತನಕ ಹಝ್ರತ್ ಈಸಾ ಮಸೀಹರಿಗೆ ಮೃತ್ಯು ಬರಲಾರದು. ಲೋಕದಲ್ಲೆಲ್ಲ ಮೃತರಾದವರು ಗೋರಿಗಳಿಂದ ಎಬ್ಬಿಸಲ್ಪಡುವರು. ಆಗ ಹಝ್ರತ್ ಈಸಾ ಮಸೀಹರನ್ನು ಮೃತಪಡಿಸಲಾಗುವುದು. ಇದರಲ್ಲಿ ಇನ್ನೊಂದು ಸಮಸ್ಯೆ ತಲೆದೋರುತ್ತದೆ. ಪುನರುತ್ಥಾನದ ದಿನ ಜನರನ್ನು ಜೀವಂತಗೊಳಿಸುವ ದಿನವಾಗಿರುತ್ತದೆ. ಮೃತಪಡಿಸುವ ದಿನ ಅದಲ್ಲ. ಇದರ ಫಲಸ್ವರೂಪವಾಗಿ ಹಝ್ರತ್ ಈಸಾ ಮಸೀಹ್[ಅ] ಮೃತ್ಯುವಿನ ಮುಷ್ಟಿಯಿಂದ ಸಂಪೂರ್ಣ ಮುಕ್ತರಾಗುವರು.

ಈ ವಿಷಯಕ್ಕೆ ಸಂಬಂಧಿಸಿ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರು ಹೀಗೆ ಬರೆದಿರುತ್ತಾರೆ: "ಇನ್ನೀ ಮುತವಫ್ಫೀಕ ಎಂಬ ಪದಗಳನ್ನು ಪವಿತ್ರ ಖುರ್‌ಆನಿನ ವಚನದ ಆರಂಭದಿಂದ ತೆಗೆದು ಬಿಡುವುದಾದರೆ ಅದನ್ನು ಬೇರೆ ಸ್ಥಾನದಲ್ಲಿ ಖಿಯಾಮತ್‌ಗೆ (ಪುನರುತ್ಥಾನ ದಿನಕ್ಕೆ) ಮೊದಲು ಇರಿಸಲು ಸಾಧ್ಯವಿಲ್ಲ. ಇದರಿಂದ ಅನಿವಾರ್ಯ ಪರಿಣಾಮ ಏನಾಗುವುದೆಂದರೆ, ಹಝ್ರತ್ ಈಸಾ ಮಸೀಹ್[ಅ] ಖಿಯಾಮತ್ ದಿನದ ನಂತರ ಮೃತರಾಗುವರು. ಮೊದಲು ಮೃತರಾಗುವುದರಿಂದ ಈ ವಿಶಿಷ್ಟ ಕ್ರಮಬದ್ಧತೆ ತಡೆಯುತ್ತದೆ. ಪವಿತ್ರ ಖುರ್‌ಆನಿನ ಅದ್ಭುತ ದೃಷ್ಟಾಂತವೇನೆಂದರೆ ನಮ್ಮ ವಿರೋಧಿಗಳು ಯಹೂದಿಯರ ಹಾಗೆ ಪವಿತ್ರ ಖುರ್‌ಆನ್‌ನಲ್ಲಿ ಹಸ್ತಕ್ಷೇಪ ಮಾಡಲು ಸಿದ್ಧರಾದರೂ ಅವರಿಗೆ ಹಾಗೆ ಮಾಡಲು ಸಾಧ್ಯವಾಗಲಿಲ್ಲ. **ರಾಫಿಉಕ** ಎಂಬ ಪದವನ್ನು ಅದರ ಸ್ಥಾನದಿಂದ ಎತ್ತಿ ಬೇರೆ ಸ್ಥಾನದಲ್ಲಿರಿಸಲು ಸಾಧ್ಯವಾಗಲಿಲ್ಲ. ಪ್ರತಿಯೊಂದು ಶಬ್ದ ಅದಕ್ಕೆ ನಿಗದಿತ ಸ್ಥಳದಲ್ಲಿ ಹೇಗೆ ಸ್ಥಾಪಿತವಾಗಿದೆ ಎಂದರೆ ಅದರಲ್ಲಿ ಹಸ್ತಕ್ಷೇಪ ಮಾಡಲು ಸಾಧ್ಯವೇ ಇಲ್ಲದಾಗಿದೆ." (ಝುಮೀಮ ಬರಾಹೀನೆ ಅಹ್ಮದಿಯಾ ಭಾಗ –5).

ಜಾಣ್ಮೆಯುಳ್ಳವನೂ ಸರ್ವಜ್ಞನೂ ಆಗಿರುವ ಅಲ್ಲಾಹನು ಪವಿತ್ರ ಖುರ್‌ಆನಿನ ಶಬ್ದಗಳನ್ನು ಯಾವ ಕ್ರಮದಲ್ಲಿ ಇರಿಸಿರುವನೋ ಅದನ್ನು ಅಂಗೀಕರಿಸಲು ನಾವು ಬದ್ಧರಾಗಿದ್ದೇವೆ. ನಾವು ನಮ್ಮ ಕಡೆಯಿಂದ ಒಂದು ಹೊಸ ಖುರ್‌ಆನನ್ನು ರಚಿಸಬಾರದು.

ಆದುದರಿಂದ ಅಲ್ಲಾಹನು ಅನಂತರ ಮಾಡಿದ ಮೂರು ವಾಗ್ದಾನಗಳು ಈಡೇರಿವೆ ಎಂದು ಅಂಗೀಕರಿಸಲ್ಪಡುವಾಗ ಹಝ್ರತ್ ಈಸಾ ಮಸೀಹರನ್ನು[ಅ] ಮೃತಪಡಿಸುವ ವಾಗ್ದಾನ ಸಹ ಈಡೇರಿದೆ ಎಂದು ಖಂಡಿತವಾಗಿಯೂ ನಂಬಬೇಕಾಗಿದೆ. ಈ ವಚನ ರಫಅ ಪದದ ಅರ್ಥವನ್ನೂ ಸ್ಪಷ್ಟಗೊಳಿಸುತ್ತದೆ. ಮೃತಪಡಿಸಿದ ನಂತರ ತನ್ನಡೆಗೆ ಎತ್ತುವುದಾಗಿ ಅಲ್ಲಾಹನು ವಾಗ್ದಾನ ನೀಡಿರುವನು. ಈ ಎತ್ತುವಿಕೆ ಅಲ್ಲಾಹನು, **ಯಾ ಅಯ್ಯುತುಹನ್ನಫ್‌ಸುಲ್ ಮುತ್‌ಮಇನ್ನತುರ್‌ಜಿಈ ಇಲಾ ರಬ್ಬಿಕ** – "ಎಲೈ ಶಾಂತಿ ಪಡೆದ ಆತ್ಮವೇ, ನೀನು ನಿನ್ನ ಪ್ರಭುವಿನ ಕಡೆಗೆ ಮರಳು" (ಪವಿತ್ರ ಖುರ್‌ಆನ್ 89: 28, 29). ಎಂದು ಹೇಳಿದ ಹಾಗೆ ಆಗಿದೆ. ಮೃತಪಟ್ಟ ನಂತರ ಸಾತ್ವಿಕರ ಆತ್ಮಗಳು ಅಲ್ಲಾಹನ ಕಡೆಗೆ ಒಯ್ಯಲ್ಪಡುವ ಹಾಗೆ ದುರಾತ್ಮಗಳು ಅಲ್ಲಾಹನ ಕಡೆಗೆ ಎತ್ತಲ್ಪಡಲಾರವು. ಇದೇ ಅರ್ಥದಲ್ಲಿ ಹಝ್ರತ್ ಈಸಾ ಮಸೀಹರಿಗೆ ರಫಅ್ ಸಂಭವಿಸಿದೆ.

## ಮುತವಫ್ಫೀಕ ಎಂಬ ಪದದ ಅರ್ಥ

ಪವಿತ್ರ ಖುರ್‌ಆನ್ ಅಧ್ಯಾಯ 3 ವಚನ 56ರಲ್ಲಿ ಅಲ್ಲಾಹನು **ಇನ್ನೀ ಮುತವಫ್ಫೀಕ** ನಾನು ನಿನ್ನನ್ನು ಮೃತಪಡಿಸುವೆನು ಎಂದು ಹೇಳಿರುವಲ್ಲಿ ಈ ವಚನದಲ್ಲಿರುವ ಮುತವಫ್ಫೀಕ ಎಂಬ ಪದಕ್ಕೆ ಆತ್ಮವನ್ನು ಸ್ವಾಧೀನಪಡಿಸಿಕೊಳ್ಳುವ ಎಂದರೆ ಮೃತಪಡಿಸುವ ಅರ್ಥ ಇಲ್ಲವೆಂದೂ ಅದರ ಅರ್ಥ ಸಂಪೂರ್ಣವಾಗಿ ಎತ್ತಿಕೊಳ್ಳುವುದು ಎಂದೂ ನಮ್ಮ ವಿರೋಧಿಗಳು ಹೇಳುತ್ತಾರೆ. ನಿಘಂಟು ಮೂಲಕ ಈ ಶಬ್ದದ ಅರ್ಥವನ್ನು ವಿವರಿಸುವ ಮೊದಲು ಅಹ್ಮದಿಯಾ ಜಮಾಅತಿನ ಸ್ಥಾಪಕರು ಈ ಆಕ್ಷೇಪಕ್ಕೆ ನೀಡಿದ ಉತ್ತರವನ್ನು ನಿಮ್ಮ ಮುಂದಿರಿಸುತ್ತೇನೆ. ಅವರು ಹೀಗೆ ಬರೆದಿರುವರು:

"ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ 23 ಕಡೆಗಳಲ್ಲಿ ತವಫ್ಫಾ ಎಂಬ ಪದವನ್ನು ಆತ್ಮವನ್ನು ಹಿಡಿಯುವ ಸಂದರ್ಭಗಳಲ್ಲಿ ಪ್ರಯೋಗಿಸಿದ್ದಾನೆ. ಈ ಎಲ್ಲ ಕಡೆಗಳಲ್ಲೂ ಆರಂಭದಿಂದ ಅಂತ್ಯದ ತನಕ ಪವಿತ್ರ ಖುರ್‌ಆನಿನಲ್ಲಿ ತವಫ್ಫಾ ಎಂಬ ಪದವನ್ನು ಆತ್ಮವನ್ನು ಹಿಡಿಯುವ ಮತ್ತು ಮೃತಪಡಿಸುವ ಅರ್ಥದಲ್ಲಿ ಹೊರತು ಬೇರೆ ಅರ್ಥ ನೀಡುವಂತೆ ಬಳಸಿಲ್ಲ. ಇನ್ನೊಂದು ಸಾಕ್ಷ್ಯಾಧಾರವೇನೆಂದರೆ, ಸಹೀಹ್ ಬುಖಾರಿಯಲ್ಲಿ ಹಝ್ರತ್ ಇಬ್ನು ಅಬ್ಬಾಸ್[ರ]



Yuga - January 2019 (2).pmd 25 2/19/2019, 11:34 AM

**ಮುತವಫ್ಫೀಕ** ಪದದ ಅರ್ಥ **ಮುಮೀತುಕ** (ನಿನ್ನನ್ನು ಮೃತಪಡಿಸುವೆನು) ಎಂದು ಹೇಳಿದ್ದಾರೆ. ತಫ್ಸೀರ್ ಫೌಝುಲ್ ಕಬೀರ್‌ನಲ್ಲಿ ಇದೇ ಅರ್ಥ ನೀಡಲಾಗಿದೆ. ಬುಖಾರಿಯ ತಫ್‌ಸೀರ್ ಆಗಿರುವ ಐನೀ ಎಂಬ ಗ್ರಂಥದಲ್ಲಿ ಈ ಮಾತಿನ ಅಧಿಕೃತೆಯ ಬಗ್ಗೆ ಪ್ರಸ್ತಾಪವಿದೆ.... ಹದೀಸುಗಳಲ್ಲಿ ತವಫ್ಫಾ ಎಂಬ ಕ್ರಿಯಾ ಪದವು ವಿವಿಧ ರೀತಿಗಳಲ್ಲಿ ಬಳಸಿದಾಗಲೂ ಅದರ ಅರ್ಥ ಮೃತಪಡಿಸು ಎಂದೇ ಪ್ರಯೋಗಿಸಲ್ಪಟ್ಟಿದೆ. ಮುಹದ್ದಿಸ್ (ಹದೀಸ್ ಪಂಡಿತರಿಗೆ) ತಿಳಿದಿರುವುದು ಮತ್ತು ನಿಘಂಟು ಕರ್ತೃಗಳಿಗೆ ಒಮ್ಮತಾಭಿಪ್ರಾಯವಿರುವುದು ಏನೆಂದರೆ ಎಲ್ಲಿ ಅಲ್ಲಾಹನು ಕರ್ತೃ ಆಗಿರುವನೋ ಮತ್ತು ಮನುಷ್ಯನು ಅದರ ಕರ್ಮವಾಗಿರುವನೋ ಅಲ್ಲೆಲ್ಲ ಮೃತಪಡಿಸುವ ಅರ್ಥದ ಹೊರತು ಬೇರೆ ಅರ್ಥದಲ್ಲಿ ಈ ಪದ ಬಳಸಲ್ಪಡುವುದಿಲ್ಲ. ಅರಬಿ ಗ್ರಂಥಗಳು ಇದರ ಬಗ್ಗೆ ಸಾಕ್ಷ್ಯ ನೀಡುತ್ತವೆ. ಇದಕ್ಕಿಂತ ಅನ್ಯಾಯಕರವಾದುದು ಬೇರೇನಿದೆ? ಪವಿತ್ರ ಖುರ್‌ಆನ್ ಉಚ್ಚಸ್ವರದಲ್ಲಿ ಹೇಳುತ್ತಾ ಇದ್ದರೂ ಅದನ್ನು ಯಾರೂ ಆಲಿಸುವುದಿಲ್ಲ. ಹದೀಸುಗಳು ಸಾಕ್ಷ್ಯ ಹೇಳುತ್ತಾ ಇದ್ದರೂ ಯಾರೂ ಅದರ ಬಗ್ಗೆ ಲಕ್ಷ್ಯನೀಡುವುದಿಲ್ಲ. ಅರಬಿ ಭಾಷೆಯ ನಿಘಂಟುಗಳು ಸಾಕ್ಷ್ಯ ಹೇಳುತ್ತವೆ. ಆದರೆ ಯಾರೂ ಅದರ ಕಡೆಗೆ ದೃಷ್ಟಿ ಎತ್ತಿ ನೋಡುವುದಿಲ್ಲ. ಅರಬಿ ಗ್ರಂಥಗಳು ಈ ಶಬ್ದದ ಪ್ರಯೋಗಗಳ ಬಗ್ಗೆ ವಿವರಿಸುತ್ತವೆ. ಆದರೆ ಯಾರೂ ಕಿವಿ ನಿಮಿರಿಸಿ ಆಲಿಸುವುದಿಲ್ಲ." (ತುಹ್‌ಫಯೇ ಗೋಲ್ಡವಿಯ – ಪುಟ 2).

ಈ ಶಬ್ದದ ಬಗ್ಗೆ ಸರಿಯಾದ ಅರ್ಥ ತಿಳಿಯಲು ನಿಘಂಟುಗಳನ್ನು ನೋಡಬೇಕು. ಚಿಕ್ಕ ನಿಘಂಟುಗಳ ಸಾಕ್ಷ್ಯಗಳನ್ನು ನಮ್ಮ ವಿರೋಧಿ ಮತ ಪಂಡಿತರು ಪ್ರಾಯಶಃ ತಳ್ಳುವರು. ಆದುದರಿಂದ ಎಲ್ಲದಕ್ಕಿಂತಲೂ ಹೆಚ್ಚು ಪ್ರಸಿದ್ಧಿ ಗಳಿಸಿದ, ಅಧಿಕೃತ ಮನ್ನಣೆ ಗಳಿಸಿದ ತಾಜುಲ್ ಉರೂಸ್ ಎಂಬ ನಿಘಂಟಿನ ಸಾಕ್ಷ್ಯವನ್ನು ಮುಂದಿಡುತ್ತೇವೆ. ಅದರಲ್ಲಿ ಹೀಗೆ ಬರೆದಿದೆ: **ತವಫ್ಫಾಹುಲ್ಲಾಹು ಅಝ್ಝ ವ ಜಲ್ಲ ಇಧಾ ಖಬಝ ನಫ್‌ಸಹೂ** – "ಅವನನ್ನು ಅಲ್ಲಾಹನು ತವಫ್ಫಾ ಮಾಡಿದನು ಎಂದರೆ ಅವನ ಜೀವವನ್ನು (ಆತ್ಮವನ್ನು) ಹಿಡಿದನು ಎಂದು ಅರ್ಥ." ಹೀಗೆಯೂ ಬರೆಯಲಾಗಿದೆ. **ತು ಉಫ್ಫಿಯ ಫುಲಾಲುನ್** – ಅವನನ್ನು ತವಫ್ಫಾಗೊಳಿಸಲಾಯಿತು ಎಂದರೆ **ಇಧಾಮಾತ** ಅವನು ಮೃತನಾದನು ಎಂದು ಅರ್ಥ.

ಕಶ್ಶಾಫ್ ಎಂಬ ತಫ್‌ಸೀರ್ (ಪವಿತ್ರ ಖುರ್‌ಆನಿನ ವ್ಯಾಖ್ಯಾನ) ಗ್ರಂಥದ ಲೇಖಕರಾದ ಅಲ್ಲಾಮ ಝಮಖ್‌ಶರೀ ಹೀಗೆ ಬರೆದಿರುವರು: ಮುತ್ತಫ್ಫೀಕ ಎಂದರೆ **ಮೂಮೀತುಕ ಹತ್‌ಫ ಅನ್‌ಫಿಕ** – "ನಾನು ನಿನಗೆ ಪ್ರಕೃತಿ ಸಹಜವಾದ ಮರಣವನ್ನು ನೀಡುವೆನು."

ಎಲ್ಲದಕ್ಕಿಂತಲೂ ಮಿಗಿಲಾಗಿ ಸಹೀಹ್ ಬುಖಾರಿಯಲ್ಲಿ ಹಝ್ರತ್ ಅಬ್ದುಲ್ಲಾ ಬಿನ್ ಅಬ್ಬಾಸ್‌ರವರ(ರ) ವರದಿ ಉಲ್ಲೇಖಿತವಾಗಿದೆ. ಅದರಲ್ಲಿ **ಮುತವಫ್ಫೀಕ** ಶಬ್ದದ ಅರ್ಥ **ಮುಮೀತುಕ** (ನಿನ್ನನ್ನು ಮೃತಪಡಿಸುವೆನು) ಎಂದು ಬರೆದಿದೆ. (ಬುಖಾರಿ ಕಿತಾಬುತ್ತಫ್‌ಸೀರ್).

ಪವಿತ್ರ ಖುರ್‌ಆನಿನ ಅಧ್ಯಾಯ 3 ವಚನ 56ರಲ್ಲಿ ಬಳಸಲಾದ ಮುತವಫ್ಫೀಕ ಪದದ ಅರ್ಥ "ನಾನು ನಿನ್ನನ್ನು ಮೃತಪಡಿಸುವೆನು" ಎಂದೇ ಆಗಿದೆ. ಆದರೆ ತವಫ್ಫಾ ಎಂಬ ಪದದ ಮೂಲ ಅರ್ಥ ಆತ್ಮವನ್ನು ಹಿಡಿಯುವುದು ಎಂದಾಗಿರುವುದರಿಂದ ನಿದ್ರೆಯಲ್ಲಿ ಆತ್ಮವನ್ನು ಹಿಡಿದುಕೊಳ್ಳುವ ಅರ್ಥದಲ್ಲೂ ಪವಿತ್ರ ಖುರ್‌ಆನಿನಲ್ಲಿ ಬಳಸಲಾಗಿದೆ. ಆದರೆ ಈ ಅರ್ಥ ನೀಡಬೇಕಾದರೆ ಸೂಚಕ ಪದವು ಇರಬೇಕಾಗಿದೆ. ಉದಾಹರಣೆಗೆ, ನಿದ್ರೆ ಎಂಬ ಪದ ಇರುವ ಕಾರಣ ನಿದ್ರೆಯಲ್ಲಿ ಆತ್ಮವನ್ನು ತಾತ್ಕಾಲಿಕ ಹಿಡಿದಿಡುವಿಕೆಯನ್ನು ಸೂಚಿಸುತ್ತದೆ. ಆದರೆ ಇಂತಹ ಸೂಚಕ ಪದ ಇಲ್ಲದೆ ಇರುವಾಗ ಅಲ್ಲಾಹನು ಕರ್ತೃವೂ ಮನುಷ್ಯನು ಕರ್ಮವೂ ಆಗಿರುವಾಗ ಯಾವಾಗಲೂ ಅದರ ಅರ್ಥ ಮೃತಪಡಿಸುವುದು ಎಂದೇ ಆಗಿದೆ. ಅಹ್ಮದಿಯಾ ಜಮಾಅತಿನ ಸ್ಥಾಪಕರು ಪಂಥಾಹ್ವಾನ ನೀಡಿದ್ದಾರೆ. ಪವಿತ್ರ ಖುರ್‌ಆನ್, ಹದೀಸ್ ಅಥವಾ ಯಾವುದಾದರೂ ಅಂಗೀಕೃತ ಅರಬಿ ಗ್ರಂಥದಲ್ಲಿ ಅಲ್ಲಾಹನು ಕರ್ತೃವೂ ಮನುಷ್ಯನು ಕರ್ಮವೂ ಆಗಿರುವಾಗ ತವಫ್ಫಾ ಪದದ ಅರ್ಥ ಆತ್ಮವನ್ನು ಹಿಡಿಯುವುದರ ಹೊರತು ಬೇರೇನಾದರೂ ಆಗಿದ್ದರೆ ತೋರಿಸಿಕೊಡಲಿ ಎಂದು ಹೇಳಿದ್ದಾರೆ. ಇಂದಿನ ತನಕ ಯಾರೇ ವಿರೋಧಿ ಮತ ಪಂಡಿತ ಇದಕ್ಕೆ ಉತ್ತರ ನೀಡಿಲ್ಲ.

ಪವಿತ್ರ ಖುರ್‌ಆನಿನ ಈ ವಚನ ಸಹ ಮುತವಫ್ಫೀಕ ಪದದ ಅರ್ಥವನ್ನು ಸ್ಪಷ್ಟಪಡಿಸುತ್ತದೆ. ಏಕೆಂದರೆ ಮುತವಫ್ಫೀಕ ಪದದ ಅರ್ಥ ಪೂರ್ಣವಾಗಿ ಎತ್ತಿಕೊಳ್ಳುವುದು ಎಂದಾದರೆ ರಾಫಿಉಕ ನಿನ್ನನ್ನು ಎತ್ತುವೆನು ಎಂದು ಬೇರೆಯೇ ಹೇಳಿದುದು ಏಕೆ? ಈ ವಚನದಲ್ಲಿ ರಾಫಿಉಕ ಎಂಬ ಶಬ್ದವು ಮುತವಫ್ಫೀಕ ಶಬ್ದದಿಂದ ಪ್ರತ್ಯೇಕವಾದ ಅರ್ಥ ಕೊಡುತ್ತದೆ ಎಂದು ದೃಢವಾದ ಸಾಕ್ಷ್ಯ ನೀಡುತ್ತದೆ.

ಪವಿತ್ರ ಖುರ್‌ಆನಿನ ಇನ್ನೊಂದು ವಚನ ಹೀಗಿದೆ: **ಇಮ್ಮಾ ನುರಿಯನ್ನಕ ಬಅಝಲ್ಲಧೀ ನ ಇದುಹುಮ್ ಅವ್ ನತವಫ್ಫಯನ್ನಕ** – "ನಾವು ಅವರಿಗೆ ಮುನ್ನೆಚ್ಚರಿಕೆ ನೀಡುತ್ತಿರುವ (ಶಿಕ್ಷೆಗಳಲ್ಲಿ) ಕೆಲವನ್ನು (ನಿನ್ನ ಜೀವಮಾನದಲ್ಲೇ) ನಾವು ನಿನಗೆ ತೋರಿಸಿ ಕೊಟ್ಟರೆ, ಅಥವಾ (ಅದಕ್ಕಿಂತ ಮುಂಚೆಯೇ) ನಿನ್ನನ್ನು ಮೃತಪಡಿಸಿದರೆ." (10: 47).

ಇನ್ನೊಂದು ವಚನ ಹೀಗಿದೆ: **ರಬ್ಬನಾ ಅಫ್‌ರಿಗ್ ಅಲೈನಾ ಸಬ್‌ರನ್ ವ ತವಫ್ಫನಾ ಮುಸ್ಲಿಮೀನ್** – "ನಮ್ಮ ಪ್ರಭೂ, ನೀನು ನಮಗೆ ಸ್ಥಿರಚಿತ್ತವನ್ನು ದಯಪಾಲಿಸು; ನಾವು ನಿನಗೆ ವಿಧೇಯರಾಗಿದ್ದುಕೊಂಡಿರುವ ಸ್ಥಿತಿಯಲ್ಲಿಯೇ ನೀನು ನಮಗೆ ಮರಣವನ್ನು ಕೊಡು." (7: 127).

ಒಟ್ಟಾರೆ ಹೇಳುವುದಾದರೆ, ತವಫ್ಫಾ ಪದದ ಬಗ್ಗೆ ಜಗಳ ಮಾಡುವುದು ಹಟಮಾರಿತನದ ಪರಮಸೀಮೆಯಾಗಿದೆ. ಇನ್ನೊಂದು ಆಶ್ಚರ್ಯಕರವಾದ ವಿಷಯವೇನೆಂದರೆ, ಯಾರಾದರೊಬ್ಬನ ಬಗ್ಗೆ ತವಫ್ಫಾ ಶಬ್ದ ಬಳಸಿದರೆ ಅದರ ಅರ್ಥ ಮರಣ ಎಂದೇ ಹೇಳುತ್ತಾರೆ. ಆದರೆ ಹಝ್ರತ್ ಈಸಾ ಮಸೀಹರ(ಅ) ಬಗ್ಗೆ ಈ ಪದ ಬಳಸಿದರೆ ಕೂಡಲೇ ಆಕಾಶಕ್ಕೆ ಎತ್ತಲ್ಪಟ್ಟರೆಂದು ಹೇಳುತ್ತಾರೆ. ಸರ್ವಶ್ರೇಷ್ಠ ಪ್ರವಾದಿ ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಈ ಪದ ಬಳಸಿದರೆ ಅದರ ಅರ್ಥ ಮರಣ ಎಂದೇ ಆಗಿರುತ್ತದೆ. ಆದರೆ ಹಝ್ರತ್ ಈಸಾ ಮಸೀಹ್(ಅ) ಬಗ್ಗೆ ಈ ಪದ ಬಳಸಿದರೆ ಅದರ ಅರ್ಥ ಆಕಾಶಕ್ಕೆ ಹೋಗುವುದೇ ಆಗಿರುತ್ತದೆ! ಇದು ಎಂತಹ ಅನ್ಯಾಯಕರ ವರ್ತನೆಯಾಗಿದೆ. ಎಂತಹ ಅಭಿಮಾನಶೂನ್ಯತೆ ಇದಾಗಿದೆ. ನಊಧುಬಿಲ್ಲಾಹಿ ಮಿನ್ ಧಾಲಿಕ. ಹಾಗೆ ವರ್ತಿಸುವುದರಿಂದ ರಕ್ಷಿಸಲ್ಪಡಲು ಅಲ್ಲಾಹನ ಅಭಯವನ್ನು ಯಾಚಿಸುತ್ತೇವೆ.

♦



Yuga - January 2019 (2).pmd 26 2/19/2019, 11:34 AM

ಅಹ್ಮದಿಯರಿಗೆ ಸಂದೇಶ

## ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್

**ತಹ್‌ರೀಕ್ ಜದೀದಿನ ಸಾಂಪತ್ತಿಕ ತ್ಯಾಗ ಮಾಡಿದ ಅಹ್ಮದಿಯಾ ಜಮಾಅತ್ ಭಾರತದ ನಿಷ್ಠಾವಂತರ ಪರವಾಗಿ ಪ್ರಿಯ ಖಲೀಫರ ಪ್ರಾರ್ಥನೆಗಳನ್ನು ಒಳಗೊಂಡ ಪತ್ರ.**

ಅಲ್ಲಾಹನ ವಿಶೇಷವಾದ ಅನುಗ್ರಹ ಮತ್ತು ಕೃಪೆಯಿಂದ ಹಝ್ರತ್ ಖಲೀಫತುಲ್ ಮಸೀಹರು ನೀಡಿದ ಟಾರ್ಗಟನ್ನು ಈಡೇರಿಸಲು ಅಹ್ಮದಿಯಾ ಜಮಾಅತ್ ಭಾರತಕ್ಕೆ ಕಳೆದ ವರ್ಷದ ಹಾಗೆಯೇ ಈ ವರ್ಷವೂ ಸೌಭಾಗ್ಯ ಲಭಿಸಿದೆ. ಅಲ್‌ಹಮ್ದುಲಿಲ್ಲಾಹ್.

ವಕಾಲತ್ ತಹ್‌ರೀಕ್ ಜದೀದ್ ಸಾಹಿಬರಿಂದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸರ(ಅಯ್ಯದಹುಲ್ಲಾಹು) ಸನ್ನಿಧಿಯಲ್ಲಿ ತಹ್‌ರೀಕ್ ಜದೀದಿನ ವಾರ್ಷಿಕ ರಿಪೋರ್ಟ್ ಸಮರ್ಪಿಸಲ್ಪಟ್ಟಾಗ, ಜಮಾಅತಿನ ಎಲ್ಲ ನಿಷ್ಠಾವಂತರ ಪರವಾಗಿ ಹುಝೂರ್ ಪ್ರಾರ್ಥನೆಗಳನ್ನು ಒಳಗೊಂಡ ಪತ್ರವನ್ನು ಕಳುಹಿಸಿದರು. (WTT–5016/13.11.2018). ಅದನ್ನು ಕೆಳಗೆ ಕೊಡಲಾಗಿದೆ:

"ಸನ್ಮಾನ್ಯ ವಕೀಲುಲ್ ಮಾಲ್ ತಹ್‌ರೀಕ್ ಜದೀದ್ ಖಾದಿಯಾನ್,

**ಅಸ್ಸಲಾಮು ಅಲೈಕುಂ ವರಹ್ಮತುಲ್ಲಾಹಿ ವಬರಕಾತುಹು.**

ಅಹ್ಮದಿಯಾ ಜಮಾಅತ್ ಭಾರತದ ಚಂದಾ ತಹ್‌ರೀಕ್ ಜದೀದಿನ ವಾರ್ಷಿಕ ರಿಪೋರ್ಟ್ ಲಭಿಸಿತು. ಜಝಾಕುಮುಲ್ಲಾಹ್ (2560/01.11.18).

ಈ ವರ್ಷವೂ ಅಹ್ಮದಿಯಾ ಜಮಾಅತ್ ಭಾರತದ ನಿಷ್ಠಾವಂತರಿಗೆ ಹಿಂದಿಗಿಂತ ಹೆಚ್ಚು ಧನತ್ಯಾಗ ಮಾಡಲು ಅಲ್ಲಾಹನು ಸೌಭಾಗ್ಯ ನೀಡಿರುವನು. (ಮಾಶಾ ಅಲ್ಲಾಹ್). ಅಲ್ಲಾಹನು ಜಮಾಅತಿನ ಈ ಎಲ್ಲ ನಿಷ್ಠಾವಂತರ ಸಂಪತ್ತು ಮತ್ತು ಕುಟುಂಬಗಳಲ್ಲಿ ಅಗಣಿತ ಅನುಗ್ರಹ ಸುರಿಸಲಿ. ಅವರಿಗೆ ತಖ್ವ ಮತ್ತು ಆರಾಧನೆಯ ಕಡ್ಡಾಯ ಕರ್ತವ್ಯಗಳ ಈಡೇರಿಕೆಯಲ್ಲಿ ಸ್ಥಿರವಾಗಿರಲು ಮತ್ತು ಅಲ್ಲಾಹನ ಅನುಗ್ರಹಗಳ ಮತ್ತು ಔದಾರ್ಯಗಳ ವಾರಸುದಾರರಾಗಲು ಸೌಭಾಗ್ಯ ಲಭಿಸಲಿ. ಅಲ್ಲಾಹನ ಜಮಾಅತಿನ ಎಲ್ಲ ಸೇವಕರ ಸಕಲ ಪ್ರಯತ್ನಗಳನ್ನು ಸ್ವೀಕರಿಸಲಿ. ಮುಂದೆಯೂ ಹಿಂದೆಗಿಂತ ಹೆಚ್ಚಾಗಿ ತಮಗೆ ನೀಡಲಾದ ಕರ್ತವ್ಯಗಳನ್ನು ಸರಿಯಾಗಿ ಈಡೇರಿಸಲು ಸೌಭಾಗ್ಯ ನೀಡಲಿ. ಅಲ್ಲಾಹನು ನಿಮ್ಮೆಲರನ್ನು ಸದಾ ಸಂರಕ್ಷಿಸಲಿ, ಆಮೀನ್. ತಹ್‌ರೀಕ್ ಜದೀದಿನ ಎಲ್ಲ ಕಾರ್ಯಕರ್ತರಿಗೆ ನನ್ನ ಪ್ರೀತಿಯ ಸಲಾಂ ತಲುಪಿಸಿರಿ."

ವಸ್ಸಲಾಮ್

ವಿನೀತ

**ಖಲೀಫತುಲ್ ಮಸೀಹ್ ಖಾಮಿಸ್.**

ಚಂದಾ ತಹ್‌ರೀಕ್ ಜದೀದಿನಲ್ಲಿ ಭಾಗಿಯಾಗಿರುವ ಭಾರತದ ಎಲ್ಲ ಜಮಾಅತುಗಳ ನಿಷ್ಠಾವಂತರ ಪರವಾಗಿ ಈ ಸ್ನೇಹಭರಿತ ಪ್ರಾರ್ಥನೆಗಳು ಸ್ವೀಕರಿಸಲ್ಪಡಲಿ. ಅವರಿಗೆ ಮುಂದೆಯೂ ಈ ಪ್ರತೀಕ್ಷೆಗಳನ್ನು ಉತ್ತಮ ರೀತಿಯಲ್ಲಿ ಈಡೇರಿಸಲು ಅಲ್ಲಾಹನು ಶಕ್ತಿ ನೀಡಲಿ. ಅಲ್ಲಾಹನ ಕೃಪೆ ಮತ್ತು ಅನುಗ್ರಹಗಳನ್ನು ಪಡೆಯಲಿಕ್ಕೆ ಅರ್ಹರನ್ನಾಗಿ ಮಾಡಲಿ. ವಸ್ಸಲಾಮ್.

**ವಕೀಲುಲ್ ಮಾಲ್ ತಹ್‌ರೀಕ್ ಜದೀದ್ ಖಾದಿಯಾನ್.**


Yuga - January 2019 (2).pmd 27 2/19/2019, 11:34 AM

## ಮಂಗಳೂರು ಮಜ್ಲಿಸ್ ಅನ್ಸಾರುಲ್ಲಾಹ್ ವಾರ್ಷಿಕ ಇಜ್ತಿಮಾ

ದಿನಾಂಕ 16–8–2018ರಂದು ಮಂಗಳೂರು ಮಜ್ಲಿಸ್ ಅನ್ಸಾರುಲ್ಲಾಹ್ ಇಜ್ತಿಮಾ ಜರಗಿತು. ಬೆಳಿಗ್ಗೆ 10 ಗಂಟೆಗೆ ಮಂಗಳೂರು ಜಮಾಅತಿನ ಪ್ರೆಸಿಡೆಂಟ್ ಜನಾಬ್ ಮುಹಮ್ಮದ್ ಯೂಸುಫ್ ಸಾಹೇಬರ ಅಧ್ಯಕ್ಷತೆಯಲ್ಲಿ ಸಭೆ ಉದ್ಘಾಟಿಸಲ್ಪಟ್ಟಿತು. ಜನಾಬ್ ಅಬ್ದುಲ್ ಕರೀಂ ಸಾಹೇಬ್ ಖುರ್‌ಆನ್ ಪಠಿಸಿದರು. ಝಈಂ ಜನಾಬ್ ಬಿ.ಎಸ್. ಅಬ್ದುಲ್ ರಹೀಂ ಸಾಹೇಬ್ ಪ್ರತಿಜ್ಞೆ ಬೋಧಿಸಿದರು. ಜನಾಬ್ ತನ್ವೀರ್ ಅಖ್ತರ್ ಸಾಹೇಬ್ ನಝ್ಮ್ ಹಾಡಿದರು. ಝಈಂ ಸಾಹೇಬ್, ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸರ ಸಂದೇಶವನ್ನು ವಾಚಿಸಿದರು. ಜನಾಬ್ ಮೌಲವಿ ಶರೀಫ್ ಖಾನ್ ಸಾಹೇಬ್, ಮುಖ್ಯಾತಿಥಿಯಾಗಿ ಆಗಮಿಸಿದ ಜನಾಬ್ ಕೆ.ಕೆ. ಬದ್ರುದ್ದೀನ್ ಸಾಹೇಬ್ ಭಾಷಣ ಮಾಡಿದರು. ಅಧ್ಯಕ್ಷರ ಉಪಸಂಹಾರ ಭಾಷಣದ ನಂತರ ದುಆದೊಂದಿಗೆ ಸಭೆ ಮುಕ್ತಾಯವಾಯಿತು.

ಆ ಬಳಿಕ ಖುರ್‌ಆನ್ ಪಠನ, ನಝ್ಮ್, ಭಾಷಣ ಮೊದಲಾದ ಸ್ಪರ್ಧೆಗಳು ಜರಗಿದವು. ಅಸರ್ ನಮಾಝ್ ನಂತರ ಸಮಾರೋಪ ಸಭೆ ಝಈಂ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಜನಾಬ್ ಝಫರ್ ಅಹ್ಮದ್ ಸಾಹೇಬ್ ಖುರ್‌ಆನ್ ಪಠಿಸಿದರು. ಜನಾಬ್ ಮೌಲವಿ ಶರೀಫ್ ಖಾನ್ ಸಾಹೇಬ್ ನಝ್ಮ್ ಹಾಡಿದರು. ಝಈಂ ಸಾಹೇಬ್ ಕೃತಜ್ಞತೆ ಸಲ್ಲಿಸಿದರು. ಮ್ಯೂಸಿಕಲ್ ಚೇರ್, ಮುಷ್ಟಿ ಯುದ್ಧ, ಮೆಮರಿ ಟೆಸ್ಟ್ ಮುಂತಾದ ಸ್ಪರ್ಧೆಗಳು ಜರಗಿದವು.

ದುಆದೊಂದಿಗೆ ಸಮಾರಂಭ ಸಮಾಪ್ತವಾಯಿತು.

## ಶಹಾಪುರ ಅಹ್ಮದಿಯಾ ಮುಸ್ಲಿಂ ಜಮಾಅತಿನಿಂದ ಅನಾಥ ಮಕ್ಕಳಿಗೆ ಅಕ್ಕಿ ಹಾಗೂ ದಿನ ಬಳಕೆ ವಸ್ತುಗಳ ವಿತರಣೆ

ಶಹಾಪುರ: ದಿನಾಂಕ 24.11.2018ರಂದು "ಸೀರತುನ್ನಬೀ" ಪ್ರಯುಕ್ತ ಯಾದಗಿರಿ ಜಿಲ್ಲೆಯ ಶಹಾಪುರ ಅಹ್ಮದಿಯಾ ಮುಸ್ಲಿಂ ಜಮಾಅತ್ ಶ್ರೀಶೈಲ ಮಲ್ಲಿಕಾರ್ಜುನ "ಶಿಶುಪಾಲ ಕೇಂದ್ರ ಮತ್ತು ವೃದ್ಧಾಶ್ರಮ"ದವರೊಂದಿಗೆ ಸಂಪರ್ಕಿಸಿ ಅವರ ಬೇಡಿಕೆ ಮೇರೆಗೆ ಅನಾಥ ಮಕ್ಕಳಿಗಾಗಿ ಅಕ್ಕಿ, ಎಣ್ಣೆ, ರವಾ, ಸಕ್ಕರೆ ಹಾಗೂ ಬಾಳೆಹಣ್ಣುಗಳನ್ನು ಹಂಚಲಾಯಿತು. ಅಂತೆಯೇ ಪವಿತ್ರ ಖುರ್‌ಆನ್ "ಅನಾಥ ಮಕ್ಕಳ ಬಗ್ಗೆ ಹೊಂದಿದ ಅನುಕಂಪ" ಮತ್ತು ಪ್ರವಾದಿ ಮುಹಮ್ಮದ್‌ರವರ(ಸ) ನಡೆವಳಿಕೆ ಕುರಿತು ವಿವರಿಸಲಾಯಿತು. ಆಶ್ರಮದ ಸಂಸ್ಥಾಪಕರು ಕೃತಜ್ಞತೆಯಿಂದ ಈ ನಮ್ಮ ಕಿರು ಸೇವೆಯನ್ನು ಕೊಂಡಾಡಿದರು. ಹಾಗೆಯೇ ಮುಂದೆಯೂ ಸಹಕಾರ ನೀಡುವಂತೆ ಕೋರಿದರು. ನಾವೆಲ್ಲರೂ ಆ ಏಕೈಕ ದೇವನ ಸೃಷ್ಟಿಯಾಗಿದ್ದೇವೆ. ಅವನೇ ನಮ್ಮೆಲ್ಲರ ನಿಜವಾದ ಪಾಲಕ ಹಾಗೂ ಮಾಲಿಕ. ಜನ ಸೇವೆಯಲ್ಲಿಯೇ ಅವನನ್ನು ಕಾಣಬೇಕಾಗಿದೆ ಎಂದು ಸಂದರ್ಭೋಚಿತವಾಗಿ ಮುಹಮ್ಮದ್ ಇಸ್ಮಾಈಲ್, ನಿವೃತ್ತ ಶಿಕ್ಷಕರು ಮಾತನಾಡಿದರು. ಮಿಷನರಿ ಮೌಲ್ವಿ ಎಂ. ಮಕ್ಬೂಲ್ ಸಾಹೇಬ್, ಸದರ್ ಲಜ್ನಾ (ಮಹಿಳಾ ಅಧ್ಯಕ್ಷರು) ಹಾಜರಿದ್ದರು. ಜನಾಬ್ ಅಬ್ದುಲ್ ಗಫೂರ್ ಸಾಹೇಬ್, ಅಧ್ಯಕ್ಷರು ಈ ಕಾರ್ಯದ ನೇತೃತ್ವವನ್ನು ವಹಿಸಿದ್ದರು.

**ವರದಿ: ಮುಹಮ್ಮದ್ ಇಸ್ಮಾಈಲ್**

## ಸಾಗರ ಸಾಹಿತ್ಯ ಸಭಾದಲ್ಲಿ ಅಹ್ಮದಿಯಾ ಮುಸ್ಲಿಂ ಪುಸ್ತಕ ಮಳಿಗೆ

ಸಾಗರ: ಸಾಹಿತ್ಯ ಸಭಾ ವತಿಯಿಂದ ನವೆಂಬರ್ 23ರಿಂದ 25ರವರೆಗೆ ಏರ್ಪಡಿಸಲಾದ ಪುಸ್ತಕ ಮೇಳದಲ್ಲಿ ಅಹ್ಮದಿಯಾ ಪುಸ್ತಕ ಮಳಿಗೆಯನ್ನು ತೆರೆಯಲಾಗಿತ್ತು.

ಈ ಮಳಿಗೆಯಲ್ಲಿ ಅಹ್ಮದಿಯಾ ಜಮಾಅತ್ ವಿವಿಧ ಭಾಷೆಗಳಲ್ಲಿ ಪ್ರಕಟಿಸಿದ 30 ಖುರ್‌ಆನ್ ಅನುವಾದಗಳನ್ನು ಪ್ರದರ್ಶಿಸಲಾಗಿತ್ತು. ಮಳಿಗೆಯನ್ನು ಸಂದರ್ಶಿಸಿದ ಗಣ್ಯ ವ್ಯಕ್ತಿಗಳಿಗೆ ಅಹ್ಮದಿಯಾ ಸಾಹಿತ್ಯಗಳನ್ನು ಉಡುಗೊರೆಯಾಗಿ ನೀಡಲಾಯಿತು. ಹ್ಯುಮ್ಯಾನಿಟಿ ಫರ್ಸ್ಟ್ ವತಿಯಿಂದ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲಾಯಿತು.

ಸರಕಾರಿ ಮೈದಾನದಲ್ಲಿ ಏರ್ಪಡಿಸಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯರಿಗೆ ವೇದಿಕೆ ಮೇಲೆ ಅಹ್ಮದಿಯಾ ಸಾಹಿತ್ಯಗಳನ್ನು ಪಾರಿತೋಷಕವಾಗಿ ನೀಡಲಾಯಿತು.

ಮಳಿಗೆಯನ್ನು ಸಂದರ್ಶಿಸಿದ ಅನೇಕ ಗಣ್ಯ ವ್ಯಕ್ತಿಗಳು ಅಹ್ಮದಿಯಾ ಸಂಘಟನೆಯ ಬಗ್ಗೆ ಮೆಚ್ಚುಗೆಯನ್ನು ಸೂಚಿಸಿದರು.



Yuga - January 2019 (2).pmd 28 2/19/2019, 11:34 AM

## ಅಹ್ಮದಿಯಾ ಮುಸ್ಲಿಮ್ ಸಮಾಜದಿಂದ ರೋಗಿಗಳಿಗೆ ಹಣ್ಣು ಹಂಪಲ ವಿತರಣೆ

**ಕಲಬುರುಗಿ, ನ 10:** ರೋಗಿಗಳಿಗೆ ನೆರವಾಗುವುದು ಹಾಗೂ ಅವರ ಯೋಗಕ್ಷೇಮ ವಿಚಾರಿಸುವುದು ದೇವನಿಗೆ ಇಷ್ಟವಾದ ಕಾರ್ಯಗಳಲ್ಲಿ ಒಂದಾಗಿದೆ ಎಂದು ಅಹ್ಮದಿಯಾ ಮುಸ್ಲಿಮ್ ಸಮಾಜದ ನಗರಾಧ್ಯಕ್ಷ ಮೌಲ್ವಿ ಮುಹಮ್ಮದ್ ಉಮರ್‌ಸಾಬ್ ಉಸ್ತಾದ್ ಹೇಳಿದರು.

ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಮಹಿಳಾ ಘಟಕದ ಆಶ್ರಯದಲ್ಲಿ ನಗರದ ಸರ್ಕಾರಿ ಜಿಲ್ಲಾ ಅಸ್ಪತ್ರೆಯಲ್ಲಿ ಹಮ್ಮಿಕೊಂಡಿದ್ದ ರೋಗಿಗಳಿಗಾಗಿ ಹಣ್ಣು ಹಂಪಲು ವಿತರಣೆ ಹಾಗೂ ಅವರು ಗುಣಮುಖರಾಗಲು ಪ್ರಾರ್ಥನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಾನವೀಯತೆ ಮೊದಲು ಹಾಗೂ ಎಲ್ಲರೊಂದಿಗೂ ಪ್ರೀತಿ ಯಾರೊಂದಿಗೂ ದ್ವೇಷವಿಲ್ಲ ಎಂಬ ತತ್ವ ಸಿದ್ಧಾಂತದಡಿ ಈ ಸಂಘಟನೆ ವಿಶ್ವದಾದ್ಯಂತ ಕೆಲಸ ಮಾಡುತ್ತಿದ್ದು, ಸಂಘಟನೆಯ ಮಹಿಳಾ ವಿಭಾಗವು ತನ್ನ ವಾರ್ಷಿಕ ಕಾರ್ಯಸೂಚಿಯಂತೆ ಬಡ ರೋಗಿಗಳಿಗೆ ಹಣ್ಣು ಹಂಪಲಗಳನ್ನಿಂದು ಆಸ್ಪತ್ರೆಯ ಮುಖ್ಯಸ್ಥರಿಂದ ಪರವಾನಿಗೆ ಪಡೆದು ವಿತರಿಸಿರುವುದು ತುಂಬ ಸಂತಸದ ವಿಷಯ ಎಂದರು.

ಈ ಆಸ್ಪತ್ರೆಯ ಮಹಿಳಾ ಮತ್ತು ಹೆರಿಗೆ ವಿಭಾಗದ ರೋಗಿಗಳಿಗೆ ಸಂಘಟನೆಯ ವತಿಯಿಂದ ಸರಿಸುಮಾರು ಹಣ್ಣು ಹಂಪಲವುಳ್ಳ 180 ಬ್ಯಾಗ್‌ಕಿಟ್‌ಗಳನ್ನು ಅಹ್ಮದಿಯಾ ಮುಸ್ಲಿಮ್ ಮಹಿಳಾ ಘಟಕದ ಜಿಲ್ಲಾಧಕ್ಷೆ ಮಹ್‌ಮೂದಾ ಬೇಗಂ, ನಗರ ಘಟಕದ ಅಧ್ಯಕ್ಷೆ ನಾಹೇರಾ ಬೇಗಂ ಮತ್ತು ಅವರ ಸಂಗಡಿಗರು ವಿತರಿಸಿ ರೋಗಿಗಳ ಯೋಗಕ್ಷೇಮ ವಿಚಾರಿಸಿ ಅವರ ಆರೋಗ್ಯಕ್ಕಾಗಿ ಪ್ರಾರ್ಥಿಸಿದರು.

ಈ ಕಾರ್ಯಕ್ರಮದಲ್ಲಿ ಅಹ್ಮದಿಯಾ ಮುಸ್ಲಿಮ್ ಸಮಾಜದ ಜಿಲ್ಲಾ ಉಪಾಧ್ಯಕ್ಷ ಹಷ್ಮತುಲ್ಲಾ ಹೌದೋಡಿ, ಅನ್ಸಾರುಲ್ಲಾ ಘಟಕದ ಮುಖ್ಯ ಸೇವಕ ಮುಹಮ್ಮದ್ ಮುಕ್ತದಿರ್ ಲಾಡ್ಜಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು. **(ಸಂಜೆವಾಣಿ, 10–11–2018)**

## ಮಹಾತ್ಮರ ಆದರ್ಶ ಪ್ರಚಾರವೇ ಮುಖ್ಯ

**ಸಾಗರ:** ಸಮಾಜದಲ್ಲಿ ಸೌಹಾರ್ದತೆ ಬಲಗೊಳ್ಳಲು ಸರ್ವಧರ್ಮ ಸಮ್ಮೇಳನ ಸಹಕಾರಿ ಎಂದು ನಗರಸಭೆ ಸದಸ್ಯೆ ಮರಿಯಾ ಲೀಮಾ ಹೇಳಿದರು. ಇಲ್ಲಿನ ಅಹ್ಮದಿಯಾ ಮುಸ್ಲಿಂ ಜಮಾಅತ್‌ನ ಮಹಿಳಾ ಘಟಕವು ಬುಧವಾರ ಏರ್ಪಡಿಸಿದ್ದ ಎರಡನೇ ಸರ್ವಧರ್ಮ ಮಹಿಳಾ ಸಮ್ಮೇಳನ ಉದ್ದೇಶಿಸಿ ಅವರು ಮತನಾಡಿದರು. ಸಾಮರಸ್ಯ ಸಮಾಜದ ಪರಿಕಲ್ಪನೆ ಬಿತ್ತಿದ ಮಹಾತ್ಮರ ಆದರ್ಶ ಪ್ರಚಾರ ಮಾಡುವ ಅಗತ್ಯವಿದೆ. ಎಲ್ಲ ಧರ್ಮಗಳು ಧರ್ಮ ಸಹಿಷ್ಣುತೆ ಬೆಳೆಸಿಕೊಳ್ಳಬೇಕೆಂದರು.

ವಾಗ್ದೇವಿ ಸಂಗೀತ ಶಾಲೆಯ ವಿದುಷಿ ಸೀತಾ ಬಾಪಟ್ ಮಾತನಾಡಿ, ಅಹ್ಮದಿಯಾ ಮುಸ್ಲಿಂ ಸಂಘಟನೆ ಎಲ್ಲರೊಡನೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ ಎನ್ನುವ ಘೋಷ ವಾಕ್ಯದಡಿ ಸಮಾಜ ಸಂಘಟಿಸುವ ಕೆಲಸ ಮಾಡುತ್ತಿದೆ. ಪರಸ್ಪರ ಅರಿತು, ಸೌಹಾರ್ದತೆಯ ಹೆಜ್ಜೆ ಹಾಕಲು ಇಂತಹ ಯತ್ನ ಅಗತ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಅಹ್ಮದಿಯಾ ಮುಸ್ಲಿಂ ಜಮಾಅತ್ ಮಹಿಳಾ ಘಟಕ ಅಧ್ಯಕ್ಷೆ ಸೈಯದ್ ಉಲ್ಫತ್ ಉನ್ನೀಸ ಮಾತನಾಡಿದರು. ನಗರಸಭೆ ಉಪಾಧ್ಯಕ್ಷೆ ಗ್ರೇಸಿ ಡಯಾಸ್, ಸದಸ್ಯೆ ಬೀಬಿ ಫಸಿಹಾ, ಅಕ್ಕನ ಬಳಗದ ಅಧ್ಯಕ್ಷೆ ಕವಿತಾ ಜಯಣ್ಣ, ಸುರಭಿ ಮಹಿಳಾ ಸಂಘದ ಅಧ್ಯಕ್ಷೆ ರೇಣುಕಾ, ಅಮ್ತುರ್ ರಹೀಮ್ ಮುಜಹರ್ ಇತರರು ಇದ್ದರು. ಫರಹತ್ ಜಹಾನ್ ಪ್ರಾರ್ಥಿಸಿ, ರಿಹಾನ ಬೇಗಂ ಸ್ವಾಗತಿಸಿದರು. ಬುಶ್ರಾ ತಸಹೀನ್ ವಂದಿಸಿ, ಆಯಿಶಾ ಸಿದ್ದಿಕ್ ನಿರೂಪಿಸಿದರು. **(ವಿಜಯ ಕರ್ನಾಟಕ 30–11–2018)**

## ಉಚಿತ ತಪಾಸಣೆ ಚಿಕಿತ್ಸೆ ಶಿಬಿರ

**ಯಾದಗಿರಿ:** ಸಕ್ಕರೆ ಕಾಯಿಲೆ, ರಕ್ತದೊತ್ತಡದಂತಹ ಹಲವು ರೋಗಗಳನ್ನು ಬುಡದಿಂದ ನಿವಾರಿಸುವ ಶಕ್ತಿ ಹೋಮಿಯೋಪತಿ ಪದ್ಧತಿ ಚಿಕಿತ್ಸೆಗಿದೆ ಎಂದು ಶಾಸಕ ವೆಂಕಟರೆಡ್ಡಿ ಮುದ್ನಾಳ ಹೇಳಿದರು.

ನಗರದ ಚಕ್ರಕಟ್ಟೆ ಬಳಿಯ ಜೈನ್ ಸಮುದಾಯದ ಆರಾಧನಾ ಭವನದಲ್ಲಿ ಜಮಾತೆ ಅಹ್ಮದಿಯಾ ಸಂಘಟನೆಯ ಹೂಮ್ಯಾನಿಟಿ ಫಸ್ಟ್ ವಿಂಗ್‌ನಿಂದ ಹಮ್ಮಿಕೊಳ್ಳಲಾಗಿದ್ದ ಹೋಮಿಯೋಪತಿ ಪದ್ಧತಿಯ ಉಚಿತ ಚಿಕಿತ್ಸಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಆಯುಷ್ ಅಧಿಕಾರಿ ಗದಿಗೆಪ್ಪ ಮಾಯಣ್ಣವರ, ಪೌರಾಯುಕ್ತ ಸಂಗಮೇಶ ಉಪಾಸೆ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಎಂ. ಜಗದೀಶ ಹಾಗೂ ಜೈನ್ ಸಮಾಜದ ಅಧ್ಯಕ್ಷ ಪಾರಸಮಲ್, ಇಂದುಧರ ಸಿನ್ನೂರ ಪಾಲ್ಗೊಂಡಿದ್ದರು.

ಜಿಲ್ಲಾಧ್ಯಕ್ಷ ಅಸದ್ ಸುಲ್ತಾನ್ ಘೋರಿ ಅಧ್ಯಕ್ಷತೆ ವಹಿಸಿದ್ದರು. ಹುಮ್ಯಾನಿಟಿ ಫಸ್ಟ್ ಉತ್ತರ ಕರ್ನಾಟಕ ಉಸ್ತುವಾರಿ ಡಾ॥ ವಸೀಮ್ ಸಗರಿ ಅಧ್ಯಕ್ಷತೆ ವಹಿಸಿದ್ದರು. ಶಿಬಿರದಲ್ಲಿ ವೈದ್ಯ ಡಾ। ಶ್ವೇತಾ ಪಾಟೀಲ, ಡಾ। ಇಂದಿರಾ ಇತರರು ಇದ್ದರು.

**(ಉದಯವಾಣಿ, 4–12–2018)**

## ಅನಾಥಾಶ್ರಮಕ್ಕೆ ನೆರವು

ಮಂಜೇಶ್ವರ ಲಜ್ನಾ ಇಮಾಇಲ್ಲಾಹ್ (ಅಹ್ಮದಿಯಾ ಮಹಿಳಾ ಸಂಘ) ವತಿಯಿಂದ ಡಿಸೆಂಬರ್ 16ರಂದು ಮಂಗಳೂರಿನ ಭಗಿನಿ ಸಮಾಜ ಅನಾಥಾಶ್ರಮಕ್ಕೆ ನೆರವು ನೀಡಲಾಗಿದೆ.

ಸಂಘದ ಅಧ್ಯಕ್ಷೆ ಡಾ। ವಸೀಮ ಸಲಾಮ್ ನೇತೃತ್ವದಲ್ಲಿ ಸಂಘದ ಸದಸ್ಯೆಯರು ಅನಾಥಾಶ್ರಮಕ್ಕೆ ಭೇಟಿ ನೀಡಿ ಅಕ್ಕಿ, ಧಾನ್ಯ, ಹಣ್ಣುಹಂಪಲು, ತರಕಾರಿ, ಬೇಕರಿ ತಿಂಡಿಗಳು, ಐಸ್‌ಕ್ರೀಮ್, ಚಾಕಲೇಟು ಮತ್ತು ಒಂದು ಗೋಡೆ ಗಡಿಯಾರವನ್ನು ನೀಡಿದರು.

ಡಾ। ವಸೀಮ ಸಲಾಮ್ ಅಹ್ಮದಿಯಾ ಸಂಘಟನೆಯ ಕಿರು ಪರಿಚಯ ಮಾಡಿದರು. ಅಹ್ಮದಿಯಾ ಸಂಘಟನೆ ಲೋಕ ಶಾಂತಿಗಾಗಿ ಸದಾ ಪ್ರಯತ್ನಿಸುತ್ತಿದೆಯೆಂದೂ ನಿರಾಶ್ರಿತರಿಗೆ ಮತ್ತು ಬಡ ಜನರಿಗೆ ಸಹಾಯ ನೀಡುವುದು ತಮ್ಮ ಕರ್ತವ್ಯವೆಂದೂ ಅವರು ವಿವರಿಸಿದರು.

ಅಹ್ಮದಿಯಾ ಸಂಘಟನೆಯ ಮಾನವೀಯ ಸೇವೆಯನ್ನು ಅನಾಥಾಶ್ರಮದ ಇನ್‌ಚಾರ್ಜ್ ಶ್ಲಾಘಿಸಿದರು.

## ಕೊಡಗಿನಲ್ಲಿ ಹ್ಯುಮಾನಿಟಿ ಫಸ್ಟ್ ಇಂಡಿಯಾ ಸೇವೆ

ಮಡಿಕೇರಿ: ಇತ್ತೀಚೆಗೆ ಕೊಡಗಿನಲ್ಲಾದ ಪ್ರಕೃತಿ ವಿಕೋಪದಿಂದಾಗಿ ಮನೆಮಾರು ಕಳೆದುಕೊಂಡ ಸಾವಿರಾರು ಸಂತ್ರಸ್ತರ ನೆರವಿಗೆ ಅಹ್ಮದಿಯಾ ಸಂಘಟನೆಯ ಉಪ ಸಂಘಟನೆಯಾದ ಹ್ಯುಮಾನಿಟಿ ಫಸ್ಟ್ ಇಂಡಿಯಾವು ಬಂದಿತ್ತು.

ಮಡಿಕೇರಿ, ಮೈಸೂರು, ಯಾದಗಿರಿಯಿಂದ ಬಂದ ಸುಮಾರು 70ಕ್ಕೂ ಹೆಚ್ಚು ಸ್ವಯಂ ಸೇವಕರು ಮಡಿಕೇರಿಯ ತ್ಯಾಗರಾಜ ಕಾಲನಿಯ 15 ಮನೆಗಳ ರಿಪೇರಿ ಕೆಲಸ ಮಾಡಿದರು. ಕೊಡಗಿನಲ್ಲಿ ಹಾನಿ ಸಂದರ್ಭದಲ್ಲಿ 250ಕ್ಕೂ ಅಧಿಕ ಮಂದಿಗೆ ಇವರು ಆಶ್ರಯ ನೀಡಿದ್ದರು. ಈ ಸಂಸ್ಥೆಯು 2 ವರ್ಷಗಳಿಂದ ಭಾರತದಲ್ಲಿ ಕಾರ್ಯಾಚರಣೆಯಲ್ಲಿದೆ.

## ಅಹ್ಮದಿಯಾ 124ನೇ ವಾರ್ಷಿಕ ಮಹಾಸಮ್ಮೇಳನ (ಜಲ್ಸಾ ಸಾಲಾನಾ)

ಭಾರತದ ಕೇಂದ್ರಸ್ಥಾನ ಖಾದಿಯಾನಿನಲ್ಲಿ ಡಿಸೆಂಬರ್ 28,29,30ರಂದು ತ್ರಿದಿನ ಜಲ್ಸಾ ಸಾಲಾನಾ ಜರಗಿತು. ದ್ವಿತೀಯ ದಿನ ಜರಗಿದ ಸರ್ವಧರ್ಮ ಸಮ್ಮೇಳನದಲ್ಲಿ ವಿವಿಧ ಧರ್ಮಗಳ ಪ್ರತಿನಿಧಿಗಳು ಭಾಗವಹಿಸಿದರು.

ಕೊನೆಯ ದಿನದಂದು ಅಹ್ಮದಿಯಾ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹಿಬರು MTA ಮೂಲಕ ಲಂಡನಿನಿಂದ ನೇರವಾಗಿ ಪ್ರವಚನ ನೀಡಿದರು. ಹಝ್ರತ್ ಮುಹಮ್ಮದ್ ಪೈಗಂಬರ್(ಸ) ನೀಡಿದ ಸಂದೇಶ ಶಾಂತಿ ಮತ್ತು ಪ್ರೀತಿಯ ಸಂದೇಶವಾಗಿತ್ತು. ಈ ಉಪದೇಶವನ್ನು ಇಂದಿನ ಕಾಲದಲ್ಲಿ ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್(ಅ) ಲೋಕದ ಮುಂದೆ ಪುನಃ ಸಾದರಪಡಿಸಿದರು ಎಂದು ಅವರು ಹೇಳಿದರು. ಹಝ್ರತ್ ಅಹ್ಮದ್(ಅ) ಅವರಿಗೆ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಮೇಲಿದ್ದ ಪ್ರೀತಿಯನ್ನು ಖಲೀಫರು ವರ್ಣಿಸಿದರು.

ಮಾನವೀಯ ಗುಣಗಳ ಸರ್ವೋಚ್ಚ ಆದರ್ಶ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಜೀವಿತದಲ್ಲಿ ನಮಗೆ ಗೋಚರಿಸುತ್ತದೆ. ಅವರಿಗೆ ಅವತೀರ್ಣವಾದ ದಿವ್ಯ ಸಂದೇಶದಲ್ಲಿ ಲೋಕದಲ್ಲಿಡೀ ಶಾಂತಿ ಸ್ಥಾಪಿಸುವ ಉಪದೇಶವಿದೆ ಎಂದು ಅವರು ನುಡಿದರು.

ಈ ಸಮ್ಮೇಳನದಲ್ಲಿ 44 ದೇಶಗಳ ಸುಮಾರು 18 ಸಾವಿರ ಮಂದಿ ಭಾಗವಹಿಸಿದರು. ಸಮ್ಮೇಳನದ ಕೊನೆಯಲ್ಲಿ ವಿಶ್ವಶಾಂತಿಗಾಗಿ ಪ್ರಾರ್ಥಿಸಲಾಯಿತು. ಈ ಪ್ರಾರ್ಥನೆಯಲ್ಲಿ MTA ಮೂಲಕ ಲೋಕದಲ್ಲೆಡೆ ಇರುವ ಅಹ್ಮದೀ ಮುಸ್ಲಿಮರು ಭಾಗವಹಿಸಿದರು.

## ಪ್ರತಿಭೆ



ಮಡಿಕೇರಿ ಜಮಾಅತಿನ ಅಯೂಬ್ ರಾಝು, ಮುಬಶ್ಶಿರ ಅಯೂಬ್ ದಂಪತಿಯ 5 ವರ್ಷ 9 ತಿಂಗಳು ಪ್ರಾಯದ ಮಗಳು ಕಾಶಿಫ ಅಯೂಬ್ ಪವಿತ್ರ ಖುರ್‌ಆನ್ ಓದಿ ಮುಗಿಸಿ ಆಮೀನ್ ಮಾಡಿದ್ದಾರೆ. ಮಾಶಾಅಲ್ಲಾಹ್.



Yuga - January 2019 (2).pmd 30 2/19/2019, 11:34 AM

# ಮಡಿಕೇರಿ ಆಕಾಶವಾಣಿಯಿಂದ "ಸೀರತುಲ್‌ನ್ನಬೀ" ಭಾಷಣ
# ಮಡಿಕೇರಿ ಲಜ್ನಾ ಇಮಾಇಲ್ಲಾಹ್ (ಅಹ್ಮದಿಯಾ ಮಹಿಳಾ ಘಟಕ) ಕಾರ್ಯಕ್ರಮಗಳು

**"ಮೀಲಾದುನ್ನಬೀ"** ದಿನವನ್ನು ಪ್ರವಾದಿ ಹಝ್‌ರತ್ ಮುಹಮ್ಮದ್ ಪೈಗಂಬರರ(ಸ) ಜನ್ಮದಿನವನ್ನಾಗಿ ಆಚರಿಸುವುದನ್ನು ಕಾಣಬಹುದಾಗಿದೆ. ಆದರೆ ಇಸ್ಲಾಂ ಧರ್ಮವು ಜನ್ಮದಿನಾಚರಣೆಗೆ ಪ್ರಾಮುಖ್ಯತೆ ನೀಡುವುದಿಲ್ಲ. ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು(ಸ) ಪವಿತ್ರ ಖುರ್‌ಆನ್ ವಿವರಿಸಿದ ಪ್ರತಿಯೊಂದು ಉನ್ನತ ಪ್ರಧಾನ ಗುಣಗಳನ್ನು ಸ್ವತಃ ಕೃತಿಗಿಳಿಸಿ ಮಾದರಿ ಪುರುಷರಾಗಿ ಬಾಳಿದರು. ಒಮ್ಮೆ ಒಬ್ಬರು ಪೈಗಂಬರ್(ಸ) ಅವರ ಸ್ವಭಾವ ಗುಣಗಳ ಬಗ್ಗೆ ಪತ್ನಿ ಆಯಿಷಾ(ರ) ಅವರೊಂದಿಗೆ ವಿಚಾರಿಸಿದಾಗ ಪೈಗಂಬರ್(ಸ) ಅವರ ಸ್ವಭಾವ ಗುಣಗಳು ಪವಿತ್ರ ಖುರ್‌ಆನ್ ಪ್ರಕಾರವೇ ಆಗಿತ್ತು ಎಂದು ಅವರು ಉತ್ತರಿಸಿದರು. ಖುರ್‌ಆನ್ ಉಪದೇಶಗಳನ್ನು ಯಥಾವತ್ತಾಗಿ ತಮ್ಮ ಜೀವನದಲ್ಲಿ ಅಳವಡಿಸಿದ್ದು ಮುಹಮ್ಮದ್ ಪೈಗಂಬರರ(ಸ) ಶ್ರೇಷ್ಠತೆಗೆ ಕಾರಣವಾಗಿದೆ. ಆದ್ದರಿಂದ ಪ್ರವಾದಿ ಅವರ ಜೀವನ ಮಾದರಿ ಒಂದು ದಿನದ ಆಚರಣೆಗಷ್ಟೇ ಸೀಮಿತವಾದುದಲ್ಲ. ಬದಲಾಗಿ, ಅದು ನಮ್ಮ ಬದುಕಿನುದ್ದಕ್ಕೂ ಪಾಲಿಸಬೇಕಾದ, ಅಳವಡಿಸಬೇಕಾದ ಮಹತ್ತಾದ ಒಂದು ಉತ್ಕೃಷ್ಟ ಮಾದರಿಯಾಗಿದೆ.

ಮುಹಮ್ಮದ್ ನಬಿ(ಸ) ಅವರ ಆವಿರ್ಭಾವ ಕಾಲದಲ್ಲಿ ಮಕ್ಕ ಪಟ್ಟಣದ ನಾಗರಿಕತೆ ಅಂಧಕಾರದಲ್ಲಿ ಮುಳುಗಿತ್ತು. ಆ ಕಾಲದಲ್ಲಿ ಜನರು ಅಜ್ಞಾನದಿಂದ ಮುಳುಗಿದ್ದರು. ಕೊಲೆ, ಸುಲಿಗೆಗಳು, ಕಳ್ಳತನ, ಅಕ್ರಮ, ಅನೀತಿ, ವ್ಯಭಿಚಾರ ನಿತ್ಯ ಕರ್ಮವಾಗಿತ್ತು. ಹೆಣ್ಣು ಮಗು ಹುಟ್ಟಿದರೆ ಜೀವಂತವಾಗಿ ಹೂಳುವುದು ಅಲ್ಲಿಯ ಜನರ ನಿಯಮವಾಗಿತ್ತು. ಅಜ್ಞಾನ, ಅನಾಗರಿಕತೆ ವ್ಯಾಪಿಸಿತ್ತು. ಯಾವುದೇ ಸಾಮಾಜಿಕ ನೀತಿ ನಿಯಮಗಳನ್ನು ಆ ಸಮಾಜ ಅನುಸರಿಸುತ್ತಿರಲಿಲ್ಲ. ಎಲ್ಲ ವಿಧದ ಪಾಪ ಕೃತ್ಯಗಳು, ದುರಾಚಾರಗಳು ಅವರ ದೃಷ್ಟಿಯಲ್ಲಿ ಅಭಿಮಾನಕರವಾಗಿದ್ದು, ತಮ್ಮ ಪೂರ್ವ ಗ್ರಂಥಗಳ ನಿಯಮಗಳನ್ನು ಗಾಳಿಗೆ ತೂರಿದ್ದರು. ಅವರಲ್ಲಿ ಯಾವುದೇ ಧಾರ್ಮಿಕತೆಯ ಕುರುಹು ಕಾಣಿಸುತ್ತಿರಲಿಲ್ಲ.

ಹಿಂದೂ ಧರ್ಮದ ಗೀತೋಪದೇಶದಲ್ಲಿಯೂ ಹೀಗೆ ಹೇಳಲಾಗಿದೆ:

**ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ।**

**ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್॥**

**ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್।**

**ಧರ್ಮಸಂಸ್ಥಾಪನಾರ್ಥಾಯ ಸಮ್ಭವಾಮಿ ಯುಗೇ ಯುಗೇ॥**

ಹಝ್‌ರತ್ ಪೈಗಂಬರರು(ಸ) ಬಾಲ್ಯ ಕಾಲದಿಂದಲೇ ಸುಶೀಲರೂ ವಿದ್ವಾಂಸ ಯೋಗ್ಯರೂ ಆಗಿದ್ದರು. ಮನುಷ್ಯ ಹೃದಯದಲ್ಲಿರುವ ವಿನಯ, ಪ್ರಾಮಾಣಿಕತೆ, ಸ್ಥೈರ್ಯ, ನಿರ್ಮಲತೆ, ಭಕ್ತಿ, ಸೌಮ್ಯತೆ, ಅನುಕಂಪ, ಧೀರತೆ, ಉದಾರತೆ, ಕ್ಷಮೆ, ಸಹನೆ, ಪರೋಪಕಾರ, ಸತ್ಯಸಂಧತೆ ಎಂಬೀ ಸಹಜ ಗುಣಗಳನ್ನು ಸಂದರ್ಭೋಚಿತವಾಗಿಯೂ ವಿವೇಕಪೂರ್ಣವಾಗಿಯೂ ಪ್ರಕಟಿಸಿ ಮನುಕುಲಕ್ಕೆ ಮಾದರಿಯಾದರು. ಮಕ್ಕದ ಜನರು ಅವರಿಗೆ **ಅಲ್ ಅಮೀನ್** ಮತ್ತು **ಸಿದ್ದೀಕ್** ಎಂಬ ಬಿರುದುಗಳನ್ನು ನೀಡಿದ್ದರು. ಇದರ ಅರ್ಥ ಅತ್ಯಂತ ಪ್ರಾಮಾಣಿಕ ಹಾಗೂ ಸತ್ಯವಂತ ಎಂದು. ಹಝುರತ್ ಪೈಗಂಬರರಿಗೆ(ಸ) ನಲವತ್ತು ವರ್ಷ ವಯಸ್ಸು ಪೂರ್ಣಗೊಂಡಾಗ ಅಲ್ಲಾಹನು ಅವರನ್ನು ಲೋಕಕ್ಕೆ ಮಾರ್ಗದರ್ಶನ ನೀಡಲು ಪ್ರವಾದಿಯಾಗಿ ನೇಮಿಸಿದನು. ಹಾಗೆಯೇ ಅಲ್ಲಾಹನ ದಿವ್ಯ ಸಂದೇಶಗಳು ಅವತೀರ್ಣವಾಗತೊಡಗಿದವು– ಏಕ ದೇವನನ್ನು ಮಾತ್ರ ಆರಾಧಿಸಬೇಕು, ಮನುಷ್ಯನನ್ನು ಪ್ರೀತಿಸಬೇಕೆಂದು. ಲೋಕದಲ್ಲಿ ನ್ಯಾಯ ಮತ್ತು ಧರ್ಮವನ್ನು ಪುನಃಸ್ಥಾಪಿಸಬೇಕೆಂದು ಅವರು ಉಪದೇಶಿಸಿದರು. ಹಗಲು ರಾತ್ರಿ ಜನರ ಒಳಿತಿಗಾಗಿ ಕಾರ್ಯಮಗ್ನರಾದರು. ಹಝ್‌ರತ್ ಪೈಗಂಬರ್(ಸ) ಬಡವರ, ನಿರ್ಗತಿಕರ, ವಿಧವೆಯರ, ಅನಾಥರ, ಗುಲಾಮರ ಮತ್ತು ತುಳಿತಕ್ಕೆ ಗುರಿಯಾದವರ ಹಿತೈಷಿಯಾದರು. ಈ ಮಹತ್ತಾದ ಗುಣಗಳನ್ನು ಕಂಡಾಗ ಜನರು ಅವರ ಶಿಷ್ಯರಾದರು. ಪೈಗಂಬರರು(ಸ) ತನ್ನನ್ನು ಪೀಡಿಸಿದವರಿಗೆ ಕ್ಷಮೆ ನೀಡಿದರು. ಈ ಕಾರಣದಿಂದಲೇ ಶತ್ರುಗಳಿಗೆ ಪೈಗಂಬರರ ಮೇಲಿದ್ದ ಹಳೆಯ ದ್ವೇಷವೂ ಸ್ನೇಹವಾಗಿ ರೂಪಾಂತರಗೊಂಡಿತ್ತು.

ಹಝ್‌ರತ್ ಪೈಗಂಬರರು(ಸ) ಮಾನವ ಕುಲದ ಅರ್ಧಾಂಶವಾಗಿರುವ ಸ್ತ್ರೀ ಸಂಕುಲದ ಮೇಲೆ ಮಾಡಿದ ಉಪಕಾರಕ್ಕೆ ಸಾಟಿಯೇ ಇಲ್ಲ. ಅವರು ಮರುಭೂಮಿಯ ಆಚಾರಗಳಲ್ಲಿ ಬಂಧಿತರಾಗಿದ್ದ ಮಹಿಳೆಯರನ್ನು ವಿಮೋಚನೆಗೊಳಿಸಿದರು. ಸಮಾಜದಲ್ಲಿ ಸ್ತ್ರೀಯರಿಗೆ ಸ್ಥಾನ ನೀಡುವ ವಿಚಾರದಲ್ಲಿ ಮತ್ತು ನಿಷ್ಪಕ್ಷಪಾತ ನ್ಯಾಯ ದೊರಕಿಸಿಕೊಡುವಲ್ಲಿ ಪೈಗಂಬರರು ಬಹಳ ಶ್ರದ್ಧೆ ವಹಿಸಿದರು. ಸ್ತ್ರೀಯರಿಗೆ ಆಸ್ತಿ ಮೇಲಿನ ಹಕ್ಕು ಲಭಿಸುವಂತೆ ಮಾಡಿದರು. ಆ ಕಾಲದಲ್ಲಿ ನಡೆಯುತ್ತಿದ್ದ ಹೆಣ್ಣುಮಗುವಿನ ಹತ್ಯೆಯನ್ನು ಸಂಪೂರ್ಣವಾಗಿ ನಿಷೇಧಿಸಿದರು.



Yuga - January 2019 (2).pmd 31 2/19/2019, 11:34 AM

ವಿದ್ಯಾರ್ಜನೆ ಎಲ್ಲ ಮುಸ್ಲಿಂ ಸ್ತ್ರೀ, ಪುರುಷರಿಗೆ ಕಡ್ಡಾಯವಾಗಿದೆ. ಒಬ್ಬನಿಗೆ ಹೆಣ್ಣು ಮಕ್ಕಳಿದ್ದು ಅವರಿಗೆ ವಿದ್ಯಾಭ್ಯಾಸ ನೀಡಿ ಅವರ ಪಾಲನೆ ಪೋಷಣೆಗೆ ಕಷ್ಟಪಟ್ಟರೆ ಅಲ್ಲಾಹನು ಆತನನ್ನು ನರಕಾಗ್ನಿಯಿಂದ ಬಿಡುಗಡೆಗೊಳಿಸುವನು ಎಂದು ಅವರು ಪದೇ ಪದೇ ಬೋಧಿಸುತ್ತಿದ್ದರು.

ಅವರು ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸಿದ್ದರು. ಮದ್ಯಪಾನವನ್ನು ನಿಷೇಧಿಸಿದ್ದರು. ಗುಲಾಮರನ್ನು ವಿಮೋಚನೆಗೊಳಿಸಬೇಕೆಂದು ಅವರು ಬೋಧಿಸಿದರು. ನ್ಯಾಯದಾನಕ್ಕೆ ಆದ್ಯತೆ ನೀಡಲಾಯಿತು. ದೇಶಪ್ರೇಮವೂ ಸತ್ಯವಿಶ್ವಾಸದ ಅವಿಭಾಜ್ಯ ಅಂಗವಾಗಿದೆ ಎಂದು ಹಝ್ರತ್ ಪೈಗಂಬರರು(ಸ) ಹೇಳುತ್ತಾರೆ. ಸೃಷ್ಟಿಕರ್ತನಾದ ದೇವನನ್ನು ಪ್ರೀತಿಸುವವನು ತನ್ನ ದೇಶವನ್ನು ಪ್ರೀತಿಸಲೇಬೇಕು ಎಂಬುದು ಅವರ ಉಪದೇಶವಾಗಿದೆ. ಪ್ರವಾದಿ ಮುಹಮ್ಮದ್(ಸ) ಅವರು ಶುಚಿತ್ವದ ಕುರಿತು ವಿಶಿಷ್ಟವಾಗಿ ನಿಗಾವಹಿಸುತ್ತಿದ್ದರು. ಮಾರ್ಗದಲ್ಲಿ ಪೊದೆ ಗಿಡಗಳು, ಕಲ್ಲು ಮಣ್ಣು ಅಥವಾ ಕೊಳಕು ವಸ್ತುಗಳಿದ್ದರೆ ಅವುಗಳನ್ನು ಗಮನಿಸಿದವರು ಸ್ವತಃ ಅವುಗಳನ್ನು ದೂರ ಸರಿಸಬೇಕೆಂದು ಅವರು ಉಪದೇಶಿಸುತ್ತಿದ್ದರು. ಧಾರ್ಮಿಕ ಸೌಹಾರ್ದತೆಯ ಬಗ್ಗೆ ಅವರು ಅತ್ಯಂತ ಹೆಚ್ಚು ಒತ್ತಿ ಹೇಳುತ್ತಿದ್ದರು. ಇದಕ್ಕೆ ಸಂಬಂಧಿಸಿ ಅವರು ಸ್ವತಃ ಉನ್ನತ ಆದರ್ಶ ಗುಣಗಳನ್ನು ಪ್ರಕಟಿಸುತ್ತಿದ್ದರು. ಒಮ್ಮೆ ನಜ್‌ರಾನಾದ ಕ್ರೈಸ್ತರ ಒಂದು ನಿಯೋಗ ಹಝ್ರತ್ ಪೈಗಂಬರರೊಂದಿಗೆ(ಸ) ಧಾರ್ಮಿಕ ವಿಚಾರ ವಿನಿಮಯಕ್ಕೆಂದು ಬಂದಿದ್ದರು. ಮಸೀದಿಯಲ್ಲಿ ದೀರ್ಘ ಸಮಯದವರೆಗೆ ವಿಚಾರ ವಿನಿಮಯ ನಡೆಯಿತು. ಆ ಸಂದರ್ಭದಲ್ಲಿ ಕ್ರೈಸ್ತ ತಂಡದ ಫಾದರ್ ಹೇಳಿದರು: ನಾವು ಪ್ರಾರ್ಥನೆ ಮಾಡುವ ಹೊತ್ತಾಗಿದೆ. ನಾವು ಹೊರಗೆ ಹೋಗಿ ಪ್ರಾರ್ಥನೆ ಸಲ್ಲಿಸಿ ಬರುತ್ತೇವೆ. ಆಗ ಪ್ರವಾದಿ ಮುಹಮ್ಮದ್(ಸ) ಅವರ ತಂಡದೊಂದಿಗೆ, ನೀವು ಹೊರಗೆ ಹೋಗುವ ಅಗತ್ಯವೇನಿದೆ? ನಮ್ಮ ಮಸೀದಿಯಲ್ಲಿ ನಿಮ್ಮ ಪ್ರಾರ್ಥನೆ ಮಾಡಿರಿ. ನಮ್ಮ ಮಸೀದಿ ಏಕದೇವನನ್ನು ಸ್ಮರಿಸುವುದಕ್ಕಾಗಿಯೇ ನಿರ್ಮಿಸಲ್ಪಟ್ಟಿದೆ ಎಂದು ಹೇಳಿ ಅವರಿಗೆ ಪ್ರಾರ್ಥಿಸಲು ಅನುವು ಮಾಡಿ ಉದಾತ್ತ ಗುಣವನ್ನು ಮೆರೆದರು. ಮುಹಮ್ಮದ್ ನಬಿ(ಸ) ಅವರ ಈ ತರಹದ ಸದ್ಗುಣಗಳಿಂದ ಆಕರ್ಷಿತರಾದ ಅಧಿಕಾಂಶ ಜನರು ದೇವ ನಿಯುಕ್ತರಾದ ಸತ್ಯ ಪುರುಷರಿಗಲ್ಲದೆ ಇಂತಹ ಸದ್ಗುಣಗಳನ್ನು ಪ್ರದರ್ಶಿಸಲು ಸಾಧ್ಯವಿಲ್ಲವೆಂದು ಸಾಕ್ಷ್ಯ ವಹಿಸಿದ್ದರು. ಅವರ ಶೋಭಾಯಮಾನವಾದ ಜೀವನದಲ್ಲಿ ಪ್ರತಿಬಿಂಬಿತವಾಗದ ಲೋಕದ ಯಾವುದೇ ಮಾನವೀಯ ಮಹಾನ್ ಗುಣ ಇಲ್ಲವೆಂದು ಹೇಳಬಹುದು. ತನ್ನ ಬದುಕಿನಲ್ಲಿ ತೀರಾ ಸರಳ ಹಾಗೂ ಸಾಮಾನ್ಯ ವ್ಯಕ್ತಿಯಾಗಿ ಬಾಳಿ ಹೋದರು. ಅವರ ಬದುಕು ಮಾನವ ರಾಶಿಗೆ ಉತ್ಕೃಷ್ಟ ಮಾದರಿಯಾಗಿದೆ. ಪ್ರವಾದಿ ಮುಹಮ್ಮದ್(ಸ) ಮಾನವ ಜೀವ ಕೋಟಿಗಳ ಸಾಕಾರ ಪ್ರೇಮ, ಶ್ರೇಷ್ಠ ಗುಣಗಳ ಖಣಿ. ತಾವು ಬೋಧಿಸಿದ್ದನ್ನು ಸ್ವತಃ ಆಚರಿಸಿ ತೋರಿಸಿದ ಧೀಮಂತ ವ್ಯಕ್ತಿ. ಅವರ ಸಂದೇಶವು ಸಾರ್ವಜನಿಕ ಹಾಗೂ ಸಾರ್ವಕಾಲಿಕ.

ವಿಶ್ವ ವಿಖ್ಯಾತ ವಿಶ್ವಕೋಶ Britannica Encyclopedia ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಕುರಿತು ಈ ರೀತಿ ಉಲ್ಲೇಖಿಸಿದೆ: Of all the prophets and religious personalities Muhammad was most successful. "ಎಲ್ಲ ಪ್ರವಾದಿಗಳು ಮತ್ತು ಧಾರ್ಮಿಕ ನಾಯಕರಿಗೆ ಹೋಲಿಸಿದರೆ ಅತ್ಯಂತ ವಿಜಯಶಾಲಿಯಾದವರು ಮುಹಮ್ಮದ್ ಆಗಿರುತ್ತಾರೆ." ಖ್ಯಾತ ಚಿಂತಕರಾದ ಬರ್ನಾರ್ಡ್ ಶಾ ಪೈಗಂಬರರನ್ನು ಮಾನವ ಕುಲದ ವಿಮೋಚಕ ಎಂದೇ ಕರೆದಿದ್ದಾರೆ.

ಪ್ರವಾದಿ ಮುಹಮ್ಮದ್(ಸ) ಮಾನವ ಕುಲಕ್ಕೆ ನೀಡಿದ ಅತ್ಯುತ್ತಮವಾದ ಉಪದೇಶಗಳನ್ನು ಅನುಸರಿಸುವುದರ ಮೂಲಕ ಸಚ್ಚಾರಿತ್ರವಂತರಾಗಿ ಶಾಂತಿ ಸಮಾಧಾನದಿಂದ ತಮ್ಮ ಸಹಜೀವಿಗಳೊಂದಿಗೆ ಬಾಳಿ ಬದುಕುವುದು ನಮ್ಮ ಜೀವನದ ಗುರಿಯಾಗಲಿ. ಇದೇ ನಾವು "ಸೀರತುನ್ನಬೀ" ದಿನದಂದು ಆಚರಿಸುವ ನಿಜವಾದ ಆಚರಣೆ. ಧನ್ಯವಾದಗಳು. ♦

**(ಓದಿದವರು : ಬಾಸಿತ ಅನ್ಸಾರ್)**

---

# "ದೇಶಪ್ರೇಮ (ಧಾರ್ಮಿಕ) ವಿಶ್ವಾಸದ ಅಂಶವಾಗಿದೆ"

**–ಹಝ್ರತ್ ಮುಹಮ್ಮದ್ ಪೈಗಂಬರ್(ಸ)**



Yuga - January 2019 (2).pmd 32 2/19/2019, 11:34 AM

## ನಿಧನ ವಾರ್ತೆಗಳು

## ಸಾಹಿಬ್‌ಝಾದ ಮಿರ್ಝಾ ಅನಸ್ ಅಹ್ಮದ್ ಸಾಹಿಬ್

ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ಅವರ ಹಿರಿಯ ಪುತ್ರ ಮಿರ್ಝಾ ಅನಸ್ ಅಹ್ಮದ್ ಸಾಹಿಬ್ ತನ್ನ 81ನೇ ವರ್ಷ ಪ್ರಾಯದಲ್ಲಿ 18-12-2018ರಂದು ರಬ್‌ವದಲ್ಲಿ ನಿಧನ ಹೊಂದಿದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.") ಅವರು ಹಝ್ರತ್ ಮುಸ್ಲಿಹ್ ಮೌಊದ್(ರ) ಅವರ ಎಲ್ಲರಿಗಿಂತ ಹಿರಿಯ ಮೊಮ್ಮಗನಾಗಿದ್ದರು. ಅವರು ಹಝ್ರತ್ ನವಾಬ್ ಮುಬಾರಕ ಬೇಗಮ್ ಸಾಹಿಬ ಮತ್ತು ನವಾಬ್ ಮುಹಮ್ಮದ್ ಅಲಿ ಖಾನ್ ಸಾಹೇಬರ ಪುತ್ರಿಯ ಮಗನೂ ಆಗಿದ್ದರು. ಈ ರೀತಿ ಅವರು ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಸೋದರ ಮಾವನ ಪುತ್ರನಾದ ಸಹೋದರನೂ ಆಗಿದ್ದರು.

ಅವರು ಪ್ರಾಥಮಿಕ ಶಿಕ್ಷಣ ಖಾದಿಯಾನ್‌ನಲ್ಲಿ ಗಳಿಸಿದರು. ಅನಂತರ ರಬ್‌ವದಲ್ಲಿ ವಿದ್ಯಾಭ್ಯಾಸ ಮುಂದುವರಿಸಿ ಪಂಜಾಬ್ ಯುನಿವರ್ಸಿಟಿಯಿಂದ ಎಂ.ಎ. ಬಿರುದು ಪಡೆದರು. ಅವರು ಸ್ವಲ್ಪ ಕಾಲ ರಬ್‌ವದ ಕಾಲೇಜಿನಲ್ಲಿ ಸೇವೆ ಸಲ್ಲಿಸಿ ಅನಂತರ ಇಂಗ್ಲೆಂಡಿನ ಆಕ್ಸ್‌ಫರ್ಡ್ ಯುನಿವರ್ಸಿಟಿಯಿಂದಲೂ ಎಂ.ಎ. ಬಿರುದು ಗಳಿಸಿದರು. 1955ರಲ್ಲಿ ಅವರು ಝಿಂದಗಿ ವಕ್ಫ್ ಮಾಡಿದರು. ಹದೀಸ್, ಫಿಲಾಸಫಿ ಮತ್ತು ಇಂಗ್ಲಿಷ್ ಸಾಹಿತ್ಯ ಬಗ್ಗೆ ಅವರು ಗಾಢವಾಗಿ ಅಧ್ಯಯನ ಮಾಡಿದ್ದರು.

ಅಲ್ಲಾಹನು ಅವರಿಗೆ ಜಮಾಅತಿನ ವಿವಿಧ ಕಚೇರಿಗಳಲ್ಲಿ 56 ವರ್ಷಗಳ ಕಾಲ ಸೇವೆ ಸಲ್ಲಿಸುವ ಭಾಗ್ಯ ನೀಡಿದನು. 1997ರಲ್ಲಿ ಅವರು ನಿವೃತ್ತರಾದರೂ ತನ್ನ ಕೊನೆಯ ಉಸಿರಿನ ತನಕ ಜಮಾಅತಿಗೆ ಸೇವೆಸಲ್ಲಿಸುತ್ತಿದ್ದರು. ಅವರು ಅನೇಕ ಉರ್ದು ಪುಸ್ತಕಗಳನ್ನು ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ. ಹಝ್ರತ್ ಮಸೀಹ್ ಮೌಊದ್(ಅ) ಅವರ ಗ್ರಂಥಗಳ ಇಂಗ್ಲಿಷ್ ಭಾಷಾಂತರ ಕೆಲಸದಲ್ಲಿ ಅವರು ಪ್ರಶಂಸಾರ್ಹ ಸೇವೆ ಸಲ್ಲಿಸಿದ್ದಾರೆ. ಅವರು ಹಝ್ರತ್ ಮಸೀಹ್ ಮೌಊದ್(ಅ) ಅವರ ಗ್ರಂಥಗಳನ್ನು ಹದಿನೈದು-ಹದಿನಾರು ವರ್ಷ ಪ್ರಾಯದಲ್ಲಿ ಓದಿ ಮುಗಿಸಿದ್ದರು. ಹದೀಸು ಗ್ರಂಥಗಳ ಬಹಳ ಉತ್ತಮ ಮತ್ತು ಬೆಲೆಬಾಳುವ ಸಂಗ್ರಹ ಅವರ ಲೈಬ್ರರಿಯಲ್ಲಿತ್ತು.

ಅಲ್ಲಾಹನು ಅವರಿಗೆ ರಹಮ್, ಮಗ್‌ಫಿರತ್ ಮತ್ತು ಜನ್ನತ್ ದಯಪಾಲಿಸಲಿ – ಆಮೀನ್.



## ಜನಾಬ್ ಪಿ.ಕೆ. ಉ



ಮಡಿಕೇರಿ ಅಹ್ಮದಿಯಾ ಜಮಾಅತಿನ ಮಾಜಿ ಅಧ್ಯಕ್ಷ ಜನಾಬ್ ... 2019 ಜನವರಿ ದಿನಾಂಕ 9ರಂದು ತನ್ನ ಎಪ್ಪತ್ತಮೂರನೆಯ ವಯಸ್ಸಿನಲ್ಲಿ ನಿಧನ ಹ... **ಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**) ಮೃತರು ಮಡಿಕೇರಿಯಲ್ಲಿ ಅಹ್ಮದಿಯಾ ಜ... ದ ಪ್ರಥಮ ಗುಂಪಿನ ಅಹ್ಮದಿಯರಲ್ಲಿ ಒಬ್ಬರಾದ ಜನಾಬ್ ಪಿ. ಕುಞ್ಞಾಲಿ ಸಾಹಿಬರ ಪುತ್ರರಲ್ಲಿ ಹಿರಿಯರಾಗಿದ್ದರು. ಅವರ ಪತ್ನಿ ಬುಶ್ರ ಸಾಹಿಬ ಮಂಜೇಶ್ವರದ ಪ್ರಥಮ ಅಹ್ಮದಿ ಜನಾಬ್ ಎಂ. ಅಬ್ದುರ್ರಶೀದ್ ಸಾಹಿಬರ ಕಿರಿಯ ಪುತ್ರಿಯಾಗಿದ್ದಾರೆ. ಮೃತರು ಪತ್ನಿ ಹಾಗೂ 9 ಪುತ್ರರು ಮತ್ತು 3 ಪುತ್ರಿಯರನ್ನು ಅಗಲಿ ಹೋಗಿದ್ದಾರೆ.

ಜನಾಬ್ ಪಿ.ಕೆ. ಉಮರ್ ಸಾಹಿಬರಿಗೆ ತಬ್ಲೀಗ್ ಮಾಡುವ ಬಗ್ಗೆ ಬಹಳ ಉತ್ಸಾಹವಿತ್ತು. ಅವರು ಹುಣಸೂರು, ಮೈಸೂರು ಮೊದಲಾದ ಪಟ್ಟಣಗಳಿಗೆ ತನ್ನ ಸ್ನೇಹಿತರು ಮತ್ತು ಮೌಲ್ವಿಗಳೊಂದಿಗೆ ಅನೇಕ ಸಾರಿ ಪ್ರಯಾಣ ಮಾಡಿ ತಬ್ಲೀಗ್ ಮಾಡಿದ್ದರು. ಅವರ ಪ್ರಯತ್ನದ ಫಲವಾಗಿ ಕೆಲವರು ಬೈಅತ್ ಮಾಡಿದ್ದರು. ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಅಧ್ಯಯನ ಮಾಡುವ ಆಸಕ್ತಿ ಬಹಳ ಇತ್ತು.

ಅವರು "ಯುಗರಶ್ಮಿ"ಯ ಹಿತೈಷಿಯೂ ಆಗಿದ್ದು ಆದಿ ಕಾಲದಲ್ಲಿ ಕೆಲವು ಸಲ ಧನ ಸಹಾಯ ಮಾಡಿದ್ದರು.

ಅಲ್ಲಾಹನು ಅವರಿಗೆ ಮಗ್‌ಫಿರತನ್ನೂ ಜನ್ನತನ್ನೂ ದಯಪಾಲಿಸಲಿ. ಅವರ ಪತ್ನಿ, ಪುತ್ರರು, ಪುತ್ರಿಯರು ಮತ್ತು ಬಂಧುಬಾಂಧವರಿಗೆ ಸಹನೆಯನ್ನು ಕರುಣಿಸಲಿ – ಆಮೀನ್.



Yuga - January 2019 (2).pmd 33 2/19/2019, 11:34 AM

**ಸವಿ ನೆನಪು**

## ಜನಾಬ್ ಪಿ.ಕೆ. ಉಮರ್ ಸಾಹಿಬ್, ಮಡಿಕೇರಿ

**ಕಷ್ಟದಲ್ಲಿರುವಾಗ ಮಂದಹಾಸ ಬೀರಬಲ್ಲವರು, ಯಾತನೆಯಿಂದ ಶಕ್ತಿಯನ್ನು ಸಂಚಯಿಸುವವರು, ಚಿಂತನೆಯಿಂದ ಧೈರ್ಯವನ್ನು ಹೊಂದುವವರು, ದೃಢಚಿತ್ತದಿಂದ ತಮ್ಮ ಮನಸ್ಸಾಕ್ಷಿ ಅಂಗೀಕರಿಸುವ ಕರ್ಮಗಳನ್ನು ಮಾಡುವವರು, ತಮ್ಮ ತತ್ವಗಳನ್ನು ಮೃತರಾಗುವ ತನಕ ಅವಲಂಬಿಸುವವರು ಮೃತನಾದ ನಂತರ ಸಹ ಜೀವಿಸುವವರಾಗಿರುತ್ತಾರೆ.**

ಮಡಿಕೇರಿಯ ದಿವಂಗತ ಜನಾಬ್ ಪಿ.ಕೆ ಉಮರ್ ಸಾಹಿಬ್ ಅವರು ಅಂತಹ ಒಬ್ಬ ಮಹನೀಯರಾಗಿದ್ದರು. ಹಾಗಾಗಿ ಅವರು ಮೃತರಾದ ನಂತರ ಸಹ ಜೀವಿಸಿರುವವರಾಗಿದ್ದಾರೆ. 2019 ಜನವರಿ ದಿನಾಂಕ 9ರಂದು ಬುಧವಾರ ಸಂಭವಿಸಿದ ಅವರ ನಿಧನ ಅವರು ಬಿಟ್ಟು ಹೋದ ಅವರ ಸ್ನೇಹಿತರಲ್ಲಿಯೂ ಅವರ ಕುಟುಂಬದಲ್ಲಿಯೂ ದೊಡ್ಡ ಶೂನ್ಯತೆಯನ್ನು ಸೃಷ್ಟಿಸಿದೆ. ಅವರು ಇತ್ತೀಚೆಗಿನ ತನಕ ಮಡಿಕೇರಿಯ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಬಲಿಷ್ಠವಾದ ಆಧಾರ ಸ್ತಂಭಗಳಲ್ಲಿ ಒಬ್ಬರಾಗಿದ್ದರು.

ತಮ್ಮ ಜೀವಿತದ ಅಂತಿಮ ಕಾಲಘಟ್ಟದಲ್ಲಿ ರೋಗ ಬಾಧಿತರಾಗಿದ್ದ ಕಾರಣ, ಅವರಿಗೆ ಜಮಾಅತಿನ ಚಟುವಟಿಕೆಗಳಲ್ಲಿ ಸ್ವತಃ ಸಕ್ರಿಯವಾಗಿ ಭಾಗವಹಿಸಲು ಸಾಧ್ಯವಾಗುತ್ತಿರಲಿಲ್ಲವಾದರೂ ಅವರು ತಮ್ಮ ರೋಗ ಶಯ್ಯೆಯಲ್ಲಿ ಮಲಗಿ MTA ಮೂಲಕ ಜಮಾಅತಿನ ಬೆಳವಣಿಗೆಯ ಬಗ್ಗೆ ತಿಳಿಯುತ್ತಾ ಇದ್ದರು ಮತ್ತು ಅವರನ್ನು ಸಂದರ್ಶಿಸುವವರಿಂದಲೂ ಜಮಾಅತಿನ ಪ್ರಗತಿ ಬಗ್ಗೆ ವಿಚಾರಿಸುತ್ತಿದ್ದರು.

ಅವರ ಪಿತ ದಿವಂಗತ ಜನಾಬ್ ಪಿ. ಕುಞ್ಞಾಲಿ ಸಾಹಿಬರು 1951ರಲ್ಲಿ ತಮ್ಮ ಕೆಲವು ಸ್ನೇಹಿತರೊಂದಿಗೆ ಅಹ್ಮದಿಯಾ ಜಮಾಅತಿಗೆ ಪ್ರವೇಶಿಸಿ ಕಠಿಣ ವಿರೋಧವನ್ನು ಲೆಕ್ಕಿಸದೆ ಮಡಿಕೇರಿಯಲ್ಲಿ ಅಹ್ಮದಿಯಾ ಜಮಾಅತನ್ನು ಸ್ಥಾಪಿಸಿದರು. ತಮ್ಮ ಪಿತನ ಹಾಗೆ ಜನಾಬ್ ಪಿ.ಕೆ. ಉಮರ್ ಸಾಹಿಬರು ಸಹ ಮಡಿಕೇರಿಯ ಅಹ್ಮದಿಯಾ ಜಮಾಅತಿನ ಉತ್ಸಾಹಭರಿತ ಸದಸ್ಯರಾಗಿದ್ದು ಜಮಾಅತಿನ ವಿವಿಧ ಹುದ್ದೆಗಳಲ್ಲಿಯೂ ಅಧ್ಯಕ್ಷರಾಗಿಯೂ ದೀರ್ಘಕಾಲ ಸೇವೆ ಸಲ್ಲಿಸಿದರು. ಹಝ್ರತ್ ವಾಗ್ದತ್ತ ಮಸೀಹರ(ಅ) ಸಂದೇಶವನ್ನು ಜನರಿಗೆ ಹೆಚ್ಚು ಹೆಚ್ಚಾಗಿ ತಲಪಿಸಲು ಅವಿರತ ಪ್ರಯತ್ನಶೀಲರಾಗಿದ್ದರು. ಅವರ ಸಾಂಪತ್ತಿಕ ತ್ಯಾಗಗಳು ಮತ್ತು ದಣಿವಿಲ್ಲದ ತಬ್ಲೀಗ್ ಪರಿಶ್ರಮದ ಫಲಸ್ವರೂಪವಾಗಿ ಅನೇಕರು ಬೈಅತ್ ಮಾಡಿ ಜಮಾಅತಿನ ನಿಷ್ಠಾವಂತ ಸದಸ್ಯರಾದರು. ಜನಾಬ್ ಉಮರ್ ಸಾಹಿಬ್ ಮತ್ತು ಮಡಿಕೇರಿ ಜಮಾಅತಿನ ಸದಸ್ಯರ ಬಳಲಿಕೆಯಿಲ್ಲದ ತಬ್ಲೀಗ್ ಚಟುವಟಿಕೆಗಳ ಕಾರಣದಿಂದ ಮೈಸೂರಿನಲ್ಲಿಯೂ ಗೋಣಿಕೊಪ್ಪದಲ್ಲಿಯೂ ಹೊಸ ಜಮಾಅತ್‌ಗಳು ಸ್ಥಾಪಿಸಲ್ಪಟ್ಟವು.

ಜನಾಬ್ ಪಿ.ಕೆ. ಉಮರ್ ಸಾಹಿಬರ ತಂದೆಯವರು ಮೃತರಾದಾಗ, ಅಗಲಿ ಹೋದ ಅವರ ಮಕ್ಕಳ ಪಾಲನೆ ಪೋಷಣೆ ಮಾಡುವ ಹೊಣೆಗಾರಿಕೆಯನ್ನು ಹಿರಿಯ ಪುತ್ರನಾದ ಅವರು ಚಿಕ್ಕ ವಯಸ್ಸಿನಲ್ಲಿಯೇ ನಿರ್ವಹಿಸಬೇಕಾಯಿತು. ತಮ್ಮ ಕುಟುಂಬದ ವಾಣಿಜ್ಯೋದ್ಯಮಗಳನ್ನು ಮುಂದುವರಿಸಲು ಅವರು ತಮ್ಮ ವಿದ್ಯಾಭ್ಯಾಸವನ್ನು ನಿಲ್ಲಿಸಬೇಕಾಯಿತು.

ಅವರನ್ನು ಕಾಡುತ್ತಿದ್ದ ರೋಗಬಾಧೆ ಅವರನ್ನು ಶಾರೀರಿಕವಾಗಿ ದುರ್ಬಲಗೊಳಿಸುತ್ತಿದ್ದರೂ ಅವರ ಅದಮ್ಯ ಚೈತನ್ಯವನ್ನು ನಿಗ್ರಹಿಸಲು ಅಸಾಧ್ಯವಾಗಿತ್ತು.

ಮಹಾನ್ ಔದಾರ್ಯವಂತರಾಗಿದ್ದ ಅವರು ಸಂಕಷ್ಟಕ್ಕೀಡಾಗಿದ್ದ ಅನೇಕರಿಗೆ ನೆರವನ್ನು ನೀಡಿದ್ದರು. ಜಮಾಅತಿನ ಮತ್ತು ಅನ್ಯರ ಅನೇಕ ಬಡ ಹೆಣ್ಣು ಮಕ್ಕಳ ವಿವಾಹವನ್ನು ಅವರು ವ್ಯವಸ್ಥೆಗೊಳಿಸಿದ್ದರು ಮತ್ತು ಅವರ ಸಂತುಷ್ಟ ಕುಟುಂಬಗಳು ಅವರಿಗೆ ಯಾವಾಗಲೂ ಕೃತಜ್ಞತೆ ಅರ್ಪಿಸುತ್ತವೆ.

ನಾನು ಅವರನ್ನು ಭೇಟಿಯಾದಾಗಲೆಲ್ಲ ಅವರು ನಾನಿದ್ದ ಸ್ಥಳದಲ್ಲಿ ನಡೆಯುವ ತಬ್ಲೀಗ್ ಚಟುವಟಿಕೆಗಳ ಬಗ್ಗೆ ಮತ್ತು ಜಮಾಅತಿನ ಅಭಿವೃದ್ಧಿ ಬಗ್ಗೆ ವಿಚಾರಿಸುತ್ತಿದ್ದರು. ಆದರೆ ಅವರ ಉತ್ಸಾಹಭರಿತ ಆಸಕ್ತಿಯನ್ನು ಸಂತೃಪ್ತಿಗೊಳಿಸಲು ಸಾಧ್ಯವಾಗದ ಬಗ್ಗೆ ನನಗೆ ತುಂಬಾ ಮುಜುಗರವಾಗುತ್ತಿತ್ತು. ಹಿಂದಿನ ಘಟನೆಗಳನ್ನು ನೆನಪಿಸುತ್ತಾ ವ್ಯಾಕುಲತೆಯಿಂದ ಅವರ ಕಣ್ಣುಗಳು ಅಶ್ರುಭರಿತವಾಗುತ್ತಿದ್ದುವು. ಅವರು ತಮ್ಮ ಶಾರೀರಿಕ ಯಾತನೆಗಳನ್ನು ಸಹನೆಯಿಂದಲೂ ದೃಢ ಚಿತ್ತತೆಯಿಂದಲೂ ಸಹಿಸಿದರು ಮತ್ತು ಶಾಶ್ವತ ನೆನಪನ್ನು ಬಿಟ್ಟು ಹೋದರು.

ನಾವೆಲ್ಲರೂ ಮೃತರಾಗುವೆವು ಹಾಗೂ ಶಾಶ್ವತವಾಗಿ ಜೀವಿಸುವುದು ನಮ್ಮ ಉದ್ದೇಶವೂ ಅಲ್ಲ. ಆದರೆ ಜನಾಬ್ ಪಿ.ಕೆ. ಉಮರ್ ಸಾಹಿಬರಂತಹವರು ಬಿಟ್ಟುಹೋದ ಬಳುವಳಿಯನ್ನು ನಾವು ಸಹ ಮೃತರಾಗುವಾಗ ಬಿಟ್ಟುಹೋಗುವುದು ನಮ್ಮ ಧ್ಯೇಯವಾಗಿರಬೇಕು. ಅವರ ಜೀವಿತ, ಅವರ ಹೆಜ್ಜೆ ಗುರುತಿನಲ್ಲಿ ಮುಂದೆ ಸಾಗಲು ನಮಗೆ ಪ್ರೇರೇಪಣೆ ನೀಡಲಿ. ಸರ್ವಶಕ್ತನಾದ ಅಲ್ಲಾಹನು ಅವರ ಆಧ್ಯಾತ್ಮಿಕ ಪದವಿಯನ್ನು ಉನ್ನತಗೊಳಿಸಲಿ. ಅವರಿಗೆ ಕ್ಷಮೆಯನ್ನೂ ಕಾರುಣ್ಯವನ್ನೂ ದಯಪಾಲಿಸಲಿ – ಆಮೀನ್.

**ಕೆ.ಕೆ ಬದ್ರುದ್ದೀನ್**
ಬೆಂಗಳೂರು.



Yuga - January 2019 (2).pmd 34 2/19/2019, 11:34 AM

## ಕೆಂಪು ಕುಬ್ಜಗ್ರಹವನ್ನು ಕಂಡುಹಿಡಿದ ವಿಜ್ಞಾನಿಗಳು
## ಸೂರ್ಯನ ಪಕ್ಕ ಸೂಪರ್ ಅರ್ಥ್

**ಪ್ಯಾರಿಸ್,** ನ.15: ನಮ್ಮ ಸೂರ್ಯನಿಗೆ ಅತ್ಯಂತ ಸಮೀಪದಲ್ಲೊಂದು ನಕ್ಷತ್ರವಿರುವುದನ್ನು ವಿಜ್ಞಾನಿಗಳು ಕಂಡುಕೊಂಡಿದ್ದು, ಇದು ನಮ್ಮ ಭೂಮಿಗಿಂತ 3.2 ಪಟ್ಟು ದೊಡ್ಡದಾಗಿದೆ ಎಂದಿದ್ದಾರೆ. ಭೂಮಿಯಿಂದ ಕೇವಲ ಎಂಟು ಜ್ಯೋತಿರ್ವರ್ಷ ದೂರದಲ್ಲಿರುವ ಈ ಕೆಂಪು ಕುಬ್ಜಗ್ರಹ ವಿಪರೀತ ಕಡಿಮೆ ತಾಪಮಾನ ಹೊಂದಿರುವುದರಿಂದ ಇದನ್ನು ಶೀತಗಟ್ಟಿದ ನಕ್ಷತ್ರ ಎಂದು ವ್ಯಾಖ್ಯಾನಿಸಲಾಗಿದೆ. ಇದನ್ನು ಬರ್ನಾರ್ಡ್ಸ್ ಸ್ಟಾರ್ ಎಂದು ಹೆಸರಿಸಲಾಗಿದೆ. ಕೆಟಲೋನಿಯಾ ಹಾಗೂ ಸ್ಪೇನ್ ಬಾಹ್ಯಾಕಾಶ ಸಂಶೋಧನೆ ಸಂಸ್ಥೆ ಇದನ್ನು ಕಂಡುಕೊಂಡಿದೆ.

ಇದು ನಮ್ಮ ಭೂಮಿಯ ನೆರೆಹೊರೆಯಲ್ಲಿರುವ ಕಾರಣ ನಮಗೆ ಅತ್ಯಂತ ಪ್ರಮುಖವಾದದ್ದಾಗಿದೆ. ಮುಂದೊಂದು ದಿನ ಇದು ಭೂಮಿಗೆ ಇನ್ನಷ್ಟು ಸಮೀಪದಲ್ಲಿ ಕಾಣಿಸಿಕೊಳ್ಳುವ ಸಾಧ್ಯತೆಯೂ ಇದೆ ಎಂದು ಕೆಟಲೋನಿಯಾ ಸ್ಪೇಸ್ ಸ್ಟಡೀಸ್‌ನ ಸಂಶೋಧಕ ಇಗ್ನಾಸಿ ರಿಬಾಸಿ ಹೇಳಿದ್ದಾರೆ.

ಆದರೆ ಅಚ್ಚರಿಯೆಂದರೆ, ಇದು ಸೂರ್ಯನ ಬಳಿಯೇ ಇದ್ದರೂ, ಭೂಮಿಗಿಂತ ಕಡಿಮೆ ಪ್ರಮಾಣದ ಬೆಳಕು ಹಾಗೂ ಉಷ್ಣತೆಯನ್ನು ಪಡೆಯುತ್ತದೆ. ಇಲ್ಲಿ ಅಂದಾಜು ಮೈನಸ್ 170 ಡಿಗ್ರಿ ತಾಪಮಾನ ಇದೆ ಎಂದು ಹೇಳಲಾಗಿದೆ. ಹೀಗಾಗಿ ಇಲ್ಲಿ ಜೀವ ಜಂತು ಇರುವ ಸಾಧ್ಯತೆಯೇ ಇಲ್ಲ. ದ್ರವರೂಪದಲ್ಲಿ ನೀರು ಇಲ್ಲಿಲ್ಲ. ನೀರು ಇದ್ದರೂ ಅದು ಘನ ರೂಪ ಅಥವಾ ಅನಿಲ ರೂಪದಲ್ಲಿರಬಹುದು. ಈ ನಕ್ಷತ್ರವು ಗಂಟೆಗೆ 5 ಲಕ್ಷ ಕಿ.ಮೀ ವೇಗದಲ್ಲಿ ಚಲಿಸುತ್ತಿದ್ದು, ಇದನ್ನು ಬಾಹ್ಯಾಕಾಶದಲ್ಲಿ ಅತ್ಯಂತ ವೇಗವಾಗಿ ಚಲಿಸುತ್ತಿರುವ ನಕ್ಷತ್ರ ಎಂದೂ ಗುರುತಿಸಲಾಗಿದೆ. **(ಉದಯವಾಣಿ, 16–11–2018)**

## ಹೆಚ್ಚು ಮಕ್ಕಳಿದ್ದರೆ ಆಂಧ್ರದಲ್ಲಿ ಪ್ರೋತ್ಸಾಹಧನ!

ಹೈದರಾಬಾದ್, ಡಿ. 29: ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದುವ ದಂಪತಿಗೆ ಪ್ರೋತ್ಸಾಹಧನ ನೀಡಲು ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ನಿರ್ಧರಿಸಿದ್ದಾರೆ.

ಅಷ್ಟೇ ಅಲ್ಲ, ಎರಡಕ್ಕಿಂತ ಹೆಚ್ಚು ಮಕ್ಕಳಿರುವವರು ಸ್ಥಳೀಯ ಚುನಾವಣೆಯಲ್ಲಿ ಸ್ಪರ್ಧಿಸಬಾರದು ಎಂಬ ನಿಷೇಧವನ್ನೂ ತೆಗೆದುಹಾಕಲು ನಿರ್ಧರಿಸಿದ್ದಾರೆ. 10 ವರ್ಷದಲ್ಲಿ ರಾಜ್ಯದ ಜನಸಂಖ್ಯೆ ಶೇ. 1.6ರಷ್ಟು ಕುಸಿದಿದೆ. ಇದು ಭೌಗೋಳಿಕ ಅಸಮತೋಲನಕ್ಕೆ ಕಾರಣವಾಗುತ್ತಿದೆ. ಮುಂದಿನ ಎರಡು ದಶಕಗಳಲ್ಲಿ ರಾಜ್ಯದಲ್ಲಿ ಕೆಲಸ ಮಾಡಲು ಅರ್ಹ ಯುವಕರಿಗಿಂತ ವೃದ್ಧರ ಸಂಖ್ಯೆಯೇ ಹೆಚ್ಚಾಗುತ್ತದೆ ಎಂದು ನಾಯ್ಡು ಹೇಳಿದ್ದಾರೆ.

ರಾಜ್ಯದಲ್ಲಿ ಯುವಕರ ಸಂಖ್ಯೆ ಶೇ. 50 ಇದೆ. ಯುವಕರ ಸಂಖ್ಯೆ ಹೆಚ್ಚಲು ಮಕ್ಕಳ ಸಂಖ್ಯೆಯೂ ಹೆಚ್ಚಬೇಕಿದೆ ಎಂದು ಅವರು ಹೇಳಿದ್ದಾರೆ. ಯುವಕರ ಸಂಖ್ಯೆಯಲ್ಲಿ ಇಳಿಕೆಯಾಗಿರುವುದಕ್ಕೆ ಕುಟುಂಬ ಕಲ್ಯಾಣ ಯೋಜನೆಯ ಜಾರಿಯೇ ಕಾರಣವಾಗಿದೆ ಎಂಬುದು ನಾಯ್ಡು ಅಭಿಪ್ರಾಯವಾಗಿದೆ. 2011ರ ಜನಗಣತಿಯ ಪ್ರಕಾರ ಅವಿಭಜಿತ ಆಂಧ್ರಪ್ರದೇಶವು ದೇಶದಲ್ಲಿ 10ನೇ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಜ್ಯವಾಗಿತ್ತು. **(ಉದಯವಾಣಿ 30–12–2018)**

## ಕಂಡದ್ದು ಶೇ. 0.1 !

13.7 ಬಿಲಿಯ ವರ್ಷಗಳ ಹಿಂದೆ ಸೃಷ್ಟಿಯಾದ ಈ ವಿಶ್ವರೂಪದ ಶೇ. 0.1ರಷ್ಟನ್ನು ನೋಡಲು ಮಾತ್ರ ಇದುವರೆಗೆ ಸಾಧ್ಯವಾಗಿದೆ. 400 ಮಿಲಿಯ ವರ್ಷಗಳ ವರೆಗೆ ನಕ್ಷತ್ರ, ಗ್ಯಾಲಕ್ಸಿಗಳು ಇರಲಿಲ್ಲ. ಅನಂತರವೇ ಹುಟ್ಟಿದವು. ಇವು ಹುಟ್ಟುವಾಗ ಹೇಗಿತ್ತು ಎಂಬುದನ್ನು ಅರಿಯುವ ಕೆಲಸ, ಇತರ ಯಾವುದಾದರೊಂದು 'ಯುನಿವರ್ಸ್'ನ್ನು ಅರಿಯುವಲ್ಲಿ ರಾಮನ್ ಇನ್‌ಸ್ಟಿಟ್ಯೂಟ್ ಕೂಡ ಪ್ರಯತ್ನಿಸುತ್ತಿದೆ. ಈ ಉದ್ದೇಶವುಳ್ಳ ಬೇರೆ ದೇಶಗಳ ಸಂಸ್ಥೆಗಳೊಂದಿಗೆ ಕೈ ಜೋಡಿಸಿದೆ ಎಂದು ಪ್ರೊ। ಉದಯ ಶಂಕರ್ ಹೇಳಿದರು. **(ಉದಯವಾಣಿ 23–12–2018)**



Yuga - January 2019 (2).pmd 35 2/19/2019, 11:34 AM

ಆರೋಗ್ಯ

## ಕಲ್ಲುಸಕ್ಕರೆಗೂ ಇದೆ ಔಷಧೀಯ ಗುಣ

ಸಕ್ಕರೆಯನ್ನು ಹರಳುಗಟ್ಟಿಸಿ ಮಾಡುವ ಪದಾರ್ಥವೇ ಕಲ್ಲುಸಕ್ಕರೆ. ಇದರಲ್ಲಿ ಉತ್ತಮ ಪ್ರಮಾಣದ ವಿಟಮಿನ್, ಖನಿಜಗಳು ಹಾಗೂ ಅಮೈನೋ ಆಮ್ಲವಿದೆ. ಸಾಮಾನ್ಯವಾಗಿ ಮಾಂಸಾಹಾರದಲ್ಲಿ ಮಾತ್ರ ಕಂಡುಬರುವ ವಿಟಮಿನ್ ಬಿ12 ಕಲ್ಲುಸಕ್ಕರೆಯಲ್ಲಿದೆ. ಸಕ್ಕರೆಗಿಂತಲೂ ಕಲ್ಲುಸಕ್ಕರೆ ಹೆಚ್ಚು ಆರೋಗ್ಯಕರವಾಗಿದೆ.

**ಉಪಯೋಗಗಳು**

* ಕೆಮ್ಮು ಇದ್ದಾಗ ಕಲ್ಲುಸಕ್ಕರೆಯ ತುಂಡನ್ನು ಬಾಯಲ್ಲಿರಿಸಿ ನಿಧಾನವಾಗಿ ಚೀಪುವ ಮೂಲಕ ಸತತವಾಗಿರುವ ಕೆಮ್ಮು ನಿವಾರಣೆಯಾಗುವುದು.

* ಊಟದ ಬಳಿಕ ಒಂದು ಕಲ್ಲುಸಕ್ಕರೆಯನ್ನು ತಿಂದರೆ ಬಾಯಿಯಲ್ಲಿ ಅಡಕವಾಗಿರುವ ಬ್ಯಾಕ್ಟೀರಿಯಾಗಳು ಸತ್ತು ಹೋಗುತ್ತವೆ. ಜತೆಗೆ ಬಾಯಿಯ ವಾಸನೆ ಕೂಡ ಹೋಗುತ್ತದೆ. ಅಲ್ಲದೇ ದೇಹಕ್ಕೆ ಹೆಚ್ಚಿನ ಶಕ್ತಿಯನ್ನು ಒದಗಿಸುವ ಮೂಲಕ ನಮ್ಮನ್ನು ಚಟುವಟಿಕೆಯಿಂದ ಇರಲು ಸಹಾಯ ಮಾಡುತ್ತದೆ.

* ಕಲ್ಲುಸಕ್ಕರೆ ಜತೆಗೆ ಜೀರಿಗೆಯನ್ನು ಸೇವಿಸುವುದರಿಂದ ಜೀರ್ಣಶಕ್ತಿ ವೃದ್ಧಿಯಾಗುತ್ತದೆ.

* ಕಲ್ಲುಸಕ್ಕರೆಯಲ್ಲಿರುವ ಪೋಷಕಾಂಶಗಳು ಹೀಮೋಗ್ಲೋಬಿನ್ ಮಟ್ಟವನ್ನು ಹೆಚ್ಚಿಸುವ ಮೂಲಕ ರಕ್ತಹೀನತೆ, ಬಿಳಿಚಿಕೊಂಡ ಚರ್ಮ, ತಲೆಸುತ್ತುವಿಕೆ, ಸುಸ್ತು ಮೊದಲಾದ ತೊಂದರೆಗಳನ್ನು ನಿವಾರಿಸುತ್ತದೆ ಹಾಗೂ ರಕ್ತಪರಿಚಲನೆಯನ್ನೂ ಉತ್ತಮಗೊಳಿಸುತ್ತದೆ.

* ಮೂಗಿನಿಂದ ರಕ್ತ ಸುರಿಯುತ್ತಿದ್ದರೆ ತತ್‌ಕ್ಷಣವೇ ಒಂದು ತುಂಡು ಕಲ್ಲುಸಕ್ಕರೆಯನ್ನು ನೀರಿನಲ್ಲಿ ಬೆರೆಸಿ ಕುಡಿಯಬೇಕು. ಇದರಿಂದ ಕೆಲವೇ ನಿಮಿಷಗಳಲ್ಲಿ ರಕ್ತಸ್ರಾವ ನಿಲ್ಲುತ್ತದೆ.

* ಇದು ಮೆದುಳಿಗೆ ಒಂದು ನೈಸರ್ಗಿಕ ಔಷಧವಿದ್ದಂತೆ. ಸ್ಮರಣ ಶಕ್ತಿ ಹೆಚ್ಚಿಸಲು ಹಾಗೂ ಮೆದುಳಿನ ಮೇಲಿನ ಒತ್ತಡದಿಂದ ಪರಿಹಾರ ಒದಗಿಸಲು ಸಹಕಾರಿಯಾಗಿದೆ. ದೇಹದಲ್ಲಿ ಸುಸ್ತು ಆಯಾಸವಾಗಿ ನೀರಿನಾಂಶ ಕಡಿಮೆಯಿದ್ದರೆ ಕಲ್ಲುಸಕ್ಕರೆ ತಿಂದರೆ ಒಳ್ಳೆಯದು.


* ಬೆಚ್ಚಗಿನ ಹಾಲಿನಲ್ಲಿ ಕೊಂಚ ಕಲ್ಲುಸಕ್ಕರೆಯನ್ನು ಬೆರೆಸಿ ರಾತ್ರಿ ಮಲಗುವ ಮುನ್ನ ಕುಡಿಯಿರಿ. ಇದರಿಂದ ಸುಖನಿದ್ದೆ ಅವರಿಸುತ್ತದೆ ಹಾಗೂ ಸ್ಮರಣ ಶಕ್ತಿಯೂ ಹೆಚ್ಚುತ್ತದೆ.

* ಕಣ್ಣುಗಳ ದೃಷ್ಟಿ ಉತ್ತಮವಾಗಿರಲು ದಿನವಿಡೀ ಕುಡಿಯುವ ನೀರಿನಲ್ಲಿ ಕೊಂಚವೇ ಕಲ್ಲುಸಕ್ಕರೆ ಬೆರೆಸಿ ಸೇವಿಸಿ ಹಾಗೂ ಊಟದ ಬಳಿಕವೂ ಒಂದು ಲೋಟ ನೀರಿನಲ್ಲಿ ಚಿಕ್ಕ ಕಲ್ಲುಸಕ್ಕರೆಯ ತುಂಡನ್ನು ಬೆರೆಸಿ ಸೇವಿಸಬೇಕು. ♦

**ಕಾರ್ತಿಕ್ ಚಿತ್ರಾಪುರ**


**(ಉದಯವಾಣಿ 25–9–2018)**

## NEW PUBLICATIONS




**Contact :**

**NAZARAT NASHR-O-ISHA'AT**
**Sadr Anjuman Ahmadiyya**
**(Publication Department)**
**Ahmadiyya Muslim Jama'at,**
**QADIAN – 143516 (Punjab)**
**Phone: 01872-500970.**






Yuga - January 2019 (2).pmd 36 2/19/2019, 11:34 AM

**ಹಿಂದಿನ ಸಂಚಿಕೆಗಳನ್ನು ತಿರುವಿ ಹಾಕಿದಾಗ....... (ಮಾರ್ಚ್ 1981 ಸಂಚಿಕೆಯಿಂದ)**

"ಯುಗರಶ್ಮಿ"ಯನ್ನು ಓದಿ ಆನಂದಿಸುವವರಲ್ಲಿ, ಚಂದಮಾಮ ಸಂಪಾದಕರ ವಿಭಾಗದಲ್ಲಿರುವ ನಾನೊಬ್ಬನು. ಅದರಲ್ಲಿ ಹಲವಾರು ಜಿಜ್ಞಾಸೆಗೆ ಯೋಗ್ಯವಾದ ಲೇಖನಗಳು ಬುದ್ಧಿಯ ವಿಕಾಸಕ್ಕೆ ಒಳ್ಳೆಯದಿದೆ. ಈ ಸಾರಿಯ "ದೇವನ ಸೃಷ್ಟಿಕರ್ತ?" ಅಮೋಘವಾದ ಲೇಖನ. ಇನ್ನೂ ಇತರ..... ಕೇವಲ ನನ್ನ ಮೆಚ್ಚುಗೆಯನ್ನೂ ಚಂದಮಾಮದ ಪರವಾಗಿ ಕೃತಜ್ಞತೆಯನ್ನೂ ತಿಳಿಸಲು ಈ ಪತ್ರ.

**ಮದರಾಸು.** **– ಎಂ ರಂಗ ರಾವ್**

ನಾನೊಬ್ಬ ಕನ್ನಡ ಕಲಿತ ಮುಸ್ಲಿಂ ಯುವಕ, ಲೇಖಕ, ಕವಿ, ಸಂಗೀತ, ಭಾಷಣಗಳಲ್ಲಿ ಆಸಕ್ತಿ ಇರಿಸಿಕೊಂಡವ. ತಮ್ಮ ಪತ್ರಿಕೆ ಕರ್ನಾಟಕದಲ್ಲಿ ಕನ್ನಡ ಕಲಿತ ಮುಸ್ಲಿಂ ಬಾಂಧವರಿಗೆ ತುಂಬ ಉಪಯುಕ್ತ ಪತ್ರಿಕೆ. ಉರ್ದು ಬಾರದ ನಮ್ಮಂಥ ಮಹ್ಮದೀಯರಿಗೆ ನಿಮ್ಮ ಪತ್ರಿಕೆ ದಾರಿ ದೀಪ. ಅದು ಇನ್ನೂ ಹೆಚ್ಚು ಪ್ರಕಾಶಮಯವಾಗಲಿ ಎಂದು ಹಾರೈಸುವೆ.

**ಸಿಂದೊಳ್ಳಿ.** **– ಅಬ್ದುಲ್ ರಶೀದ್ ಸನದಿ**

ನಿಮ್ಮ ಪತ್ರಿಕೆಯನ್ನು ಓದುವ ಸಾವಿರಾರು ಮಂದಿಗಳಲ್ಲಿ ನಾನೂ ಒಬ್ಬ. ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಪ್ರತಿಯೊಂದು ವಿಷಯ ನನ್ನ ಮನವನ್ನು ಮೆಚ್ಚಿಸಿತು. ಮಾತ್ರವಲ್ಲ ಈ ಕಾಲಕ್ಕೆ ಅನುಕೂಲವಾಗಿಯೇ ಇದೆ. ಇಸ್ಲಾಮಿನ ಸುಂದರ ರೂಪವನ್ನು ಕರ್ನಾಟಕ ಜನತೆಗೆ ತಲುಪಿಸುವ ನಿಮ್ಮ ಹಂಬಲಕ್ಕೆ ನನ್ನ ಹೃದಯ ತುಂಬಿದ ಅಭಿನಂದನೆಗಳು.

ನಾನು ಈಗ ನಿಮ್ಮ ಪತ್ರಿಕೆಯ ಮುಂದೆ ಒಂದು ಪ್ರಾಮುಖ್ಯ ಪ್ರಶ್ನೆಯನ್ನು ಮಂಡಿಸುತ್ತೇನೆ. ಅದಕ್ಕೆ ಉತ್ತರ ನಿಮ್ಮ ಈ ಬರುವ ಪತ್ರಿಕೆಯಲ್ಲಿಯೇ ನೀಡಬೇಕಾಗಿ ವಿನಂತಿ. ಆದರೆ ಒಂದು ಶರ್ತವಿದೆ. ನೀವು ನೀಡುವ ಉತ್ತರವು ಪವಿತ್ರ ಖುರ್‌ಆನ್‌ನಿಂದ ನಿರೂಪಿಸಲ್ಪಟ್ಟಿರಬೇಕು. ಸಂಪ್ರದಾಯವಾಗಲಿ, ಚರಿತ್ರೆಯಾಗಲಿ ನನಗೆ ಅವಶ್ಯವಿಲ್ಲ. ಆ ಪ್ರಶ್ನೆ ಇದಾಗಿದೆ..... ಇಂದಿನ ಕಾಲದ ಬಹುಪಾಲು ಮುಸ್ಲಿಮರು ಮರಣ ಹೊಂದಿದ ಮಹಾತ್ಮರ ಗೋರಿಗಳನ್ನು ಅಲಂಕರಿಸಿ ಅವರನ್ನು ಕರೆದು ತಮ್ಮ ಕಾರ್ಯಸಿದ್ಧಿಗಳಿಗಾಗಿ ಪ್ರಾರ್ಥಿಸುತ್ತಿದ್ದಾರೆ. ಅವರ ಈ ಕ್ರಮಕ್ಕೆ "ಉರೂಸ್" ಎಂದು ಹೆಸರು. ಈಗೀಗ ಈ ಉರೂಸ್ ಸಮಾರಂಭಗಳು ಹೆಚ್ಚೆಚ್ಚುತ್ತಾ ಬರುತ್ತಿವೆ. ಈ ಉರೂಸ್ ಸಮಾರಂಭಗಳಿಗೂ ಪವಿತ್ರ ಇಸ್ಲಾಂ ಧರ್ಮಕ್ಕೂ ತಮ್ಮೊಳಗೆ ಏನಾದರೂ ಸಂಬಂಧವಿದೆಯೋ? ಪವಿತ್ರ ಖುರ್‌ಆನ್ ಈ ಉರೂಸ್ ಸಮಾರಂಭಗಳನ್ನು ಅನುಕೂಲಿಸುತ್ತದಾ? ಅಥವಾ ವಿರೋಧಿಸುತ್ತದಾ? ದಯಮಾಡಿ ಇದರ ಉತ್ತರವನ್ನು ನಿಮ್ಮ ಪತ್ರಿಕೆಯಲ್ಲಿ ನೀಡಿ ಚಂಚಲಿತಗೊಂಡ ನನ್ನ ಮನಸ್ಸನ್ನು ಸಂತೈಸಬೇಕಾಗಿ ಅಪೇಕ್ಷೆ.

**– ಮುಹಮ್ಮದ್ ಅಲಿ**

(ಇದೇ ಸಂಚಿಕೆಯಲ್ಲಿರುವ "ಇಸ್ಲಾಂ ಧರ್ಮ ಮತ್ತು ಉರೂಸ್" ಎಂಬ ಲೇಖನವನ್ನು ಓದಿರಿ. – ಸಂ.)

ತಮ್ಮ ಡಿಸೆಂಬರ್ ತಿಂಗಳ ಸಂಚಿಕೆಯಲ್ಲಿ ಪ್ರಕಟಿಸಿದ "ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು" ಮತ್ತು "ದೇವನ ಸೃಷ್ಟಿಕರ್ತ" ಎಂಬ ಲೇಖನ ಕತ್ತಲಲ್ಲಿ ಸಾಗಿದವನಿಗೆ ದಾರಿ ದೀಪಗಳಂತೆ ಮಿನುಗಿ ಮಾರ್ಗದರ್ಶಕವಾಗಿದ್ದವು. ಅದರಲ್ಲಿಯೂ ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ನಿಜಕ್ಕೂ ಬಾಳಿನ ಮುತ್ತುಗಳಂತೆ. ತಮ್ಮ ಪತ್ರಿಕೆ ರಂಜನೀಯವಾಗಿರಲು ಕಾರಣವಾದ ಪೈಗಂಬರರ ನುಡಿಮುತ್ತುಗಳನ್ನು ತಪ್ಪದೆ ಪ್ರಕಟಿಸಿರಿ. ಬಾಳನ್ನು ಸಾಗಿಸಲು ಸಹಾಯಕಾರಿಯಾದ ಮುಹಮ್ಮದ್ ಪೈಗಂಬರರ ನುಡಿಮುತ್ತುಗಳಂತೆ, ಓದಿ ಬಾಳನ್ನು ಸಾಗಿಸಲು ಸಹಾಯಕಾರಿಯಾಗಿದೆ "ಯುಗರಶ್ಮಿ".

**ಇಂಡಿ.** **–ಶಿವಾನಂದ ಬಗಲಿ**

ತಮ್ಮ "ಯುಗರಶ್ಮಿ" ತ್ರೈಮಾಸಿಕ ಜನವರಿ 81ರ ಸಂಚಿಕೆಯಲ್ಲಿ ಪ್ರಕಟವಾದ ಪ್ರತಿಯೊಂದು ಲೇಖನಗಳು ಸಮಯೋಚಿತವಾಗಿವೆ. ಓದುಗರ ಸಮಸ್ಯೆಗಳಿಗೆ ಉತ್ತರ ನೀಡುವ "ಪ್ರಶ್ನೋತ್ತರ" ವಿಭಾಗ ಪ್ರಾರಂಭಿಸಿದಲ್ಲಿ ಇನ್ನೂ ಉಪಯುಕ್ತವೆನಿಸುತ್ತದೆ. "ಯುಗರಶ್ಮಿ"ಯ ಪುಟಗಳು ಇನ್ನೂ ಅಧಿಕವಾಗಲಿ, ಹಾಗೂ ಈ "ಯುಗರಶ್ಮಿ" ಯುಗ ಯುಗಾಂತರ ಚಿರಾಯುವಾಗಿ ಬಾಳಲೆಂದು ಶುಭ ಹಾರೈಕೆ.

**–ಇಂಡಿ ರಾಮನಾಥ್**

ಜನವರಿ 81ರ ಯುಗರಶ್ಮಿಯಲ್ಲಿ ಮೂಡಿ ಬಂದ ಪೈಗಂಬರರ ನುಡಿಮುತ್ತುಗಳು ತುಂಬಾ ಅತ್ಯುತ್ತಮವಿದ್ದು ಕುತೂಹಲ ಕೆರಳಿಸುವಂತಿವೆ. ಓದುಗರ ಮನಸೆಳೆಯುವ ಈ ನುಡಿಮುತ್ತುಗಳನ್ನು ನಾನು ಎಂದೂ ಮರೆಯುವುದಿಲ್ಲ. ಪ್ರಕಟಿಸಿದ ತಮಗೆ ಧನ್ಯವಾದಗಳು.

**ಇಂಡಿ** **–ರಜನಿಕಾಂತ ಕುಂಬಾರ್**

ಅಹ್ಮದಿಯರಿಗೆ ಸುತ್ತೋಲೆ

# ತಅ್‌ಲೀಮುಲ್ ಖುರ್‌ಆನ್

ತಅ್‌ಲೀಮುಲ್ ಖುರ್‌ಆನ್ ಸಂಬಂಧಿಸಿ, ಸಯ್ಯದ್‌ನಾ ಹಝ್ರತ್ ಖಲೀಫತುಲ್ ಮಸೀಹ್ ಅಲ್‌ಖಾಮಿಸ್, ಮಜ್‌ಲಿಸ್ ಅನ್ಸಾರುಲ್ಲಾಹ್‌ದ ಸದಸ್ಯರನ್ನು ಸಂಬೋಧಿಸಿ ಹೇಳುತ್ತಾರೆ:

"ಇದಕ್ಕೆ ಸಂಬಂಧಿಸಿ ಪ್ರಯತ್ನಿಸಬೇಕೆಂದು ನಾನು ಎಲ್ಲ ಶಾಖಾ ಸಂಘಟನೆಗಳೊಂದಿಗೆ ಹೇಳುತ್ತೇನೆ. ಆದರೂ ಅನ್ಸಾರುಲ್ಲಾಹ್‌ರೊಂದಿಗೆ ವಿಶೇಷವಾಗಿ ಹೇಳುತ್ತೇನೆ. ಏಕೆಂದರೆ ಈ ಕೆಲಸದ ಹೊಣೆಗಾರಿಕೆ ಅವರಿಗೆ ನೀಡಲಾಗಿತ್ತು. ಆದ್ದರಿಂದಲೇ "ತಅ್‌ಲೀಮುಲ್ ಖುರ್‌ಆನ್" ಎಂಬ ಹೆಸರಿನ ಒಂದು ನೇತೃತ್ವ ಅವರಿಗಾಗಿ ಇದೆ. ಅನ್ಸಾರ್ ಸಹೋದರರು ಪರಿಪೂರ್ಣವಾಗಿ ಶ್ರದ್ಧೆವಹಿಸುವವರಾದರೆ, ಪ್ರತಿ ಮನೆಯಲ್ಲಿ ನಿಯತವಾಗಿ ಪವಿತ್ರ ಖುರ್‌ಆನ್ ಪಾರಾಯಣ ಮಾಡಿಸುವ ಮತ್ತು ಅದನ್ನು ಮನವರಿಕೆ ಮಾಡಿಸುವ ಕ್ಲಾಸುಗಳನ್ನು ಸಂಘಟಿಸಬಹುದು ................ ತೃತೀಯ ಖಿಲಾಫತ್ ಕಾಲದಲ್ಲಿ ಪವಿತ್ರ ಖುರ್‌ಆನ್‌ನ ಪಾಠವನ್ನು ಪ್ರಚಲಿತಗೊಳಿಸುವ ಹೊಣೆಗಾರಿಕೆ ಅನ್ಸಾರುಲ್ಲಾಹ್‌ಗೆ ನೀಡಲಾಗಿತ್ತು. ಪವಿತ್ರ ಖುರ್‌ಆನ್‌ನ ಪಾರಾಯಣದ ಕಡೆಗೆ ಗಮನ ಹರಿಸಿರಿ, ಮನೆಗಳನ್ನು ಸಹ ಅದರ ಪ್ರಕಾಶದಿಂದ ಬೆಳಗಿಸಿರಿ." (ಜುಮುಅ ಖುತ್‌ಬ 24 ಡಿಸೆಂಬರ್, 2004)

ಬಹುಮಾನ್ಯ ಮಜ್‌ಲಿಸ್ ಅನ್ಸಾರುಲ್ಲಾಹ್‌ದ ಸದಸ್ಯರೇ,

ತಮ್ಮ ಪ್ರಿಯ ಇಮಾಮರ ಧ್ವನಿಗೆ ಕಿವಿಗೊಡುತ್ತಾ, ವಖ್‌ಫೆ ಆರ್‌ಝೀಯ ಮಹತ್ತಾದ ದೈವಿಕ ಯೋಜನೆಯ ಅಡಿಯಲ್ಲಿ ಎರಡರಿಂದ ಆರು ವಾರಗಳ ವರೆಗಿನ ಸಮಯವನ್ನು ತ್ಯಾಗ ಮಾಡುತ್ತಾ ಮುಂದಕ್ಕೆ ಹೆಜ್ಜೆ ಹಾಕಿರಿ. ಪವಿತ್ರ ಖುರ್‌ಆನ್ ಪಾರಾಯಣ ಮಾಡುವ ಮತ್ತು ಮಾಡಿಸುವ ಮಹಾ ಜಿಹಾದಿನಲ್ಲಿ ಭಾಗವಹಿಸಿರಿ. ಅಲ್ಲಾಹನು ಅದರ ಸೌಭಾಗ್ಯ ದಯಪಾಲಿಸಲಿ – ಆಮೀನ್.

**– ನಝಾರತ್ ಇಸ್‌ಲಾಹ್ ವ ಇರ್ಶಾದ್ ತಅ್‌ಲೀಮುಲ್ ಖುರ್‌ಆನ್ ವಖ್‌ಫೆ ಆರ್‌ಝೀ**

ಸಂಪರ್ಕಿಸಿರಿ: 09872022708, 09417411702, 01872220861


# READ AHMADIYYA PERIODICALS

## THE REVIEW OF RELIGIONS

English Monthly

Annual Subscription : ₹. 500/-

Contact: The Editor

The Review of Religions

Mohalla Ahmadiyya,

QADIAN – 143516 (Punjab)

Telephone : +91 1872 500970

==========================================================

**BADAR** – Urdu Weekly

Annual Subscription : ₹. 550/-


Contact: The Manager

The Badar Weekly

Mohalla Ahmadiyya,

QADIAN – 143516 (Punjab)

Telephone : (0091) 94170-20616





# ಅಹ್ಮದಿಯಾ ಮುಸ್ಲಿಂ ಜಮಾಅತಿನ ವತಿಯಿಂದ ಪ್ರಕಟಿಸಲ್ಪಟ್ಟ

# ಪವಿತ್ರ ಖುರ್‌ಆನ್

ಕನ್ನಡ ಭಾಷಾಂತರ

**ಬೆಲೆ : ರೂ. 200/-**




# ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ

ಗ್ರಂಥಕರ್ತ : ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್

**ಪುಟಗಳು - 320. ಬೆಲೆ : 100/-**

## ದೊರೆಯುವ ವಿಳಾಸ


AHMADIYYA MUSLIM MISSION
No.1, 3rd Cross Road,
Wilson Garden, Bangalore - 560 027
Phone : 080 - 22246133


NAZARAT NASHR-O-ISHAAT
Sadr Anjuman Ahmadiyya
QADIAN - 143516
(PUNJAB)


National Toll Free Number : 1800 3010 2131
National Website : ahmadiyyamuslimjamaat.in
International Website : alislam.org
Email : info@ahmadiyyamuslimjamaat.in





Yuga - January 2019 (2).pmd 39 2/19/2019, 11:34 AM
















**NEW PUBLICATIONS**


**Contact:**

**NAZARAT NASHRO-ISHA'AT**

**Sadr Anjuman Ahmadiyya**

**Qadian-143516 (Punjab)**

**Phone: 01872- 500970**





ಮಂಗಳೂರು: 14–10–2018ರಂದು ಮಂಗಳೂರಿನ ಪುರಭವನದಲ್ಲಿ V4 ನ್ಯೂಸ್ ಚ್ಯಾನೆಲ್‌ನ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ "ಯುಗರಶ್ಮಿ" ಸಂಪಾದಕರಾದ ಮುಹಮ್ಮದ್ ಯೂಸುಫ್‌ರಿಗೆ ಅವರ 43 ವರ್ಷಗಳ ಸೇವೆಯನ್ನು ಗುರುತಿಸಿ ಸಂಸ್ಥೆಯ ಎಂ.ಡಿ. ಶ್ರೀ ಲಕ್ಷ್ಮಣ ಕುಂದರ್ ಅವರ ಪರವಾಗಿ ಗೌರವ ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು.


16–12–2018ರಂದು ಮಂಜೇಶ್ವರ ಲಜ್ನಾ ಇಮಾಇಲ್ಲಾಹ್ (ಅಹ್ಮದಿಯಾ ಮಹಿಳಾ ಸಂಘ) ವತಿಯಿಂದ ಮಂಗಳೂರಿನ ಭಗನಿ ಸಮಾಜ ಅನಾಥಾಶ್ರಮಕ್ಕೆ ನೆರವು ನೀಡಲಾಯಿತು.





ಮಡಿಕೇರಿ: ಕೊಡಗಿನಲ್ಲಿ ಮನೆಮಾರು ಕಳೆದುಕೊಂಡ ನೆರೆ ಸಂತ್ರಸ್ತರಿಗೆ ಅಹ್ಮದಿಯಾ ಉಪ ಸಂಘಟನೆ ಹ್ಯುಮಾನಿಟಿ ಫಸ್ಟ್ ನೆರವು ನೀಡಿತು.

ಸಾಗರ: ಸಾಹಿತ್ಯ ಸಭಾ ವತಿಯಿಂದ ನವೆಂಬರ್ 23ರಿಂದ 25ರ ವರೆಗೆ ಏರ್ಪಡಿಸಲಾದ ಪುಸ್ತಕ ಮೇಳದಲ್ಲಿ ಅಹ್ಮದಿಯಾ ಪುಸ್ತಕ ಮಳಿಗೆಯನ್ನು ತೆರೆಯಲಾಗಿತ್ತು.



Registered with the Registrar of Newspapers for India No. R.N. 27354/75
**Yugarashmi** Kannada Quarterly, **January - 2019.** Price : **Rs. 15/-**

# Ahmadiyya Muslim Community

Apps for mobile devises

Download free apps developed by Ahmadiyya Muslim Community for your iphone,ipode, and Android




**Quran**
Read the Holy Quran in easy Yassarnal Quran Font




**Conditions of Bai'at**
A pocket reference of Shara't-e-Bai'at in 7 languages



**Sermons**
Huzoor's Friday Sermons In 15 languages




**MTA**
Watch MTA Live, view Schedule and much more



**Ahmadiyya News**
Stay up to date with the Latest jama'at news

View these apps at
alislam.org/apps
or scan the QR code below




Edited and Published by Muhammad Yusuf on behalf of Jamath Ahmadiyya at 10-23-1008/1,
Ist Floor, Ansari Road, Mangalore - 575 001. Typing by : U. Basheer Ahmad
Printed at 'Karavali Printers', Azizuddin Road, Mangalore on behalf of Jubilee Printing Press, Mangalore